॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ತೇಜಸ್ವಿ ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ, ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# TEJASWI HEMAPURA

Shri Kshethra Bangaramakki
Post Gerasoppa - 581 384
Honnavara Taluk, Uttara Kannada Dist.

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು.**
ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.

ಸಂಪಾದಕರು:
**ಶ್ರೀಮತಿ ತ್ರಿವೇಣಿ**

ನಿರ್ವಾಹಕ ಸಂಪಾದಕರು:
**ವಿದ್ವಾನ್ ಎ. ಜಿ. ಹೆಗಡೆ, ಗುಡ್ಗೆ.**

ಪತ್ರಿಕಾಂತರಂಗ:
ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ.
ಶ್ರೀ ರವೀಶ, ವಕೀಲರು, ಸಾಗರ.
ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ.
ಶ್ರೀ ಶ್ರೀನಿವಾಸ, ವಕೀಲರು, ಬೆಂಗಳೂರು.
ಶ್ರೀ ಕೃಷ್ಣಮೂರ್ತಿ ಭಟ್ಟ, ಶಿವಾನಿ.
ಶ್ರೀ ಐ. ಎಸ್. ಹೆಗಡೆ, ಕಾಸರಕೋಡ.
ಶ್ರೀ ನಾಗರಾಜ್ ಶೇಟ್, ಶಿರಸಿ.
ಶ್ರೀ ಸುದೇಶ ಕಾಮತ್, ಹೊಸನಗರ.
ಶ್ರೀ ಶಾಂತಮೂರ್ತಿ ಪಿ. ಎಸ್., ಹೊಸನಗರ.
ಶ್ರೀ ಗೋಪಿ, ದಾವಣಗೆರೆ.
ಶ್ರೀ ದಿಲೀಪ್ ಶೇಟ್, ಹೊನ್ನಾವರ.
ವಿದ್ವಾನ್ ಪದ್ಯಾಣ ಗೋವಿಂದ ಭಟ್ಟ, ಹಡಿನಬಾಳ.
ಶ್ರೀ ಭೋಗಾನಂದ, ಶಿವಮೊಗ್ಗ.
ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ.
ಶ್ರೀ ಕೆ. ಮನೋಹರ್, ಬೆಂಗಳೂರು.
ಶ್ರೀ ಡಿ.ಎಂ. ಸತೀಶ್, ತುಮಕೂರು.

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ.**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ದೂರವಾಣಿ : 9480179197, 9740945126

ಮುದ್ರಕರು:
**ಬೆಂಗಳೂರು ಸುದ್ದಿ ಪ್ರಿಂಟರ್ಸ್ ಎಂಡ್ ಪಬ್ಲಿಷರ್ಸ್.**

## ಒಳಪುಟಗಳಲ್ಲಿ

ಸಚ್ಚಿಂತನ ........ 2
ಸಂಪಾದಕೀಯ ........ 3
ಯಶಸ್ವೀ ಬದುಕಿನ ಮಾರ್ಗ ಮಿಂಚು ........ 4
ಶ್ರೀಧರ ಸ್ಮರಣೆ ........ 5
ಶ್ರೀರಾಮ ಕಥಾಸಾರ ........ 5
ಸಂಪ್ರದಾಯ ........ 7
ಪರಮೇಶ್ವರನ ಇಪ್ಪತ್ತೈದು ಲೀಲೆಗಳು ........ 8
ಮಹಾಕ್ಷತ್ರಿಯ ........ 8
ಬದುಕಲೊಂದಿಷ್ಟು ಆಪ್ತಮಾತುಗಳು ........ 11
ಕಗ್ಗದ ಬೆಳಕಿನಲ್ಲಿ ........ 12
ವಚನಭಾಗವತ ........ 14
ಧರೆಗಿಳಿದ ದಿವ್ಯತೇಜ ........ 15
ಸುಂದರಕಾಂಡದ ಸೌಂದರ್ಯ ........ 17
ಸಂಗ್ರಹ ಲೇಖನ – ನಾನು ನನ್ನದು ........ 18
ಆನೋ ಭದ್ರಾಃ ಕೃತವೋಯಂತು ವಿಶ್ವತಃ ........ 18
ಔಷಧೀಯ ಸಸ್ಯ ಸಂಪತ್ತು ........ 21
ಲೇಖನ – ಸೇವೆ ........ 22
ವರದಿ ........ 23
ಪದಬಂಧ– 50 ........ 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

卐

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ತಿಂಗಳ ಕೊನೆಯ ವಾರದಲ್ಲಿ ಪತ್ರಿಕೆಯು ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಮಂಗಳೂರು ಸಮಾಚಾರ ಪತ್ರಿಕೆಯ ಸ್ಥಾಪಕರು – ಹರ್ಮನ್ ಮೋಗ್ಲಿಂಗ್

# ಆಧ್ಯಾತ್ಮಿಕತೆಯ ಸುಲಭಸಾಧ್ಯ ಮಾರ್ಗ



ಪ್ರಪಂಚದ ಎಲ್ಲ ವ್ಯಕ್ತಿಗಳಿಗೂ ಏಕಾಗ್ರತೆಯ ಸಾಮರ್ಥ್ಯವಿರುತ್ತದೆ. ಆದರೆ ಅದು ಬೇರೆ ವ್ಯಕ್ತಿಗಳ ಕಡೆ ಅಥವಾ ಆಸೆಯ ವಸ್ತುಗಳ ಕಡೆ ಹರಿಯುತ್ತದೆ. ಆಧ್ಯಾತ್ಮಿಕ ಜೀವನವನ್ನು ಅನುಸರಿಸಲು ಯಾವುದೇ ಹೊಸ ಶಕ್ತಿಯನ್ನು ಇದ್ದಕ್ಕಿದ್ದಂತೆ ಪಡೆಯಬೇಕಾಗಿಲ್ಲ. ಹಳೆಯ ಸಾಮರ್ಥ್ಯ ಮತ್ತು ಪ್ರವೃತ್ತಿಗಳನ್ನು ಭಗವನ್ಮುಖಗೊಳಿಸಬೇಕು ಅಷ್ಟೇ. ಆಗ ಪ್ರಾಪಂಚಿಕ ವ್ಯಕ್ತಿ ಆಧ್ಯಾತ್ಮಿಕ ವ್ಯಕ್ತಿಯಾಗಿ ಮಾರ್ಪಡುವನು. ನಿಜವಾದ ಭಕ್ತನ ಪ್ರಾರ್ಥನೆಯೇ ಇದು:

ಯಾಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ।
ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು॥

"ಅಜ್ಞಾನಿಗಳು ಜಗತ್ತಿನ ವಸ್ತುಗಳನ್ನು ಎಷ್ಟು ತೀವ್ರವಾಗಿ ಪ್ರೀತಿಸುತ್ತಾರೋ ಅಷ್ಟೇ ತೀವ್ರವಾಗಿ ಹೇ ಭಗವಂತ, ನಾನು ನಿನ್ನನ್ನು ಪ್ರೀತಿಸುವಂತಾಗಲಿ. ಆ ಪ್ರೀತಿಯು ಎಂದೆಂದೂ ನನ್ನ ಹೃದಯವನ್ನು ಬಿಟ್ಟು ಕದಲದೇ ಇರುವಂತಾಗಲಿ." ಹೀಗೆ ಆಧ್ಯಾತ್ಮಿಕ ವ್ಯಕ್ತಿಯು ಉನ್ನತಿಯನ್ನು ಸಾಧಿಸುತ್ತಾನೆ. ಇಲ್ಲಿ ನಮ್ಮ ಮನಸ್ಸು ಯಾವಾಗಲೂ ನಮ್ಮನ್ನು ವಂಚಿಸುತ್ತಿರುತ್ತದೆ. ಆದ್ದರಿಂದ ನಾವು ಪ್ರತಿದಿನ ಏನೇನು ಮಾಡುತ್ತೇವೋ ಅದರಲ್ಲೆಲ್ಲ ಒಂದು ನಿರ್ದಿಷ್ಟ ಶಿಸ್ತು ಅವಶ್ಯಕ. ಮನಸ್ಸನ್ನು ಹೇಗೆ ತಿದ್ದುವುದು? ಧ್ಯಾನ ಜೀವನದಲ್ಲಿ ಇದುವೇ ಒಂದು ದೊಡ್ಡ ಸಮಸ್ಯೆ. ಬೇರೆ ಬೇರೆ ವಿಚಾರಗಳು ಮನಸ್ಸಿನಲ್ಲಿ ಏಳುತ್ತ ಹೋಗುತ್ತವೆ. ನಾವು ಮನಸ್ಸನ್ನು ಶಾಂತಗೊಳಿಸಲು ಪ್ರಯತ್ನಿಸಿದಾಗಲೇ ಅದು ಹೆಚ್ಚು ವಿಕ್ಷಿಪ್ತವಾಗುತ್ತದೆ. ನಾವು ಮನಸ್ಸನ್ನು ಏಕಾಗ್ರಗೊಳಿಸಲು ಪ್ರಯತ್ನಿಸಿದ ಕೂಡಲೇ ಅದು ವಿರೋಧಿಸುತ್ತದೆ. ಅದು ಕೂಡಲೇ ಒಂದು ದೊಡ್ಡ ಸಮುದ್ರದಂತಾಗುತ್ತದೆ ಮತ್ತು ನಾವು ಅದರಲ್ಲಿ ಮುಳುಗಿಹೋಗುವ ಅಪಾಯ ಸಂಭವಿಸುತ್ತದೆ. ಬಲಯುತವಾದ ಯೋಚನಾ ಅಲೆಗಳು ಮೇಲೇಳುತ್ತವೆ. ಮತ್ತದನ್ನು ಶಾಂತಗೊಳಿಸಲು ಪ್ರಯತ್ನಿಸಿದಷ್ಟೂ ಅವು ಹೆಚ್ಚು ಬಲಯುತವಾಗುತ್ತವೆ. ಆದ್ದರಿಂದ ಪ್ರಾರಂಭದಲ್ಲಿ ಧ್ಯಾನ ಒಂದು ಪ್ರಯಾಸದ ಕೆಲಸ ಮತ್ತು ಶಾಂತಿ ಸಮಾಧಾನ ಬೆಳಕನ್ನು ನೀಡುವುದರ ಬದಲು ಆಯಾಸವನ್ನು ನೀಡುವುದು. ಆದ್ದರಿಂದ ಕ್ರಮಬದ್ಧವಾಗಿ ಹಠಹಿಡಿದು ಕುದುರೆಯನ್ನು ಪಳಗಿಸುವಂತೆ ನಾವು ಮನಸ್ಸನ್ನು ದೃಢಸಂಕಲ್ಪದಿಂದ ಪಳಗಿಸಬೇಕು. ಪ್ರತಿಯೊಂದು ವಿಷಯದಲ್ಲೂ ಒಂದು ನಿರ್ದಿಷ್ಟತೆ ಇರಬೇಕು. ಎರಡು ದೋಣಿಯಲ್ಲಿ ಕಾಲಿಡಬಾರದು. ಯಾವುದೇ ಒಂದು ನಿರ್ದಿಷ್ಟ ಮಾರ್ಗವನ್ನು ಅನುಸರಿಸಿ ಹಂತ ಹಂತವಾಗಿ ಅತ್ತಿತ್ತ ತಿರುಗದೇ ಮುಂದುವರಿಯಬೇಕು.

ದೇಹಸುಖ ಮತ್ತು ಆಸೆಗಳು ಸಾಮಾನ್ಯವಾಗಿ ನಮ್ಮ ಧಾರ್ಮಿಕ ಹಾದಿಯಲ್ಲಿ ಅಡ್ಡಬರುತ್ತವೆ. ದೇವಸ್ಥಾನಗಳಿಗೆ ಹೋಗುವುದು, ಧಾರ್ಮಿಕ ಉಪದೇಶಗಳನ್ನು ಕೇಳುವುದು ಅದು ಧರ್ಮದ ಮಾರ್ಗ. ಅನಂತರ ಮತ್ತೆ ಮನಸ್ಸಿಗೆ ಬರದಂತೆ ವರ್ತಿಸುವುದು ನಿಜವಾದ ಧರ್ಮವಲ್ಲ. ದೇವಸ್ಥಾನಗಳಿಗೆ ಹೋಗುವುದು, ಉಪದೇಶ ಕೇಳುವುದು ಇದರಿಂದ ಆಧ್ಯಾತ್ಮಿಕ ಜೀವನಕ್ಕೆ ಒಂದಿಷ್ಟು ಆಧ್ಯಾತ್ಮಿಕ ಸಾಧನೆಯಾಗುವುದು, ಎಲ್ಲ ಆಧ್ಯಾತ್ಮಿಕ ಸಾಧನೆಗೆ ಸರಿಯಾದ ಶಿಸ್ತು ಅವಶ್ಯಕ ಮತ್ತು ಸಾಧನೆ ಇಲ್ಲದೇ ನಿಜವಾದ ಧರ್ಮವಿಲ್ಲ.

ಮನಸ್ಸು ತುಂಟಕುದುರೆಯಂತೆ. ನಾವು ಕುದುರೆಯ ಮೇಲೆ ಸವಾರಿ ಮಾಡಲು ಹೋದಾಗ ಅದು ತುಂಬಾ ಚಡಪಡಿಸತೊಡಗುತ್ತದೆ. ಇಲ್ಲವೇ ಸುಮ್ಮನೆ ಮಲಗಿಬಿಡುತ್ತದೆ. ಅದು ಸ್ಥಿರತೆಯನ್ನು ಬಯಸುವುದಿಲ್ಲ. ಈ ಮನಸ್ಸೆಂಬ ತುಂಟ ಕುದುರೆಯನ್ನು ಪಳಗಿಸಲು ಕೆಲವು ನೈತಿಕ ಸಾಧನೆಗಳು ಅವಶ್ಯಕ. ಕಾಮಕಾಂಚನ ಭಾವನೆಗಳು ಪ್ರಬಲವಾಗಿರುವವರೆಗೂ ಮನಸ್ಸನ್ನು ಪಳಗಿಸಲಾಗುವುದಿಲ್ಲ. ಆದ್ದರಿಂದ ಮನಃಶುದ್ಧಿಯನ್ನು ಪಡೆಯದೆ ಧ್ಯಾನಮಾಡಲು ಪ್ರಯತ್ನಿಸಿದರೆ ದೇವರ ಬದಲು ಅಶುದ್ಧ ಭಾವನೆಗಳ ಮೇಲೆಯೇ ಮನಸ್ಸು ಏಕಾಗ್ರಗೊಳ್ಳುತ್ತದೆ. ಹೆಚ್ಚು ಕಾಲ ಉನ್ನತ ಭಾವನೆಗಳನ್ನು ಚಿಂತಿಸಲು ಉನ್ನತ ಕೇಂದ್ರಗಳು ತೆರೆಯಬೇಕು. ಇಲ್ಲಿ ಪ್ರಾರ್ಥನೆ ಮತ್ತು ಸತ್ಕಾರ್ಯಗಳ ಹಾಗೂ ಸತ್ಸಂಗ, ಸಚ್ಚಿಂತನೆಗಳ ಅವಶ್ಯಕತೆ ಬರುತ್ತದೆ.

ಹೀಗೆ ನಾವೆಲ್ಲರೂ ಲೌಕಿಕವಾಗಿ ಇದ್ದರೂ ಅಲೌಕಿಕವಾಗಿ ಬೆಳೆಯಬೇಕಾದರೆ ದೇವರು, ದೇವಸ್ಥಾನ, ಸಾಧು ಸಜ್ಜನರ ಸಂಗ, ಉಪದೇಶ, ಚಿಂತನೆ, ಧ್ಯಾನ, ಯೋಗ, ಇವೆಲ್ಲವನ್ನೂ ಸಕ್ರಿಯವಾಗಿ ಅಳವಡಿಸಿಕೊಂಡು ನಮ್ಮಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು. ಹೀಗೆ ಸುಲಭಸಾಧ್ಯ ಮಾರ್ಗದಿಂದ ಅಸಾಧ್ಯ ಸಾಧನೆಯಾದ ಆಧ್ಯಾತ್ಮಿಕತೆಯನ್ನು ಹೊಂದೋಣ.

**ಶ್ರೀ ರಾಮಸ್ಮರಣಂ**
**ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು**
**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**

# ಆಭರಣಗಳು ಬೇಕೆ? ಯಾಕೆ?

ಹಸ್ತಸ್ಯ ಭೂಷಣಂ ದಾನಂ ಸತ್ಯಂ ಕಂಠಸ್ಯಭೂಷಣಮ್।
ಶ್ರೋತ್ರಸ್ಯ ಭೂಷಣಂ ಶಾಸ್ತ್ರಂ ಭೂಷಣೈಃ ಕಿಂ ಪ್ರಯೋಜನಮ್॥ ಸುಭಾಷಿತ–ನಿತ್ಯನೀತಿ

ದಾನವೆನ್ನುವುದು ಕೈಗಳಿಗೆ ಭೂಷಣಪ್ರಾಯವಾದುದು. ಅದೇ ರೀತಿಯಲ್ಲಿ ಸತ್ಯವು ಕೊರಳಿಗೆ ಭೂಷಣಪ್ರಾಯವಾದದ್ದು. ಶಾಸ್ತ್ರಶ್ರವಣವು ಕಿವಿಗಳಿಗೆ ಭೂಷಣವಾದದ್ದು. ಅನ್ಯ ಭೂಷಣಗಳಿಂದ(ಆಭರಣಗಳಿಂದ) ಅವಶ್ಯಕತೆಯಾದರೂ ಏನು? ಪ್ರಯೋಜನವಾದರೂ ಏನು?

ಎಲ್ಲರ ಕೈಗಳೂ ಅನೇಕ ಕಾರ್ಯಗಳನ್ನು ಮಾಡುತ್ತವೆ. ಪ್ರಸ್ತುತ ಹಲವರ ಕೈಗಳು ಮಗ್ನವಾಗಿರುವುದು ಮೊಬೈಲ್‌ಗಳಲ್ಲಿ. ಗಣಕಯಂತ್ರಗಳನ್ನೂ ಕೈಗಳು ಬಿಟ್ಟಿರಲಾರವು. ಆದರೆ ಸುಭಾಷಿತಕಾರನು ಹೇಳುವುದು ದಾನವು ಮಾತ್ರ ಕೈಗೆ ಭೂಷಣವಾಗಿ ನಿಲ್ಲುತ್ತದೆ. ಅಂದರೆ ದಾನ ಮಾಡುವಾಗ ಕೈಯಿಂದಲೇ ಮಾಡುತ್ತೇವೆ, ದಾನ ಸ್ವೀಕರಿಸಿದ ಇನ್ನೊಂದು ಕೈ (ಹೃದಯ) ಸಂತೋಷಪಡುತ್ತದೆ. ಹೀಗೆ ಕೈಯಿಂದ ಇನ್ನೊಬ್ಬರಿಗೆ ನೀಡಿದ ದಾನ ಅನ್ಯರ ಕಷ್ಟ ಕಳೆಯಲು ದಾರಿಯಾಗುತ್ತದೆ. ಅನ್ಯರಿಗೆ, ತಾತ್ಕಾಲಿಕ ಪರಿಹಾರವಾಗುತ್ತದೆ. ಅನ್ಯರ ನೋವು ಕಳೆದು ಸಂತೋಷದ ವಾತಾವರಣ ಮೂಡಿಸುತ್ತದೆ. ಜೀವನದ ಸಾರ್ಥಕತೆ ದಾನದಲ್ಲಿದೆ. ದಾನ ಎನ್ನುವುದು ಕೈಗಳ ನಿಜವಾದ ಆಭರಣ. ಅನ್ಯ ಬಂಗಾರದ ಬಳೆಗಳೂ ಅಥವಾ ಉಂಗುರಗಳೋ ಅಥವಾ ಅನೇಕ ವಿಧವಾದ ಅಲಂಕಾರಗಳು ಅದು ಅಲಂಕಾರವಲ್ಲ. ನಿಜವಾದ ಆಭರಣ – ಅಲಂಕಾರ ಸದಾ ಸ್ವಲ್ಪವಾದರೂ ಯಥಾಶಕ್ತಿಯಾದರೂ ದಾನ ಮಾಡುವುದರಿಂದ, ಕೈ ತನ್ಮೂಲಕ ಹೃದಯ ಅಥವಾ ಆಯಾಜೀವಿಯ ವಾಸ್ತವಿಕ ಗೌರವಾನ್ವಿತ ಬದುಕಿನ ಆಭರಣ ದಾನವಾಗಿದೆ. ಹೀಗೆ ಅನೇಕರು ದಾನದ ಮೂಲಕ ಅನ್ಯರನ್ನು ಸದಾ ಸ್ಮರಿಸಿದರೆ, ಸದಾ ಆತ್ಮಗೌರವ ನೀಡಿದರೆ ಅದು ದಾನದ ಮೂಲಕ ಕೈಗೆ ಅಲಂಕಾರ - ಆಭರಣ.

ಕಂಠ ಎಂದರೆ ಕೊರಳು, ಈ ಕೊರಳಿನಿಂದ ಅಥವಾ ಕಂಠದಿಂದ ಧ್ವನಿಯು ಹೊರಬರುತ್ತದೆ. ಅಂದರೆ ಅದೇ ಮಾತು. ಈ ಮಾತು ಎನ್ನುವುದು ಕ್ರೂರವಾಗಿದ್ದರೆ, ಅನ್ಯರನ್ನು ದೂಷಿಸುತ್ತಿದ್ದರೆ, ಅಸತ್ಯದಿಂದ ಕೂಡಿದ್ದರೆ ಅದಕ್ಕೆ ಯಾವ ಪ್ರಯೋಜನವೂ ಇಲ್ಲ. ಕಂಠಕ್ಕೆ ಭೂಷಣವಾಗಿರುವುದು, ಆಭರಣವಾಗಿರುವುದು ಕಂಠಾಹಾರಗಳಲ್ಲ, ಅಲಂಕಾರ ಮಾಡಿಕೊಳ್ಳುವುದಲ್ಲ. ಹಾಗಿದ್ದರೆ ಯಾವುದು? ಸತ್ಯವಾದ ಮಾತು. ಸತ್ಯವಾದ ಮಾತು ಮಾತ್ರ ಎಲ್ಲರಿಗೂ ಸುಲಭಸಾಧ್ಯವಾಗುವುದಿಲ್ಲ. ವಿಘ್ನಗಳೇ ಹೆಚ್ಚು. ಅನ್ಯರ ಕೋಪಕ್ಕೆ ತುತ್ತಾದರೂ ಕೊನೆಯಲ್ಲಿ ಗೆಲ್ಲುವುದು ಸತ್ಯವೇ. ಆದ್ದರಿಂದ ಕಂಠದ ಭೂಷಣ ಆಭರಣ, ಸತ್ಯವನ್ನು ಸದಾ ಅಂತರ್ಗತವಾಗಿ ಮನಸಾರೆ ನುಡಿಯುವುದು.

ಕಿವಿ ಇರುವುದು ಕೇಳುವುದಕ್ಕಾಗಿಯೆ. ಅಂದರೆ ಹೊರಗಿನಿಂದ ಬರುವ ಶಬ್ದಗಳೆಲ್ಲ ಕಿವಿಯ ಮೇಲೆ ಬೀಳುತ್ತವೆ. ಹೀಗೆ ಕಿವಿ ಒಳ್ಳೆಯದನ್ನು ಕೆಟ್ಟದ್ದನ್ನು ಎಲ್ಲವನ್ನು ಕೇಳುತ್ತದೆ. ಆದರೆ ಸುಭಾಷಿತಕಾರನ ಪ್ರಕಾರ ಕಿವಿಗಳಿಗೆ ಭೂಷಣಪ್ರಾಯವಾದದ್ದು ಕಿವಿ ಓಲೆ ಅಲ್ಲ, ಅಥವಾ ಕಿವಿ ಧರಿಸುವ ಬಂಗಾರದ ಆಭರಣಗಳಲ್ಲ, ಅದು ಯಾವುದೆಂದರೆ ಶಾಸ್ತ್ರಶ್ರವಣ ಎನ್ನಲ್ಪಡುತ್ತದೆ. ಅಂದರೆ ಶಾಸ್ತ್ರೀಯ ವಿಚಾರಧಾರೆ ಆಳವಾದ ಜ್ಞಾನದಿಂದ ಕೂಡಿರುತ್ತದೆ. ಅಂಥವುಗಳನ್ನು ಕೇಳಲು ಸಂಸ್ಕಾರ ಬೇಕು, ತಾಳ್ಮೆ ಬೇಕು, ವಿವೇಕ ಬೇಕು ಅಥವಾ ಅಗಾಧ ಪರಿಕಲ್ಪನೆ ಮತ್ತು ಸತ್ ಶಾಸ್ತ್ರೀಯ ವಿಚಾರದತ್ತ ಸತ್ ಚಿಂತನೆಯತ್ತ ಕೇಳುವ ಶ್ರವಣಶಕ್ತಿ ಬೇಕು ಅಂದಾಗ ಮಾತ್ರ ಸಾಧ್ಯ. ಅದುವೇ ಕಿವಿಗಳಿಗೆ ಭೂಷಣ. ಹೀಗೆ ಶಾಸ್ತ್ರ ಕೇಳುವ ಸಂಸ್ಕಾರ, ಒಳಿತನ್ನು ಕೇಳಿ ಕಾರ್ಯಗತಗೊಳಿಸುವ ಈ ಸಂಸ್ಕಾರದಿಂದ ಮಾತ್ರ ಕಿವಿಗಳಿಗೆ ಭೂಷಣವಾಗಿ ಅದುವೇ ಮನುಷ್ಯನ ಆದಿಭೌತಿಕ, ಆದಿದೈವಿಕ, ಆಧ್ಯಾತ್ಮಿಕ ಚಿಂತನೆಗಳಿಗೆ ಅನುವು ಮಾಡಿ ಸಾರ್ಥಕ ಜೀವನಕ್ಕೆ ಈ ಆಭರಣವೇ ಅಲಂಕಾರ ಎನಿಸಿಕೊಳ್ಳುತ್ತದೆ.

ಅನನ್ಯ ಆಭರಣಗಳು ಮಾನಸಿಕ ತೃಪ್ತಿಗಾಗಿ ಧರಿಸಲ್ಪಡುತ್ತವೆ. ಆದರೆ ಕೈ–ಆಭರಣ, ಕಂಠಾಭರಣ, ಕಿವಿ–ಆಭರಣ ಇವೆಲ್ಲ ಅರ್ಥಪೂರ್ಣ ಆಭರಣವಾಗಲು ಕಾಯೇನ–ಮನಸಾ–ವಾಚಾ ಚಿಂತಿಸುವ ಪ್ರವೃತ್ತಿ ಬೆಳೆದರೆ ಅದು ಬದಲಾವಣೆಯ ಸ್ವರೂಪ. ಅಂಥಹ ಚಿಂತನೆ, ಮನೋಪರಿವರ್ತನೆ, ಆಂತರಂಗಿಕ ಸಂಸ್ಕಾರ ಇವೆಲ್ಲವೂ ಮನುಷ್ಯನ ನಿಜವಾದ ಅರ್ಥಪೂರ್ಣ ಬದುಕಿನ ಚಿಂತನೆ ಆದಾಗ ಮಾತ್ರ ಅದು ಪರಿಪೂರ್ಣದತ್ತ ತಿರುವು ಪಡೆಯುವ ಸಂಕಲ್ಪವಾದೀತು ತಾನೆ.

ನಾವೀಗ ಶೂನ್ಯ ಮಾಸದತ್ತ ಚಲಿಸುತ್ತಿದ್ದೇವೆ. ಮಕರ ಸಂಕ್ರಮಣ ಅಂದರೆ ಸೂರ್ಯನ ಗತಿ ಮಕರದತ್ತ ತಿರುಗಿ ಉತ್ತರಾಯಣ ಆರಂಭವಾಗುತ್ತದೆ. ಹಿತ–ಮಿತವಾದ ಚಳಿಯ ಮೂಲಕ ಕ್ರಿಯಾ ಚಟುವಟಿಕೆಗಳನ್ನು ಮುನ್ನುಗ್ಗಿಸುವ ಕಾಲವಿದು.

ಸಾಂಸ್ಕೃತಿಕ ಸಂಪತ್ತಿನ ಆಭರಣವನ್ನು ಧರಿಸೋಣವೇ.
ದಾನದಿಂದ ಮಾನ–ಮಾನ್ಯತೆ, ಹಸ್ತಗಳಿಗೆ ಗೌರವ,
ಸತ್ಯವೇ ದೇವರೆಂದರು, ಕಂಠದಿಂದ ಬಂದ ಕಲರವ
ಶಾಸ್ತ್ರೀಯ ವಿಚಾರಧಾರೆ, ಆಭರಣವದು ಕರ್ಣಕುವರಕೆ
ಹೊಳಪಿಸುವ ಕಲ್ಲಿನ ಚೂರು ಚಿನ್ನವಾಗಿರೆ, ಆಸೆ ಏತಕೆ?

–ಸಂಪಾದಕರು

ಯಶಸ್ವೀ ಬದುಕಿನ ಮಾರ್ಗ ಮಿಂಚು

ಲೇ ॥ ವನರಾಗ ಶರ್ಮಾ

# ಹಗೆತನದ ಕತ್ತಲೆಗೆ ಸಾಮವೇ ಬೆಳಕು

ನಚಂದ್ರೇಣ ನ ಔಷಧ್ಯಾ ನ ಸೂರ್ಯೇಣ ನ ವಹ್ನಿನಾ ।
ಸಾಮ್ನೈವ ವಿಲಯಂ ಯಾತಿ ವಿದ್ವೇಷ ಪ್ರಭವಂ ತಮಃ ॥ ಪಂಚತಂತ್ರ

'ದ್ವೇಷದಿಂದಾದ ಕತ್ತಲೆ ಸಾಮದಿಂದ ಮಾತ್ರ ದೂರವಾಗುತ್ತದೆಯೇ ವಿನಹ ಚಂದ್ರನಿಂದಾಗಲಿ ಜ್ಯೋತಿರ್ಲತೆಯಿಂದಾಗಲಿ, ಸೂರ್ಯನಿಂದಾಗಲಿ, ವಹ್ನಿಯಿಂದಾಗಲಿ ಅದು ನಾಶವಾಗದು.'

ಹಗೆತನದ ಕತ್ತಲು ಎಂದರೆ ಅದು ಭಯಂಕರ ಕತ್ತಲು. ನಮ್ಮ ವಿವೇಕ, ಹೃದಯವಂತಿಕೆ, ಬುದ್ಧಿ, ತಿಳಿವಳಿಕೆ ಎಲ್ಲವನ್ನೂ ಮುಚ್ಚಿಹಾಕುವ ಗಾಢಾಂಧಕಾರ ಅದು. ಹಗೆತನ ಕತ್ತಲು ಕವಿತೆಂದರೆ ಮನುಷ್ಯ ಏನೇನು ಅನಾಹುತ ಮಾಡುತ್ತಾನೆಂದು ಹೇಳಲಿಕ್ಕಾಗದು. ರಾತ್ರಿಯಲ್ಲಿ ತಿಂಗಳನ್ನು ಹರಿಸಿ ಕಾವಳವನ್ನು ಕಳೆಯುವ ಚಂದ್ರ ಹಗೆತನದ ಕಾವಳವನ್ನು ಕಳೆಯುವ ಚಂದ್ರ ಹಗೆತನದ ಕಾವಳವನ್ನು ಕಳೆಯಲಾರ. ವನಸ್ಪತಿ–ಬೆಳಕು ಬೀರುವ ಗಿಡ ಮೂಲಿಕೆ. ಹಿಮಾಲಯದಲ್ಲಿ ವಿದ್ಯಾಧರ ಸ್ತ್ರೀಯರು ಈ ಜ್ಯೋತಿರ್ಲತೆಯ ಬೆಳಕಿನಲ್ಲಿ ಪ್ರೇಮ ಪತ್ರವನ್ನು ಬರೆಯುತ್ತಿದ್ದರು ಎಂದು ಕುಮಾರ ಸಂಭವದಲ್ಲಿ ಕವಿ ಕಾಳಿದಾಸ ವರ್ಣಿಸುತ್ತಾನೆ. ಅದರಿಂದಲೂ ದ್ವೇಷದ ತಮಸ್ಸು ಅಳಿಯದು. ಜಗತ್ತನ್ನೇ ಪ್ರಕಾಶದಿಂದ ತೊಳೆಯುವ ಸೂರ್ಯನೂ ಮಾತ್ಸರ್ಯದ ಅಂಧಕಾರದವನ್ನು ತೊಳೆಯಲಾರ. ಸರ್ವ ಭಕ್ಷಕ ಅಗ್ನಿಯಿಂದಲೂ ಈ ಕತ್ತಲನ್ನು ನುಂಗಲು ಸಾಧ್ಯವಿಲ್ಲ. ಹಗೆತನದ ಅಂಧತಮವೆಂದರೆ ಅದು ಅಂಥದು!

ಹಾಗಿದ್ದರೆ ಅದನ್ನು ನಿವಾರಿಸುವ ಉಪಾಯ ಯಾವುದು? ಅದು ಚತುರುಪಾಯಗಳಲ್ಲಿ ಮೊದಲನೆಯದಾದ ಸಾಮ ಉಪಾಯವೇ ಆಗಿದೆ. ಸಾಮವೆಂಬ ಪ್ರೇಮದ ಬೆಳಕು ಮಾತ್ರ ಹಗೆತನದ ಕತ್ತಲನ್ನು ಶಾಶ್ವತವಾಗಿ ದೂರಮಾಡಬಲ್ಲದು. ವೈರಿಯನ್ನು ಸದೆಬಡಿಯಲು ಇರುವ ಸಾಮ, ದಾನ, ಬೇಧ, ದಂಡ ಎಂಬ ನಾಲ್ಕು ಉಪಾಯಗಳಲ್ಲಿ ಸರ್ವ ಶ್ರೇಷ್ಠವೂ, ವೈರವನ್ನು ಸಮೂಲ ನಾಶ ಮಾಡುವದೂ ಆದ ಉಪಾಯವೆಂದರೆ ಸಾಮ. ದಂಡದಿಂದ ವೈರಿಯ ಬಲ ಕುಗ್ಗಬಹುದು ಅಥವಾ ನಿರ್ದಿಷ್ಟ ವೈರಿ ನಾಶವಾಗಬಹುದು. ಆದರೆ ವೈರ ನಾಶವಾಗದು. 'ವಿಜಯ ತಂದ ಯುದ್ಧರಂಗದಲ್ಲಿಯೇ ವಿದ್ವೇಷದ ಬೀಜಾವಾಪವೂ ಆಗಿರುತ್ತದೆ'. ಭೇದದಲ್ಲಿಯೂ ಅದೇ ಫಲ. ಭೇದದ ಸುಳಿವು ದೊರೆಯುವ ತನಕ ಜಯ ಅಷ್ಟೆ. ದಾನ ಕೊಟ್ಟು ಮಾಡಿಕೊಂಡ ಒಪ್ಪಂದವೂ ದಾನ ಪಡೆದವನ ದಾಹ ಇನ್ನಷ್ಟು ಇನ್ನಷ್ಟು ಬೇಕೆಂದು ಹೆಚ್ಚುತ್ತಲೇ ಹೋಗುವುದರಿಂದ ಹಗೆತನವನ್ನು ಊರ್ಜಿತವಾಗಿಡುತ್ತದೆ. ದಾನ ಪಡೆಯುವುದಕ್ಕೆ ಮಿತಿಯಿಲ್ಲ, ಆದರೆ ಕೊಡುವುದಕ್ಕೆ ಮಿತಿಯಿದೆ. 'ಹಗೆಯನ್ನು ನಿರ್ನಾಮ ಮಾಡುವ ಸರ್ವೋತ್ತಮ ಉಪಾಯ; ಅವನನ್ನು ಮಿತ್ರನ್ನಾಗಿಸಿಕೊಳ್ಳುವದು' ಎಂಬ ನುಡಿಯಂತೆ. ಹಗೆಯನ್ನು ಮಿತ್ರನನ್ನಾಗಿಸಿಕೊಳ್ಳುವ ಸಾಮ–ಪ್ರೇಮವೇ ಹಗೆತನದ ಉಪಶಮನಕ್ಕೆ ರಾಮಬಾಣ ಎನ್ನಬಹುದು.

ಸಾಮದಲ್ಲಿ ಮನಃ ಪರಿವರ್ತನೆ ಇದೆ. ಪ್ರೇಮ ಅಂಕುರಿಸಿ, ಹೂವಾಗಿ ಅರಳಿ ಶಾಂತಿಯ ಪರಿಮಳಕ್ಕೆ ಜನ್ಮ ಕೊಡುವ ಪ್ರೇಮಿಗಳ ರೋಮಾಂಚನವೂ, ಸೌಷ್ಠವವೂ ಇದೆ. ದ್ವೇಷವನ್ನು ಬೇರು ಸಹಿತ ಕಿತ್ತೆಸೆವ ನಾರು ಬೇರಿನ ಆಯುರ್ವೇದ ಔಷದವಿದೆ. ನರರ ಅಂಗುಲಿಯ ಮಾಲೆಯನ್ನು ಕೊರಳಲ್ಲಿ ಧರಿಸುವ, ಭಯಂಕರ ರಕ್ಕಸ ಅಂಗುಲೀಮಾಲನನ್ನು ಬುದ್ಧ ವಾತ್ಸಲ್ಯ ಮಂತ್ರದಿಂದ ಸಾಧುವನ್ನಾಗಿ ಪರಿವರ್ತಿಸಲಿಲ್ಲವೇ?

ದ್ವೇಷದಿಂದ ದ್ವೇಷವೇ ಹುಟ್ಟುತ್ತದೆ. ವಿಷ ಬೀಜದಿಂದ ಅಮೃತ ಫಲ ಹುಟ್ಟದು. ಹಗೆತನ ಅನ್ನುವುದು 'ಈ ಖಾನದಾನಿನ ತಂದೆಯನ್ನು ಕೊಂದರೆ ಆ ಖಾನದಾನಿನ ತಂದೆಯನ್ನು ಈ ಖಾನದಾನಿನ ಮಗಕೊಲ್ಲುತ್ತಾನೆ'. ಹೀಗೆ ಪೀಳಿಗೆಯಿಂದ ಪೀಳಿಗೆ ಪರಸ್ಪರ ಕೊಲೆಯಲ್ಲಿಯೇ ಮುಂದರಿಯುತ್ತಲೇ ಹೋಗುತ್ತದೆಯೇ ಹೊರತು ಅದು ಪರಸ್ಪರ ಕೊಲೆಯಲ್ಲಿಯೇ ಮುಗಿಯುವುದಿಲ್ಲ. ಸಾಮದ ಅರುಣೋದಯವಾದಾಗಲೇ ಅದಕ್ಕೆ ಕೊನೆ. ಅದಕ್ಕಾಗಿ

ವೈರವೇ ವೈರವನ್ನು ಉಪಶಮನ ಮಾಡಿತೇ?
ಕಾರುವುದು ವಿಷವಿಷವ ತಿಳಿ ಸುಧೆಯನ್ನಲ್ಲ ॥
ಕಾರಿರುಳು ಇರುಳನ್ನೆ ಕಡುಧಗೆಯು ಧಗೆಯನ್ನೆ
ಎರೆಯುವುದು ನೋಡಯ್ಯ– ವನರಾಗ ಮಿತ್ರ

ಎಂದು ವೀವೆಕದಿಂದ ನಡೆದುಕೊಳ್ಳುವುದು ವಿಹಿತವಾದುದು ಎನ್ನಬಹುದು.

ಪ್ರಿಯ ಓದುಗರೇ,
ನಿಮ್ಮ ಸ್ವ–ರಚಿತ ಕಥೆ, ಕವನ ಹಾಗೂ ಸಾಮಾಜಿಕ ಕಳಕಳಿಯ ಬರಹಗಳನ್ನು ನಾವು ಆಹ್ವಾನಿಸುತ್ತೇವೆ. ನಿಮ್ಮ ಪರಿಚಯದೊಂದಿಗೆ ನಮ್ಮ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಉತ್ತಮವಾದದನ್ನು ಆಯ್ದು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ವ್ಯಾಟ್ಸಪ್ ಮೂಲಕವು ಕಳುಹಿಸಬಹುದು. ವ್ಯಾಟ್ಸಪ್ ನಂಬರ್ – 9480179197, 9740945126

ಶ್ರೀಧರ ಸ್ಮರಣೆ ಲೇ ॥ ಜಿ. ಟಿ. ಶ್ರೀಧರಶರ್ಮ

## ವೈದಿಕ ಸಂಸ್ಕೃತಿ ಎಂದರೆ ಜಗತ್ತಿನ ಶ್ರೇಷ್ಠ ಸಂಸ್ಕೃತಿ. ಇದು ಹಿಂದುಗಳ ಉಸಿರು

ಶ್ರೀಧರಸ್ವಾಮಿಗಳು ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದ ರೀತಿಯೇ ತುಂಬ ಅಪರೂಪವಾದದ್ದು. ಅದು ಭಾರತೀಯರೆಲ್ಲರಿಗೂ ಎಲ್ಲ ಕಾಲಕ್ಕೂ ಅನುಕರಣೀಯವಾದದ್ದು. ಅದೂ ಕೂಡ ಸ್ಮರಣೆಗೆ ಅರ್ಹವಾಗಿದೆ.

ಭಾಷಾಭೇದವಿರದ ಶ್ರೀಧರರು ಚಿಕ್ಕ ವಯಸ್ಸಿನಲ್ಲಿಯೇ ಆಂಗ್ಲ ಭಾಷೆಯನ್ನೂ ಕಲಿಯುತ್ತಿದ್ದರು. ಆದರೂ ಅವರಿಗೆ 'ಮೇಲರಿಮೆ'ಯಿರಲಿಲ್ಲ. ಕ್ರಾಪಿನ ಬದಲಾಗಿ ಶಿಖೆಯನ್ನೇ ಬಿಟ್ಟಿದ್ದರು. ಆಗ ಅವರು ಧರಿಸುತ್ತಿದ್ದ ಉಡುಪೂ ಕೂಡ ಆಂಗ್ಲ ಶಿಕ್ಷಣದ ನೆರಳಾಗಿರಲಿಲ್ಲ. ಪ್ರತಿದಿನ ಸಂಧ್ಯಾವಂದನೆ, ಸೂರ್ಯನಮಸ್ಕಾರ ಮುಂತಾದವುಗಳನ್ನು ಬಿಡದೆ ಮಾಡುತ್ತಿದ್ದರು. ಸಾಯಂಕಾಲ ಕೂಡ ತಣ್ಣೀರಿನ ಸ್ನಾನ. ಅನಂತರ ಸಾಯಂ ಸಂಧ್ಯಾವಂದನೆ, ರಾಮರಕ್ಷಾ ಸ್ತೋತ್ರ ಪಠಣ, ಕೊನೆಗೆ ದೇವರ ದರ್ಶನ. ಮೊದ ಮೊದಲು ಚಹಾ ಕುಡಿಯುತ್ತಿದ್ದರು. ಕೊನೆಗೆ ಸ್ವದೇಶಿ ಚಳುವಳಿಯಲ್ಲಿ ಚಹಾ, ಕಾಫಿ ಬಿಡುವುದಾಗಿ ಪ್ರತಿಜ್ಞೆ ಮಾಡಿದ್ದರು. ಹಾಗಾಗಿ ಅವುಗಳನ್ನೂ ಬಿಟ್ಟಿದ್ದರು.

ವೈದಿಕ ಸಂಸ್ಕೃತಿಯೆಂದರೆ ಶ್ರೀಧರರಿಗೆ ತುಂಬಾ ಹೆಮ್ಮೆ, ಗೌರವಾದರ. ಆದ್ದರಿಂದಲೇ ಅವರು ಹೀಗೆ ಹೇಳುತ್ತಿದ್ದರು. "ವೈದಿಕ ಸಂಸ್ಕೃತಿ ಎಂದರೆ ಜಗತ್ತಿನ ಶ್ರೇಷ್ಠ ಸಂಸ್ಕೃತಿ. ಅದು ಪರಮಾತ್ಮನಿಂದಲೇ ಬಂದದ್ದು. ಅದು ಅತ್ಯುಚ್ಚ, ಅತಿಶುದ್ಧ ಮೂಲಗ್ರಾಹಿ ಸಂಸ್ಕೃತಿ. ಇದು ಹಿಂದುಗಳ ಉಸಿರು. ಒಮ್ಮೆ ಇದು ಹೋಯಿತೆಂದರೆ ಅಂಥ ಹಿಂದು ಬದುಕಿದರೂ ಸತ್ತ ಹೆಣದಂತಾಗುವನು. ನಮ್ಮ ಈ ಸಂಸ್ಕೃತಿಯನ್ನು ಎಷ್ಟು ಮಾತ್ರಕ್ಕೂ ಬಿಡಬಾರದು."

ಮುಂದೆ ಶ್ರೀಧರರು ಶೇಕ್ಸ್ ಪಿಯರ್, ಮಿಲ್ಟನ್, ಟಿ.ಎಸ್. ಎಲಿಯಟ್, ಥಾಮಸ್ ಹಾರ್ಡಿ ಮೊದಲಾದವರ ಕೃತಿಗಳನ್ನೂ ಅಭ್ಯಾಸ ಮಾಡಿದರು. ಅಷ್ಟೇ ಏಕೆ ಹೆನ್ರಿ ಜೇಮ್ಸ್, ಕಾಫ್ಕ, ಆಲ್ಬರ್ಟ ಕಾಮ್ಯು ಮೊದಲಾದವರ ಕೃತಿಗಳನ್ನೂ ಆಳವಾಗಿ ಓದುತ್ತಿದ್ದರು. ಇದರೊಂದಿಗೆ ಆಂಗ್ಲ ಭಾಷೆಯಲ್ಲಿ ಕೂಡ ತಾವೇ ಸ್ವತಃ ಕೆಲವು ಕೃತಿಗಳನ್ನು ಬರೆದರು. ಹೀಗೆ ಭಾಷೆ ಮತ್ತು ಓದು ಹಾಗೂ ಬರಹ ಮುಂತಾದವುಗಳ ಬಗ್ಗೆ ಮಾತನಾಡುವಾಗ ಶ್ರೀಧರಸ್ವಾಮಿಗಳನ್ನು ಮತ್ತು ಅವರ ಕೃತಿಗಳನ್ನು ತಪ್ಪದೆ ಸ್ಮರಿಸಬೇಕಾಗುತ್ತದೆ.

ಶ್ರೀರಾಮ ಕಥಾಸಾರ ಲೇ–ಬಸ್ತಿ ಸದಾನಂದ ಪೈ,

## ರಾಕ್ಷಸರ ಬಲ ಪರೀಕ್ಷೆ

ಹನುಮಂತನು ಸೀತೆಯ ಆಶೀರ್ವಾದ ಪಡೆದು ಉತ್ತರ ದಿಕ್ಕನ್ನು ಮನಸ್ಸಿನಲ್ಲಯೇ ಗ್ರಹಿಸಿ ಹೊರಡುವ ಸಿದ್ಧತೆಯನ್ನು ಮಾಡಿಕೊಳ್ಳುತ್ತಾನೆ. ಇಲ್ಲಿಂದ ಹೊರಡುವ ಮೊದಲು ರಾವಣನ ಬಲ ಪರೀಕ್ಷೆ ಮಾಡಿಕೊಳ್ಳುವುದು ತಮ್ಮ ಮುಂದಿನ ಕೆಲಸಕ್ಕೆ ಅನುಕುಲವಾಗುತ್ತದೆ. ರಾಕ್ಷಸರ ಬಲ ಎಷ್ಟಿದೆ, ಅವರ ಮುಖ್ಯರು ಎಷ್ಟು ಬಲಾಡ್ಯರು? ಎಂದು ತಿಳಿದುಕೊಳ್ಳುವುದು ಅಗತ್ಯವೆಂದು ಕೊಳ್ಳುತ್ತಾನೆ. ಅದಕ್ಕಾಗಿ ಅಶೋಕವನವನ್ನು ಧ್ವಂಸ ಮಾಡುವುದು ಒಳ್ಳೆಯ ಉಪಾಯ. ಆಗ ರಾವಣನು ಸೈನ್ಯವನ್ನು ಕಳಿಸುತ್ತಾನೆ. ಅವರೆಲ್ಲರನ್ನೂ ಕೊಲ್ಲುವೆನು. ಆಗ ರಾವಣನೆ ಮಂತ್ರಿಗಳ ಸಹಿತ ರಣರಂಗಕ್ಕೆ ಬರುತ್ತಾನೆ. ಆಗ ಅವರ ಬಲಾಬಲಗಳನ್ನು ತಿಳಿದುಕೊಂಡು ನಾನಿಲ್ಲಿಂದ ಹೊರಡುತ್ತೆನೆ ಎಂದು ತೀರ್ಮಾನಿಸಿ ಕೋಪಾವಿಷ್ಟನಾಗಿ ಅಶೋಕವನದ ಮರಗಳನ್ನು ಕೆಡವಲು ಪ್ರಾರಂಭಿಸುತ್ತಾನೆ. ಮುರಿದು ಬಿದ್ದ ಮರ ಬಳ್ಳಿಗಳಿಂದ ಒಡೆದ ಕೆರೆ ಕಟ್ಟುಗಳಿಂದ ಅಶೋಕವನವು ಧ್ವಂಸವಾಗುತ್ತದೆ.

ಪ್ರಾಣಿ ಪಕ್ಷಿಗಳು ಭೀತರಾಗಿ ಕೂಗಿಕೊಳ್ಳುತ್ತಿದ್ದ ಶಬ್ದಕ್ಕೆ ನಿದ್ರೆಯಲ್ಲಿದ್ದ ರಾಕ್ಷಸಿಯರು ಎಚ್ಚರವಾಗುತ್ತಾರೆ. ಹನುಮಂತನು ಅವರು ಭಯಪಡುವಂತೆ ಕಾಣಿಸಿಕೊಂಡು ಬಹುದೊಡ್ಡ ರೂಪವನ್ನು ತಾಳುತ್ತಾನೆ. ರಾಕ್ಷಸಿಯರು ಸೀತೆಯ ಬಳಿಗೆ ಬಂದು ಆ ವಾನರರು ಯಾರು? ನಿನ್ನೊಡನೆ ಏನು ಹೇಳಿದರು? ಎಂದು ಕೇಳುತ್ತಾರೆ.

ಅವನು ಯಾರೆಂದು ನೀವೇ ತಿಳಿದುಕೊಳ್ಳಿ. ನಾನೂ ಅವನನ್ನು ಕಂಡು ಭಯ ಪಟ್ಟಿದ್ದೇನೆ. ರೂಪ ಮರೆಸಿ ಬಂದ ರಾಕ್ಷಸನಿರಬಹುದಾಗಿ ಭಾವಿಸಿದ್ದೇನೆ ಎನ್ನುತ್ತಾಳೆ. ರಾಕ್ಷಸಿಯರು ಭೀತಿಯಿಂದ ದಿಕ್ಕು ದಿಕ್ಕಿಗೆ ಓಡುತ್ತಾರೆ. ಕೆಲವರು ರಾವಣನಿಗೆ ವಿಷಯ ತಿಳಿಸಲು ಹೋಗುತ್ತಾರೆ.

ರಾಜನೇ ಭಯಂಕರ ರೂಪದ ಕಪಿಯೊಂದು ಸೀತೆಯೊಡನೆ ಸಂಭಾವಿಸಿದೆ. ವಿಷಯವನ್ನು ಸೀತೆ ಹೇಳುವುದಿಲ್ಲ. ಆತನು ಇಂದ್ರನ ದೂತನಾಗಿರಬಹುದು. ಕುಬೇರನ ದೂತನಾಗಿರಬಹುದು. ರಾಮನೇ ಸಿತೆಯನ್ನು ಹುಡುಕಲು ಕಳಿಸಿದ ದೂತನಾಗಿರಬಹುದು. ಸೀತೆಯೊಡನೆ ಮಾತಾಡಿ ವನವನ್ನು ಧ್ವಂಸ ಮಾಡಿದ ಆತನನ್ನು ಶಿಕ್ಷಿಸಲು ಅಪ್ಪಣೆ ಮಾಡು ಎಂದು ಕೇಳಿಕೊಳ್ಳುತ್ತಾರೆ.

ರಾಕ್ಷಸಿಯರ ಮಾತು ಕೇಳಿ ರಾವಣನು ಕೋಪಾವಿಷ್ಟನಾಗಿ ತನ್ನಂತೆ ಪರಾಕ್ರಮಿಗಳಾದ ಎಂಭತ್ತು ಸಾವಿರ ಕಿಂಕರರೆಂಬ ರಾಕ್ಷಸರಿಗೆ, ಹನುಮಂತನನ್ನು ನಿಗ್ರಹಿಸುವಂತೆ ಆಜ್ಞಾಪಿಸುತ್ತಾನೆ. ಅವರು ಹೆಬ್ಬಾಗಿಲ ಬಳಿ ಕುಳಿತಿರಲು ವಾನರನ ಬಳಿಗೆ ಬರುತ್ತಾರೆ. ಕೈಯಲ್ಲಿ ಪರಿಘ, ಗದೆ, ಸುರ್ಯ ಸದೃಶವಾದ ಬಾಣಗಳಿಂದ ಕೂಡಿ ವಾನರ ಶ್ರೇಷ್ಠನಿಗೆ ಹೊಡೆಯುತ್ತಾರೆ. ಮುದ್ಗರ, ಪಟ್ಟಿಸ, ಶೂಲಪ್ರಾಸ, ತೋಮರ ಶಕ್ತಿ ಎಂಬ ಆಯುಧಗಳಿಂದ ಸುತ್ತುಗಟ್ಟುತ್ತಾರೆ.

ಹನುಮಂತನು ಬಾಲವನ್ನು ನೆಲಕ್ಕೆ ಬಡಿದು ಬೀಕರವಾಗಿ ಧ್ವನಿಗೈದು ಬಹುದೊಡ್ಡ ದೇಹವನ್ನು ತಾಳಿ ಹೆಬ್ಬಾಗಿಲಿಗೆ ಬಿಗಿದಿದ್ದ ದೊಡ್ಡ ಪರಿಘವನ್ನು ತೆಗೆದುಕೊಂಡು ರಾಕ್ಷಸರನ್ನು ಹೊಡೆದುಹಾಕುತ್ತಾನೆ. ರಾಕ್ಷಸರ ಈ ದೊಡ್ಡ ಸೈನ್ಯವು ಹತವಾದುದನ್ನು ಕೇಳಿ ರಾವಣನು ಪ್ರಹಸ್ತನ ಮಗನಿಗೆ ಯುದ್ಧಕ್ಕೆ ಹೋಗುವಂತೆ ಆಜ್ಞಾಪಿಸುತ್ತಾನೆ.

ವನವನ್ನು ಧ್ವಂಸಮಾಡಿದ ಹನುಮಂತನು ರಾಕ್ಷಸರ ಕುಲ ದೇವತಾಭವನವಾದ “ಜೈತ್ಯಪ್ರಾಸಾದ” ಮೇಲೇರಿ ಭಯಂಕರ ಶಬ್ದ ಮಾಡುತ್ತಾನೆ. ಬವನದ ನೂರುಜನ ಪಾಲಕರು ನಾನಾವಿಧದ ಆಯುಧಗಳಿಂದ ಸುತ್ತುಗಟ್ಟುತ್ತಾರೆ. ಹನುಮಂತನು ಕುಪಿತನಾಗಿ ಗೋಪುರದ ಚಿನ್ನದಿಂದ ಕೆತ್ತಲ್ಪಟ್ಟ ಕಂಭವೊಂದನ್ನು ಕಿತ್ತು ದಿಕ್ಕು ದಿಕ್ಕಿಗೆ ತಿರುಗಿಸುತ್ತಾನೆ. ಅದರಿಂದ ಭೀಕರ ಬೆಂಕಿಜ್ವಾಲೆಗಳು ಹಡಿ ‘ಪ್ರಾಸಾದ’ವು ಬೆಂಕಿಯಿಂದ ಹತ್ತಿಕೊಳ್ಳುತ್ತದೆ. ನೂರುಮಂದಿ ಕಾವಲು ರಾಕ್ಷಸರನ್ನು ಕೊಲ್ಲುವನು.

ಪ್ರಹಸ್ತನ ಮಗ ಜಂಬುಮಾಲಿಯು ಕತ್ತೆ ಕಟ್ಟಿದ ರಥದಲ್ಲಿ ಕುಳಿತು ಯುದ್ಧಕ್ಕೆ ಬರುತ್ತಾನೆ. ಹನುಮಂತನ ಮೇಲೆ ವಿಧವಿಧದ ಬಾಣ ಪ್ರಯೋಗ ಮಾಡುತ್ತಾನೆ. ಕೋಪಾವಿಷ್ಟನಾದ ಹನುಮಂತನು ಅತೀ ವೇಗದಿಂದ ಪರಘವನ್ನು ತಿರುಗಿಸಿ ಜಂಬುಮಾಲಿಯ ದೊಡ್ಡ ಎದೆಗೆ ಬೀಸಿ ಹೊಡೆಯುತ್ತಾನೆ. ಜಂಬುಮಾಲಿಯು ನೆಲದ ಮೇಲೆ ಬಿದ್ದು ಹತನಾಗುತ್ತಾನೆ. ರಾವಣನು ಅದನ್ನು ಕೇಳಿ ಇನ್ನೂ ಕೋಪಾವಿಷ್ಟನಾಗಿ ಏಳುಜನ ಮಂತ್ರಿಕುಮಾರರನ್ನು ಯುದ್ಧಕ್ಕೆ ಕಳುಹಿಸುತ್ತಾನೆ.

ರಾವಣನಿಂದ ಆಜ್ಞಪ್ತರಾದ ಅವರು ಬಹುದೊಡ್ಡ ಸೈನ್ಯದೊಡನೆ ಬಂದು ಹನುಮಂತನ ಮೇಲೆ ಬಿಳುತ್ತಾರೆ. ಮೇಘಗಳು ಮಳೆ ಸುರಿಸುವಂತೆ ಬಾಣವರ್ಷವನ್ನು ಹರಿಸುತ್ತಾರೆ. ವೇಗದಿಂದ ಸಂಚರಿಸುತ್ತಿರುವ ವಾನರನು ಅವರ ಬಾಣಗಳನ್ನು ರಥಗಳನ್ನು ವ್ಯರ್ಥಗೊಳಿಸುತ್ತಾನೆ. ಭಯಂಕರವಾದ ಗರ್ಜನೆಯನ್ನು ಮಾಡಿ ದೊಡ್ಡ ಸೈನ್ಯಕ್ಕೆ ಭಯವನ್ನುಂಟುಮಾಡುತ್ತಾನೆ. ಕೆಲವರನ್ನು ತೊಡೆಗಳಿಂದ ಹೊಡೆದು ನೆಲಕ್ಕೆ ಕೆಡುವುತ್ತಾನೆ. ಆನೆಗಳು ವಿಕಾರವಾಗಿ ಘೀಳಿಟ್ಟು ನೆಲಕ್ಕುರುಳುತ್ತವೆ. ಕುದುರೆಗಳೂ ಸತ್ತು ಬೀಳುತ್ತವೆ. ಅವರನ್ನೆಲ್ಲಾ ಕಂದು ಪುನಃ ಹೆಬ್ಬಾಗಿಲಬಳಿ ಬಂದು ಯುದ್ಧಕ್ಕೆ ಬರುವವರಿಗಾಗಿ ಕಾದು ಕುಳಿತುಕೊಳ್ಳುತ್ತಾನೆ.

ವಾನರನಿಂದ ಅವರೆಲ್ಲರೂ ಹತರಾದುದನ್ನು ಕೇಳಿ ರಾವಣನು ಯುದ್ಧದಲ್ಲಿ ವಾಯುವೇಗಕ್ಕೆ ಸಮಾನರಾದ “ವಿರೂಪಾಕ್ಷ, ಯೂಪಾಕ್ಷ, ದುರ್ಧರ, ಪ್ರಘಸ, ಭಾಸಕರ್ಣ” ಎಂಬ ಐದುಜನ ಸೇನಾ ನಾಯಕರಿಗೆ ಹೇಳಿಕಳುಹಿಸಿ ಬರಮಾಡಿಕೊಳ್ಳುತ್ತಾನೆ. ವಾನರನನ್ನು ಕಪಿಯೆಂದು ತಿಳಿಯುವುದು ಸರಿಯಲ್ಲ ಅದೊಂದು ಭೂತವೇ ಸರಿ. ಅಧಿಕವಾದ ಪ್ರಯತ್ನ ಮಾಡಿ ಅದನ್ನು ಹಿಡಿಯಿರಿ ಎಂದು ಕಳುಹಿಸುತ್ತಾನೆ. ಅವರು ಮದ್ದಾನೆಗಳಿಂದಲೂ, ಮಹಾ ವೇಗವುಳ್ಳ ಕುದುರೆಗಳಿಂದಲೂ ಹೊರಟುಬರುತ್ತಾರೆ. ಅವರೆಲ್ಲರೂ ವಾನರನ ಮೇಲೆ ಬಾಣಪ್ರಯೋಗ ಮಾಡುತ್ತಾರೆ. ಹನುಮಂತನು ಅವರನ್ನೆಲ್ಲಾ ಕೊಂದು ಆನೆ, ಕುದುರೆಗಳ ಸೈನ್ಯ ಸಹಿತ ಎಲ್ಲವನ್ನೂ ನಾಶಮಾಡುತ್ತಾನೆ.

ಐವರು ಸೇನಾಪತಿಗಳೂ ಸೈನ್ಯ ಸಹಿತ ಹತರಾದುದನ್ನು ಕೇಳಿ ರಾವಣನು ತನ್ನ ಮಗನಾದ ‘ಅಕ್ಷಕುಮಾರ’ನನ್ನು ಯುದ್ಧಕ್ಕೆ ಕಳುಹಿಸುತ್ತಾನೆ.ಅಕ್ಷಕುಮಾರನ ಯುದ್ಧ ಕೌಶಲ್ಯವನ್ನು, ಶೌರ್ಯವನ್ನೂ ಕಂಡು ಅವನನ್ನು ಸಂಹರಿಸುವ ವಿಚಾರದಲ್ಲಿ ಹನುಮಂತನು ಸ್ವಲ್ಪ ಹಿಂದೇಟು ಹಾಕುತ್ತಾನೆ. ಈತನ ಪರಾಕ್ರಮವು ದೇವಾಸುರರ ಮನಸ್ಸನ್ನು ಕೂಡಾ ನಡುಗಿಸಿಬಿಡಬಲ್ಲುದು. ಈತನನ್ನು ಉಪೇಕ್ಷಿಸುವುದು ಸರಿಯಲ್ಲ ಎಂದು ತೀರ್ಮಾನಿಸಿ ಅಧಿಕವಾದ ವೇಗವನ್ನು ಹೊಂದಿ ಅವನ ಎಂಟು ಕುದುರೆಗಳನ್ನು ವಾಯು ಸೇವಿತ ಮಾರ್ಗದಲ್ಲಿ ಅಂಗೈ ಹೊಡೆತಗಳಿಂದ ಹೊಡೆಯುತ್ತಾನೆ, ರಥದ ಅಚ್ಚು ಮುರಿಯುತ್ತದೆ. ‘ಅಕ್ಷನು’ ಖಡ್ಗ ಸಹಿತ ಅಂತರಿಕ್ಷಕ್ಕೆ ಹಾರುತ್ತಾನೆ. ಹನುಮಂತನು ಗರುಡ, ವಾಯು, ಸಿದ್ಧರು ಸಂಚರಿಸುವ ಮಾರ್ಗವನ್ನು ಸೇರಿ ಅತನನ್ನು ಕಾಲುಗಳಲ್ಲಿ ಗಟ್ಟಿಯಾಗಿ ಹಿಡಿದು ಸಾವಿರಾರು ಸಲ ತಿರುಸಿಗಿ ನೆಲಕ್ಕೆ ಎಸೆಯುತ್ತಾನೆ. ತೋಳು, ತೊಡೆ, ಸೊಂಟ, ಕತ್ತು ಮುರಿದು ಪುಡಿಪುಡಿಯಾದ ಮೂಳೆಗಳಿಂದ ಕಣ್ಣಿನಿಂದಲೂ ರಕ್ತ ಸುರಿಸಿ ನೆಲಕ್ಕೆ ಬಿದ್ದು ಹತನಾಗುತ್ತಾನೆ. ಪುತ್ರನಾದ ‘ಅಕ್ಷಕುಮಾರ’ನು ಹತನಾದುದನ್ನು ಕೇಳಿ ರಾವಣನು ರೋಷದಿಂದ “ಇಂದ್ರಜಿತ್ತು” ವಿಗೆ ಹೇಳಿ ಕಳುಹಿಸುತ್ತಾನೆ.

ಮೂರು ಲೋಕಗಳಲ್ಲೂ ನಿನ್ನನ್ನೆದುರಿಸುವವರಿಲ್ಲ. ಯುದ್ಧದಲ್ಲಿ ನಿನಗೆ ಆಯಾಸವೇ ಇಲ್ಲ. ಮೂರು ಲೋಕಗಳಲ್ಲೂ ನಿನ್ನ ‘ಅಸ್ತ್ರ ಬಲ’ ಶಕ್ತಿ ಅರಿಯದವರಿಲ್ಲ. ಕಿಂಕರರು ಪಂಚ ಸೇನಾನಾಯಕರು, ಸೈನ್ಯ ಸಮೇತ ಹತರಾದರು. ನಿನ್ನ ಪ್ರೀತಿಪಾತ್ರನಾದ ತಮ್ಮ ‘ಅಕ್ಷಯ ಕುಮಾರ’ನೂ ಹತನಾದನು. ಅಗ್ನಿ ಸಮಾನನಾದ ಕಪಿಯನ್ನು ಮುಷ್ಠಿ ಪ್ರಯೋಗಿಸುವ ಸಾಮರ್ಥ್ಯ ಪಾಂಡಿತ್ಯ ನಿನಗಿದೆ. ನೀನು ಆ ಕಪಿಯನ್ನು ಜಯಿಸು ಎಂಬುದಾಗಿ ಹೇಳಿ ಯುದ್ಧಕ್ಕೆ ಕಳಿಸುತ್ತಾನೆ.

ಇಂದ್ರಜಿತು ಯುದ್ಧಕ್ಕೆ ಬಂದುದನ್ನು ಕಂಡು, ನಾಗರೂ, ಯಕ್ಷರೂ, ಮಹರ್ಷಿಗಳೂ, ಸಿದ್ಧರೂ ಅಲ್ಲಿಗೆ ಬರುತ್ತಾರೆ. ಇಂದ್ರಜಿತುವಿನ ಬಾಣಗಳನ್ನು ಹನುಮಂತನು ಲೀಲಾಜಾಲವಾಗಿ ವ್ಯರ್ಥಗೊಳಿಸುತ್ತಾ ಕಪಿಯು ಬಾಣಗಳ ಸಂದುಗಳಲ್ಲಿಯೇ ಮೇಲೆರುತ್ತಾನೆ. ತಾನು ಎಷ್ಟು ಪ್ರಯತ್ನಪಟ್ಟರೂ ವಾನರನನ್ನು ಘಾಸಿಗೊಳಿಸಲಾಗದುದನ್ನು ಕಂಡು ಇಂದ್ರಜಿತ್ತುವು ಚಿಂತೆಗೊಳಗಾಗುತ್ತಾನೆ. ಕೊನೆಗೆ ‘ಬ್ರಹ್ಮಾಸ್ತ್ರ’ದಿಂದ ಆತನನ್ನು ಹಿಡಿಯುವುದೇ ಸರಿಯೆಂದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾನೆ.



ವಾಗ್ಭೂಷಣ ಪತ್ರಿಕೆಯ ಸ್ಥಾಪಕರು –ಆಲೂರು ವೆಂಕಟರಾಯರು

ಹನುಮಂತನು ಬ್ರಹ್ಮನಿಂದ ತನಗೆ ಆಗಿದ್ದ ವರದಾನವನ್ನು ನೆನಪಿಸಿಕೊಂಡು ಅದಕ್ಕನುಗುಣವಾಗಿ ಬಂಧಿಸಲ್ಪಡುತ್ತಾನೆ. ಅಸ್ತ್ರದಿಂದ ಬಂಧಿಸಲ್ಪಟ್ಟರೂ, ಬ್ರಹ್ಮ, ದೇವೇಂದ್ರ, ವಾಯುವಿನಿಂದ ರಕ್ಷಿತನಾಗಿರುವುದರಿಂದ ಯಾವುದೇ ಭಯವಿಲ್ಲ. ಶತ್ರುವು ನನ್ನನ್ನು ಹಿಡಿಯಲಿ ಎಂದು ನಿಶ್ಚೇಷ್ಠಿತನಾಗಿ ಮುಂದಾಗುವುದನ್ನು ಇದಿರು ನೋಡುತ್ತಾ ಇರಲು, ಶತ್ರುಗಳು ಬಲಾತ್ಕಾರದಿಂದ ಅವನನ್ನು ಹಿಡಿಯುತ್ತಾರೆ. ಸೆಣಬಿನ ನಾರುಗಳಿಂದಲೂ, ನಾನಾ ಮರದ ನಾರುಗಳಿಂದಲೂ ಅವನನ್ನು ಕಟ್ಟುತ್ತಾರೆ. ಬ್ರಹ್ಮಾಸ್ತ್ರದಿಂದ ಬಂಧಿತನಾದವನ್ನನ್ನು ಬೇರೊಂದು ಅಸ್ತ್ರದಿಂದ ಬಂಧಿಸಲಾಗುವುದು. ಅದರಿಂದಾಗಿ ಬ್ರಹ್ಮಾಸ್ತ್ರದಿಂದ ತನ್ನಿಂದ ತಾನೇ ಬಿಡುಗಡೆಯಾಗುತ್ತದೆ. ಅದು ಈ ರಾಕ್ಷಸರಿಗೆ ತಿಳಿದಿಲ್ಲ ಎಂದುಕೊಳ್ಳುತ್ತಾನೆ. ರಾವಣನ ಎದುರು ಎಳೆದೊಯ್ಯುತ್ತಾರೆ.

ಕಪಿಯನ್ನು ನೋಡಿ ಅಲ್ಲಿರುವವರು, ಅವನು ಯಾರು? ಎಲ್ಲಿಂದ ಬಂದ? ಇಲ್ಲೇನು ಕೆಲಸ? ಯಾರಕಡೆಯವನು? ಎಂದು ಮಾತಾಡಿಕೊಳ್ಳುತ್ತಾರೆ. ರಾವಣನು ಮಂತ್ರಿ ಮುಖ್ಯರಿಂದ ಆತನ ವಿಚಾರಣೆ ನಡೆಸುತ್ತಾನೆ. ನಾನು ಕಪಿರಾಜ ಸುಗ್ರೀವನ ದೂತನಾಗಿ ಬಂದಿರುವೆನು ಎಂದು ಹನುಮಂತನು ಹೇಳುತ್ತಾನೆ.

ಹನುಮಂತನು ಸೀತೆಯನ್ನು ಕಂಡು ಸೀದಾ ರಾಮನ ಬಳಿಗೆ ಹೋಗಬಹುದಾಗಿದ್ದರೂ, ಶತ್ರುಗಳ ಬಲ ಅರಿಯುವುದು ಮುಖ್ಯವೆಂದು ತಿಳಿದು ಅಶೋಕವನವನ್ನು ಧ್ವಂಸಮಾಡಿ ಶತ್ರುಗಳು ಯುದ್ಧಕ್ಕೆ ಬರುವಂತೆ ಮಾಡುತ್ತಾನೆ.

ನಾವು ಮಾಡುವ ಕೆಲಸದ ಸಂಪೂರ್ಣ ಅರಿವು ಇರಬೇಕು. ಬೇರೊಬ್ಬರು ಅದರಲ್ಲಿ ಭಾಗಿಯಾಗಿದ್ದರೆ, ಅವರ ಕುರಿತು ಆಮೂಲಾಗ್ರವಾಗಿ ತಿಳಿದು ಮುಂದುವರಿಯಬೇಕು. ಆಗ ಮಾತ್ರ ನಮ್ಮ ಕೆಲಸ ಸರಿಯಾದ ದಿಕ್ಕಿನಲ್ಲಿ ನಿರ್ವಹಿಸಬಹುದು. ಪರರಿಂದ ವಂಚಿಸಲ್ಪಡದೇ ತನ್ನತನವನ್ನು ಮರೆಯಬಹುದು. ಅದಕ್ಕಾಗಿ ಎದುರಾಳಿಗಳನ್ನು ಸ್ವಲ್ಪಮಟ್ಟಿಗೆ ಕಡೆಗಣಿಸಿದಂತೆ ತೋರಿಸಿಕೊಳ್ಳುವುದು ಅವಶ್ಯಕ. ಆಗಲೇ ಅವರು ತಮ್ಮ ನಿಜವಾದ ಶಕ್ತಿ ಕಾರ್ಯಗಳನ್ನು ಬಿಚ್ಚಿಡುತ್ತಾರೆ. ತಮ್ಮ ಮೇಲ್ಮೆಯನ್ನು ಸಾದರಪಡಿಸಲು ಮುಂದಾಗುತ್ತಾರೆ. ಇದೊಂದು ಪತ್ತೇದಾರಿಕೆ, ಗೂಢಾಚಾರಿಗಳು ಅನುಸರಿಸುವ ರೀತಿ ಎಂದು ತಿಳಿಯಬಹುದು. ಜೀವನದಲ್ಲಿ ಯಶಸ್ಸುಗಳಿಸಲು ಇಂತಹ ನಡುವಳಿಕೆ ಅಗತ್ಯ.

---

ಸಂಪ್ರದಾಯ

ಲೇ॥ ಜಿ.ವಿ. ಶರ್ಮಾಪಂಡಿತ್

# ಜ್ಞಾನಿಗಳು ಹೆಣ್ಣಿಗೆ ದೂರವಿರುವುದೇಕೆ ?

**ಜ್ಞಾನವೆಂದರೆ ಅರಿವು. ಅಥವಾ ಬ್ರಹ್ಮಜ್ಞಾನ.** ಜ್ಞಾನಿಗಳು, ವಿಜ್ಞಾನಿಗಳು ಸಾಮಸಾರಿಕ ಬಂಧನಕ್ಕೆ ದೂರವಿರುತ್ತಾರೆ. ಯಾಕೆಂದರೇ ಹೆಂಡತಿಯಾಗಿ ಬಂದವಳು ತನ್ನ ಮತ್ತು ತನ್ನ ಸಂಸಾರದ ಆರ್ಥಿಕ ಅಭಿವೃದ್ಧಿಯನ್ನು ಬಯಸುತ್ತಾಳೆ. ದೈಹಿಕ ಸುಖವನ್ನು ಆಶಿಸುತ್ತಾಳೆ. ಆಸ್ತಿ ಅಂತಸ್ತುಗಳನ್ನು ಇಷ್ಟಪಡುತ್ತಾಳೆ.

"ನಾನು ಜ್ಞಾನಿಯಾಗುತ್ತೇನೆ. ನಾನು ವಿಜ್ಞಾನಿಯಾಗುತ್ತೇನೆ" ಎಂದರೇ ಅರ್ಧಾಂಗಿಯಾಗಿ ಬಂದವಳು ಅಂಗೀಕರಿಸುತ್ತಾಳೇನು"? ಮದುವೆ ಯಾಕೆ ಮಾಡಿಕೊಂಡಿದ್ದೀಯಾ"? ಎಂದು ಜಗಳಕ್ಕಿಳಿಯುತ್ತಾಳೆ. ಹತ್ತು ಮಂದಿ ಜನರನ್ನು ಕರೆದು ಪಂಚಾಯತೀ ಮಾಡುತ್ತಾಳೆ.

ಜಗದೋದ್ಧಾರ ಮಾಡಬಯಸಿದವರಿಗೆ ಸಂಸಾರದ ಜಂಜಾಟವಿರಬಾರದು. ಒಂಟಿ ಜೀವನವೇ ಜ್ಞಾನಿಗಳಿಗೆ ಉತ್ತಮವಾಗಿರುತ್ತದೆ. ಶಂಕರಾಚಾರ್ಯರು ಮಧ್ವಾಚಾರ್ಯರು ನೈಷ್ಠಿಕ ಬ್ರಹ್ಮಚಾರಿಗಳೇ ಆಗಿದ್ದರು. ರಾಮಾನುಜಾಚಾರ್ಯರು ವಿವಾಹಿತರಾಗಿದ್ದರೂ ತದನಂತರ ಕಾಲದಲ್ಲಿ ಸತೀತ್ಯಾಗ ಮಾಡಿದ್ದರು.

ಯೋಗಿಗಳಲ್ಲಿ "ರಾಜಯೋಗಿ"ಗಳೆಂದು ಕೆಲವರಿರುತ್ತಾರೆ. ಇವರು ವಿವಾಹಿತರಾಗಿದ್ದು ಮಠಾಧಿಪತಿಗಳಾಗಿರುತ್ತಾರೆ. ರಾಜರ್ಷಿಗಳೆಂದು ಕೆಲವರಿರುತ್ತಾರೆ. ಜನಕರಾಜನು. ರಘುಮಹಾರಾಜನು. ದಶರಥನು ಈ ವಿಭಾಗಕ್ಕೆ ಬರುತ್ತಾರೆ.

ಪ್ರಾಚೀನ ಮತ್ತು ಆಧುನಿಕ ವಿಜ್ಞಾನಿಗಳು ಸಾಂಸಾರಿಕ ಬಂಧನಕ್ಕೆ ಒಳಗಾಗಿದ್ದವರು ಕಡಿಮೆ. ವಿಜ್ಞಾನಿಗಳಾದ ಅನೇಕ ಮಂದಿ ಶಾಸ್ತ್ರವೇತ್ತರು ಮೂರು ನಾಲ್ಕು ಮದುವೆಗಳನ್ನು ಕೂಡ ಮಾಡಿ ಕೊಂಡದ್ದು ಉಂಟು. ಆದರೇ ಬಂದ ಹೆಂಡತಿಯರು ಐದಾರು ತಿಂಗಳ ಕಾಲಕ್ಕೆ ಓಡಿ ಹೋಗುತ್ತಿದ್ದರು. ಪಾಶ್ಚಾತ್ಯ ಶಾಸ್ತ್ರ ವಿಜ್ಞಾನಿಗಳೆಲ್ಲರಿಗೂ ಇದೇ ರೀತಿಯ ಅನುಭವವಿದೆ.

ಸ್ವಂತಕ್ಕಾಗಿ ಶ್ರಮಿಸುವವರೇ ಮದುವೆಗೆ ಮುಂದಾಗುತ್ತಾರೆ. ಸಮಾಜಕ್ಕಾಗಿ ಶ್ರಮಿಸುವವರು ಪರಿತ್ಯಾಗ ಜೀವನ ನಡೆಸಬೇಕೆನ್ನುವರು ಮದುವೆಗೆ ದೂರವಿರುತ್ತಾರೆ.

ಸುಖ ಭೋಗಗಳನ್ನು ನೀಡುತ್ತಿದ್ದರೆ ಮಾತ್ರ ಹೆಣ್ಣು ಬಾಳಿನ ಕಣ್ಣು! ನಿರಾದರಣೆ ಅಲಕ್ಷ್ಯಗಳನ್ನು ತೋರಿದರೇ ಹೆಣ್ಣು ಹುಣ್ಣಾಗಿಬಿಡುತ್ತಾಳೆ. ಬಾಳು ಬೂದಿ ಮಾಡುತ್ತಾಳೆ. ಆದರಿಂದ ಜ್ಞಾನಿಗಳು ಹೆಣ್ಣಿಗೆ ದೂರವಿರುತ್ತಾರೆ.

**ಆದರೇ,** ವಸಿಷ್ಠ, ವಿಶ್ವಾಮಿತ್ರ, ಗೌತಮ, ಅಗಸ್ತ್ಯ, ಅತ್ರಿ ಮುಂತಾದ ಮಹರ್ಷಿಗಳೆಲ್ಲರೂ ಸಂಸಾರಿಕರಾಗಿಯೇ ಉನ್ನತಿಯನ್ನು ಪಡೆದಿದ್ದಾರೆ. ತಾರಾಮಂಡಲದಲ್ಲಿ ಶಾಶ್ವತತ್ವ ಪಡೆದಿದ್ದಾರೆ.

**ಹೆಣ್ಣು ಶತ್ರುವು ಹೌದು! ಹೆಣ್ಣು ಮಿತ್ರಳೂ ಹೌದು!**

# ಪರಮೇಶ್ವರನ 25 ಲೀಲೆಗಳು

**ದಕ್ಷಿಣಾಮೂರ್ತಿ ಲೀಲೆಯು**

ಭೀಕ್ಷಾಟನ ಮೂರ್ತಿಯಾದ ಪರಮೇಶ್ವರನು, ವಿಷ್ಣು, ಬ್ರಹ್ಮ, ಇಂದ್ರ, ಅಗ್ನಿ, ಗಂಧರ್ವ, ಯಕ್ಷ, ಕಿನ್ನರ, ಕಿಂಪುರುಷರಿಂದ ಭಿಕ್ಷೆಯನ್ನು ಸ್ವೀಕರಿಸುತ್ತ ಯಮನಲ್ಲಿಗೆ ಬಂದನು. ಪರಮೇಶ್ವರನ ಆಗಮನ ಮಾತ್ರದಿಂದ ಯಮೋಲೋಕದಲ್ಲಿಯ ನರಕ ಯಾತನೆಗೊಳಪಟ್ಟಿದ್ದ ನಾಲ್ವತೆಂಟು ಕೋಟಿ ಜನರು ನರಕದಿಂದ ಮುಕ್ತರಾಗಿ ಕೈಲಾಸ ಹೊಂದಿದರು. ಅಷ್ಟ ದಿಕ್ಪಾಲಕರಿಂದ ಭಿಕ್ಷೆಯನ್ನು ಸ್ವೀಕರಿಸಿ ಆಮೇಲೆ ದಾರುಕಾವನವನ್ನು ಸೇರಿದರು.

ಅಲ್ಲಿ ಗೌತಮ, ಭೃಗು, ವಶಿಷ್ಠ, ವಿಶ್ವಾಮಿತ್ರ , ಕಶ್ಯಪ, ದಧೀಚಿ, ಜಮದಗ್ನಿ ಮೊದಲಾದ ಎಲ್ಲ ಋಷಿಗಳು ಶಿವಧ್ಯಾನಾಸಕ್ತರಾಗಿದ್ದರು. ಅವರ ಹೆಂಡಂದಿರು ಸಹ ಮಹಾಪತಿವೃತೆಯರಾಗಿದ್ದರು. ಈ ಮುನಿ ಸತಿಯರ ಪರೀಕ್ಷೆಗಾಗಿ ಪರಮೇಶ್ವರನು ಅತಿ ಸುಂದರಕಾಯನಾಗಿ ಋಷಿಗಳ ಹೆಂಡಂದಿರಲ್ಲಿ ಭಿಕ್ಷೆ ಬೇಡಲು ಪ್ರಾರಂಭಿಸಿದನು. ಆ ಋಷಿಗಳ ಹೆಂಡಂದಿರು ಪರಮೇಶ್ವರನ ದಿವ್ಯ ಸುಂದರಮೂರ್ತಿಗೆ ಮರುಳಾಗಿ ಅನ್ನ, ಬೆಣ್ಣೆ, ಹಾಲುಗಳನ್ನು ನೀಡುತ್ತಿದ್ದರು. ಅಲ್ಲದೆ ಪರಮೇಶ್ವರನ ಹಿಂಬಾಲಿಸಿ ತಿರುಗಹತ್ತಿದ್ದರು. ಪರಮೇಶ್ವರನ ಕಾರ್ಯಗಳಲ್ಲಿ ಮುನಿ ಸತಿಯರು ಕಂಗೆಟ್ಟು ತಿರುಗಾಡುತ್ತಿರಲು ಅವರು ಗರ್ಭಿಣಿಯರಾಗಿ ಪರಮೇಶ್ವರನ ಲೀಲಾ ಮಾತ್ರದಿಂದ ಶಿವನ ರೂಪದ ಶಿಶುಗಳನ್ನು ಹಡೆದರು.

ಇದನೆಲ್ಲ ಕಣಡು ಆ ದಾರುಕಾವನದ ಬಂದು ಮುನಿಗಳಿಗೆ–ಯಾವನೋ ಮಾಯಾನಿ ನಿಮ್ಮ ಹೆಂಡಂದಿರನ್ನು ಕರೆದುಕೊಂಡು ಹೋಗುತ್ತಿದ್ದಾನೆಂದು ದೂರಿತ್ತರು. ಕೂಡಲೇ ಋಷಿಗಳು ಸಿಟ್ಟಿನಿಂದ ಧ್ಯಾನದಿಂದ ನಿವೃತ್ತರಾಗಿ ಒಬ್ಬ ವಟುವನ್ನು ಕರೆದು ಆ ಮಾಯಾವಿಯಯನ್ನು ಹಿಡಿದು ಎಳೆದುಕೊಂಡು ಬಾ ಎಂದು ಆದೇಶವಿತ್ತರು. ವಟುವು ಹೋಗಿ ಪರಮೇಶ್ವರನನ್ನು ಮುನಿಗಳ ಆದೇಶದಂತೆ ಕರೆದನು. ಆದರೆ ಭಿಕ್ಷುಕನಾದ ಪರಮೇಶ್ವರನು ನಾನು ಭಿಕ್ಷೆಗಾಗಿ ಮಾತ್ರ ಬಂದವನು ಮತ್ತೆ ಯಾತಕ್ಕೂ ಬಂದಿಲ್ಲವೆಂದನು.

ವಟುವು ಬಂದು ಮುನಿಗಳಿಗೆ ನಡೆದಸಂಗತಿಯನ್ನು ತಿಳಿಸಿದನು. ಕೆರಳಿದ ಮುನಿಗಳು ಕೋಪಗೊಂಡು ತಾವೇ ಭಿಕ್ಷುಕನಿದ್ದಲ್ಲಿಗೆ ಬಂದರು. ಎಲ್ಲರೂ ಶಾಪಕೊಟ್ಟರು ಎಲ್ಲರ ಶಾಘಗಳು ವಿಫಲವಾದವು. ವಿಧ ವಿಧದ ದಿವ್ಯ ಮಂತ್ರಗಳನ್ನು ಆಮಂತ್ರಿಸಿ ದರ್ಭೆಯನ್ನು ಭಿಕ್ಷುಕನ ಕಡೆಗೆ ಎಸೆಯ ಹತ್ತಿದ್ದರು. ಅವೂ ನಿಷ್ಫಲವಾದವು. ಈ ಎಲ್ಲ ಪ್ರಯತ್ನಗಳು ವಿಫಲವಾದ ಮೇಲೆ ಕೊನೆಯದಾಗಿ ಮೃತ್ಯು ಹೋಮವನ್ನು ಮಾಡಿದರು. ಆ ಯಜ್ಞಕುಂಡದಿಂದ ಪ್ರಜ್ವಲಿತ ಜ್ವಾಲೆಗಳು, ವಿಷಸರ್ಪಗಳು, ಹದನಾದ ಆಯುಧಗಳು ಮುಂತಾದ ಶಕ್ತಿಗಳೆದ್ದು ಬಲಿಯನ್ನು ಬೇಢತೊಡಗಿದವು. ಋಷಿಗಳು ಕಣ್ಣುಸನ್ನೆಯಿಂದ ಭಿಕ್ಷುಕನನ್ನು ತೋರಿಸಲು. ಅವೆಲ್ಲ ಶಕ್ತಿಗಳು ಭಿಕ್ಷುಕನ ಕಡೆಗೆ ಧಾವಿಸುವಷ್ಟರಲ್ಲಿ ಕ್ಷಣದಲ್ಲಿ ಎಲ್ಲ ಶಕ್ತಿಗಳೂ ನಾಶವಾಗಿ ಹೋದವು.

ಇಷ್ಟಾದ ಮೇಲೆ ಋಷಿಗಳಿಗೆ ಬುದ್ಧೀಬಂದಿತು. ಆಗ ಇವನು ಭಿಕ್ಷುಕನಲ್ಲ ನಮ್ಮನ್ನು ಉದ್ಧರಿಸಲು ಬಂದ ಪರಮೇಶ್ವರನೆ ಎಂದು ಸನಿಹಕ್ಕೆ ಹೋಗಿ ನಮಸ್ಕರಿಸಿ ದೇವಾ ! ನಮ್ಮ ಸರ್ವಾಪರಾಧಗಳನ್ನು ಮನ್ನಿಸಿ ಕ್ಷಮಿಸೆಂದು ಅನನ್ಯಭಾವದಿಂಧ ಪ್ರಾರ್ಥಿಸಿದರು. ಆಗ ಪರಮೇಶ್ವರನು ಭಿಕ್ಷುಕ ವೇಷನ್ನು ಬಿಟ್ಟು ದಕ್ಷಿಣಮೂರ್ತಿಯಾದನು. ಹೇಗೆಂದರೆ–ಏಕಮುಖ, ತ್ರೀನೇತ್ರ ಚತುರ್ಭುಜಗಳು, ಅಮೃತದಂತಹ ಶುಭ್ರದೇಹ, ಭನಿತೋದ್ಧೊಳನ, ಚಂದ್ರನನ್ನು ಧರಿಸಿದವನಾಗಿ ನಾಗಭೂಷಣನೂ, ಕಪ್ಪುಗೊರಲನೂ ಆಗಿ ಬಂದು ಕಂಠದಲ್ಲಿ ರುದ್ರಾಕ್ಷಿಮಾಲೆಯ ಮತ್ತೊಂದು ಕರದಲ್ಲಿ ಅಮೃತಕಲಶವನ್ನೂ ಇನ್ನೊಂದು ಕರದಲ್ಲಿ ನಾಲ್ಕು ವೇದಗಳನ್ನು ಹಿಡಿದುಕೊಂಡು ನಾಲ್ಕನೆಯ ಕರವನ್ನು ಉಪದೇಶದ ಅಭಿನಯಕ್ಕಾಗಿ ಇಟ್ಟುಕೊಂಡು ಮೇರು ಪರ್ವತದ ಅಡಿಯಲ್ಲಿಯ ವಟವೃಕ್ಷದ ಬುಡದಲ್ಲಿ ವಜ್ರದ ಕೋಡಗಲ್ಲಿನ ಮೇಲೆ ಕುಳಿತನು.

ಮುಂದೆ ದಾರುಕಾ ವನದಲ್ಲಿಯ ಎಂಭತ್ತೆಂಟುಕೋಟಿ ಋಷಿಗಳನ್ನು ಕೂಡ್ರಿಸಿಕೊಂಡು ಆಗಮನವನ್ನು ಬೋಧಿಸಹತ್ತಿದನು. ಜನರ ಉದ್ಧಾರಕ್ಕಾಗಿ ವೇದಾಂತವನ್ನು ಬೋಧಿಸಿದನು. ಅವೆ ಉಪನಿಷತ್ ವಾಕ್ಯಗಳಾದವೂ. ಇದೇ ದಕ್ಷಿಣಾಮೂರ್ತಿ ಲೀಲೆಯಾಯಿತು. ಹೀಗೆ ಇಪ್ಪತೆರಡನೆಯದಾದ ದಕ್ಷಿಣಾಮೂರ್ತಿ ಲೀಲೆಯು ಮುಗಿದುದು.

---

ಮಹಾಕ್ಷತ್ರಿಯ

ಲೇ॥ ದೇವುಡು **ಎರಡು ತೂಕದ**

# ಕತ್ತಿ

ನೂತನ ದೇವೇಂದ್ರನು ದರ್ಶನಮಂದಿರದಲ್ಲಿ ವಿರಾಜದೇವಿಯೊಡನೆ ಶಚಿದೇವಿಗಾಗಿ ಕಾಯುತ್ತಿದ್ದಾನೆ. ಆಕೆಯು ಇಂದ್ರದರ್ಶನಕ್ಕೆ ಬರುವುದಾಗಿ ಹೇಳಿ ಕಳುಹಿಸಿದ್ದಾಳೆ. ಇಂದ್ರನಿಗೆ ಆಶ್ಚರ್ಯ. "ಹಿಂದಿನ ಇಂದ್ರನು ಹೊರಟು ಹೋದಂದಿನಿಂದ, ಅವನು ಅದೃಶ್ಯನಾದ ವೇಳೆಯಿಂದ, ಆತನಿಗಾಗಿ ಕಣ್ಣೀರಲ್ಲಿ ಕೈತೊಳೆಯುತ್ತ ಅಂತಃಪುರವನ್ನು ಬಿಟ್ಟು ಇಚೆಗೇ ಬರದಿದ್ದವಳು, ಈದಿನ ಇಲ್ಲಿಗೆ ಬರುವಳೇ? ಆಕೆಯು ದೇವಸಭೆಯ ನಿರ್ಣಯವನ್ನು ನಿಜವಾಗಿ ಗೌರವಿಸುವಳೆ? ಆ ಗರ್ವ ಗಂಧಿನಿಯು ಹೊಸ ಇಂದ್ರನನ್ನು ಸೇವಿಸಲು ಒಪ್ಪುವಳೆ ? ಅಥವಾ ದೇವಸಭೆಯ ನಿರ್ಣಯವು ಶಿರೋಧಾರ್ಯವೆಂದು, ಒಪ್ಪಲೇಬೇಕಾದುದೆಂದು, ಅದನ್ನು ಗೌರವಿಸಲು ತನ್ನ



ಹಿಂದೂಸ್ಥಾನ ಸಮಾಚಾರ ಪತ್ರಿಕೆಯ ಸ್ಥಾಪಕರು –ನಾರಾಯಣ ಗಿರಿಧರರಾವ್

ವೈಯಕ್ತಿಕ ಭಾವನೆಗಳನ್ನೆಲ್ಲ ಹತ್ತಿಟ್ಟು ಸಿದ್ಧವಾಗಿರುವಳೇ?" ಹಾಗೆಯೇ ಆತನ ಭಾವನೆಗಳೆಲ್ಲ ವಿಸ್ಮಯದಿಂದ ಕೂಡಿ, ಆತನನ್ನು ಎಲ್ಲಿಯೋ ಹೊತ್ತುಕೊಂಡು ಹೋಗುತ್ತಿವೆ.

ವಿರಾಜಾದೇವಿಯೂ ಈ ಸುದ್ದಿಯನ್ನು ಕೇಳಿ ವಿಸ್ಮಿತಳಾಗಿದ್ದಾಳೇ. ಆಕೆಯು ಶಚೀ ಹೃದಯದ ಸ್ಥಿತಿಯನ್ನು ಊಹಿಸಬಲ್ಲಳು. ಹೆಣ್ಣು ತನ್ನ ಹೆಣ್ಣುತನವನ್ನು ಬಿಟ್ಟು ತನ್ನ ಕೈ ಹಿಡಿದವನನ್ನು ತನ್ನನ್ನು ಹೆಣ್ಣೆಂದು ಮೊದಲು ಸಲ ತೋರಿಸಿಕೊಟ್ಟು ತನ್ನ ಬಾಳಿಗೊಂದು ಪೂರ್ಣತೆಯನ್ನು ಕೊಟ್ಟು ಗೌರವಿಸಿದವನನ್ನು ಬಿಟ್ಟು ಪರಪುರುಷನನ್ನು ಒಲ್ಯೆಸಲು ಸಿದ್ಧಳಾಗುವಳೆಂದು ನಂಬಲಾರಳು. ಅಲ್ಲದೆ ಆಕೆಗೆ ಇನ್ನೂ ಒಂದು ಯೋಚನೆ ಯೋಚನೆ: "ಎಷ್ಟೇ ಆಗಲಿ, ಶಚಿಯು ಪರಸ್ತ್ರೀಯಲ್ಲವೇ? ತನ್ನ ಗಂಡನು, ಆಕೆಯನ್ನು ಏನೇ ಕಾರಣದಿಂದಾಗಲಿ ಕೈ ಹಿಡಿದರೆ, ಆತನಿಗೆ ಈ ಪದವಿ, ಐಶ್ವರ್ಯಗಳು ಉಳಿಯುವುವೇ? ಆತನಿಗೇಕೆ ಈ ಯೋಚನೆ ಬಂತು?"

ಬಹುದಿನದ ಸಹವಾಸದಿಂದ ಉಂಟಾಗುವ ಅಭಿಮಾನ ಸಾಮಿಪ್ಯ ಮಮತೆಗಳಿಂದ ಆಕೆಯು ಗಂಡನನ್ನು ಕೇಳಿಯೂ ಬಿಟ್ಟಳು: "ದೇವ, ಇದುವರೆಗೂ ತಮಗೆ ಇಲ್ಲದ ಸ್ತ್ರೀ ಚಾಪಲ್ಯವು ಈಗೇಕೆ ಬಂತು?"

ಇಂದ್ರನು ಏನೋ ಯೋಚನೆಯಲ್ಲಿದ್ದನು. ವಿರಾಜಾದೇವಿಯಾಡಿದ ಮಾತನ್ನು ಕೇಳಿ ಅವನು ಬೆಚ್ಚಿದನು: "ಇಲ್ಲ ದೇವಿ, ನನಗೆ ಯಾವಾಗಲೂ ಸ್ತ್ರೀ ಚಾಪಲ್ಯವಿಲ್ಲವಲ್ಲ" ಎಂದನು.

"ಹಾಗಾದರೆ ಈಗ ಈ ಶಚೀಪ್ರಸಂಗವೇನು?"

"ಇದೇ ವಿಚಿತ್ರವಾಯಿತು ದೇವಿ. ನಾನು ಅಧಿಕಾರ ಪೂರ್ಣವಾಗಿದೆಯೇ ಎಂದು ಪ್ರಸಂಗವಶನಾಗಿ ಕೇಳಿದೆ. ನನ್ನ ಅಭಿಪ್ರಾಯವಿದ್ದುದು 'ನನ್ನ ಮರ್ತ್ಯತ್ವವನ್ನು ತೆಗೆದಿದ್ದೀರಾ? ನಾನು ಕೊನೆಯವರೆಗೂ ಇಂದ್ರನಾಗಿರುವೆನೇ?" ಎಂದು. ದೇವಗುರುಗಳು ಅದಕ್ಕೆ 'ಶಚೀಪತಿತ್ವವು ಲಭಿಸುವವರೆಗೂ ಅಧಿಕಾರವೂ ಪೂರ್ಣವಾಗುವುದಿಲ್ಲ' ಎಂದರು. ನಾನು ಮಾತಿನ ಭರದಲ್ಲಿ 'ಹಾಗಾದರೆ ಅಧೀಕಾರವನ್ನು ಪೂರ್ಣಮಾಡಿ ಕೊಡಿ' ಎಂದೆ. ಅದು ಇಷ್ಟೆಲ್ಲ ರಾದ್ಧಾಂತಕ್ಕಿಟ್ಟುಕೊಂಡಿದೆ. ಇದು ಹೇಗೆ ಮುಗಿಯುವುದೋ ನೋಡಬೇಕು."

"ಶಚೀದೇವಿಯು ಹೇಳಿಕಳಹಿಸಿರುವುದನ್ನು ನೋಡಿದರೆ, ಆಕೆಯು ಒಪ್ಪುವಂತಿದೆಯಲ್ಲಾ? ಒಪ್ಪಿದರೆ ಏನು ಮಾಡುವಿರಿ?"

"ಅದೇ ನನ್ನ ಧರ್ಮಸಂಕಟ. ಆಕೆಯು ಒಪ್ಪಿದರೂ ಕಾರ್ಯ ಕೆಟ್ಟಿತು. ಇದುವರೆಗೆ ದೇವಲೋಕದ ಅಪ್ಸರೆಯರನ್ನು ಅವರು ಲಭ್ಯವಾಗಿದ್ದರೂ ಕಣ್ಣೆತ್ತಿಯೂ ನೋಡದ ನಾನು ಶಚಿಯನ್ನು ಹೇಗೆ ಒಪ್ಪಿಕೊಳ್ಳಲಿ? ಆಕೆಯು ಒಪ್ಪಿಕೊಳ್ಳದಿದ್ದರೆ, ದೇವಋಷಿಪಿತೃಗಳೆಲ್ಲ ನನ್ನನ್ನು ಹಂಗಿಸುವರಲ್ಲಾ, ಏನು ಮಾಡಲಿ? ಇದೇ ನನಗೆ ಯೋಚನೆಯಾಗಿದೆ."

ವಿರಜಾದೇವಿಗೆ ತನ್ನ ಗಂಡನು ಮತ್ತೆ ಯಾವ ಸ್ತ್ರೀಯನ್ನೂ ಕಾಮುಕನಾಗಿ ನೋಡಲಿಲ್ಲವೆಂದು ಏನೋ ಒಂದು ಹೆಮ್ಮೆ. ಈ ಶಚೀಪ್ರಸಂಗವು ಎರಡು ತೂಕದ ಕತ್ತಿಯಾಗಿದ್ದು ಹಾಗೂ ಕತ್ತರಿಸುವುದು, ಹೀಗೂ ಕತ್ತರಿಸುವುದು. ಮುಂದೇನಾಗುವದೋ ಎಂದು ದಿಗಿಲು. ಆದರೂ ತನ್ನ ಗಂಡನು ಮನಃಪೂರ್ವಕವಾಗಿ ಆಕೆಯನ್ನು ಬಯಸಿಲ್ಲವೆಂದು ಒಂದು ಸಮಾಧಾನ ಅದೇ ಏನು ಹೆಣ್ಣು ಹೃದಯ? ತಾನೊಲಿದಿರುವ ಗಂಡು ಇನ್ನೊಂದು ಹೆಣ್ಣನ್ನು ಬಯಸಿಲ್ಲ ಎಂದರೆ ಏಕೆ ಸಮಾಧಾನವಾಗಬೇಕು?

ಅಂತೂ ಇನ್ನೆರಡು ಸಲ ಅವರು ನಿಟ್ಟುಸಿರುಬಿಡುವುದರೊಳಗಾಗಿ ಶಚೀದೇವಿಯು ಬಂದಳು. ಇಂದ್ರಾಣಿಯೆಂದು ಆಡಂಬರವೇನೂ ಇಲ್ಲ. ಶಾಂತಿದೂತನಂತೆ ಬಿಳಿಯ ವಸ್ತ್ರವನ್ನಿಟ್ಟಿದ್ದಾಳೆ. ಆ ವಸ್ತ್ರವು ಆಕಾಶಮಾರ್ಗದಲ್ಲಿ ಚಂದ್ರಮನ ಐಸಿರಿಯು ದಿಗಂತಗಳವರೆಗೂ ವ್ಯಾಪಿಸಿ ಶೋಭಿಸುತ್ತಿರುವಾಗ ಮರೆಯುವ ನಕ್ಷತ್ರಪಥದಂತೆ ವಜ್ರಕಣವಿಶೋಭಿತವಾಗಿದೆ. ಕೆನೆಯ ಬಣ್ಣದ ರವಿಕೆಯನ್ನು ಧರಿಸಿದ್ದಾಳೆ. ಅದರ ಮೇಲೆ ಚುಮುಕಿಸಿದಂತೆ ಕೆತ್ತಿರುವ ನವರತ್ನಗಳು ಮೃಗಶಿರಾ ನಕ್ಷತ್ರಪುಂಜದಂತೆ ಥಳಥಳ ಎನ್ನುತ್ತಿವೆ. ಕಿವಿಯಲ್ಲಿರುವ ವಜ್ರದ ಓಲೆಗಳು ಪುನರ್ವಸು ಪುಂಜದ ಯೋಗತಾರೆಯಂತೆ, ಎರಡು ದೀಪಗಳನ್ನು ಇಟ್ಟಂತೆ ಬೆಳಗುತ್ತಿವೆ. ಕೊರಳಲ್ಲಿ ಕಟ್ಟಿಕೊಂಡಿರುವ ತಾಳಿಯು ತನ್ನ ಸುತ್ತಲೂ ಇರುವ ಜೀವರತ್ನಗಳಿಗಿಂತ ಪ್ರಕಾಶವಾಗಿ ಮರೆಯುತ್ತಿವೆ. ಕೈಯಲ್ಲಿರುವ ರತ್ನದ ಬಳೆಗಳು ಜಂಗಮ ದೇವಕಾಂತಿಯಂತೆ ಹೊಳೆಯುತ್ತಿವೆ. ಎಡಗೈಯ ಬೆರಳಿನಲ್ಲಿ ಹರಳಿನುಂಗುರವೊಂದು. ಇದರ ಹರಳು ಪೂರ್ವಾಕಾಶದಲ್ಲಿ ಚಂದ್ರನಿಲ್ಲದಿರುವಾಗ ಮರೆಯುವ ಸ್ವಾತೀ ನಕ್ಷತ್ರದಂತೆ ವಿರಾಜಿಸುತ್ತಿದೆ. ನಡುವಿನಲ್ಲಿ ಒಂದು ಸಿಂಹ ಮೇಖಲೆ. ತಲೆಯ ಮೇಲೆ ಧರಿಸಿದ ರತ್ನ ಕಿರೀಟವೂ, ಹಣೆಯ ಮೇಲಿರುವ ಜೀವರತ್ನವೂ, ಹೊದ್ದಿರುವ ವಿದ್ಯುನ್ಮಾಲಾ ಸುಂದರವಾದ ತೆಳುಮೋಡದಂತಿರುವ ಹೊದಿಕೆಯು ಆಕೆಯ ಅಂತಸ್ತನ್ನು ಉದ್ಘೋಷಿಸುತ್ತಿವೆ. ಪ್ರಹರಿಯು ಆಕೆಯನ್ನು ರಾಜಸನ್ನಿಧಾನದಲ್ಲಿ ಬಿಟ್ಟು ನೆಲಮುಟ್ಟಿ ಪ್ರಣಾಮ ಮಾಡಿ ಬಾಗಿಲಿನಿಂದಾಚೆಗೆ ಹೋದಳು.

ಶಚೀದೇವಿಯು ಇಂದ್ರನಿಗೆ ಬಗ್ಗಿ ಪ್ರಣಾಮ ಮಾಡಿದಳು. ವಿರಾಜದೇವಿಯತ್ತ ತಿರುಗಿ ಪ್ರಣಾಮ ಮಾಡುವುದರೊಳಗಾಗಿ ಆಕೆಯೇ ಬಂದು ಶಚೀದೇವಿಯನ್ನು ಆಲಂಗಿಸಿ, "ದೇವಿಗೆ ಜಯವಾಗಲಿ! ನಿನ್ನನ್ನು ಪೂಜಿಸಿ, ನಿನ್ನ ಕೃಪೆಯಿಂದ ದೊಡ್ಡವರಾದವರು ನಾವು. ನಮಗೆ ಆಶೀರ್ವಾದ ಮಾಡಬೇಕು ತಾಯಿ!" ಎಂಥು ವಿನಯವಾಗಿ ಆಕೆಯನ್ನು ಕುಳ್ಳಿರಿಸಿಕೊಂಡಳು. ಇಂದ್ರನು ಆ ವೇಳೆಗೆ ಆಸನದಲ್ಲಿ ಮಂಡಿಸಿರುವುದನ್ನು ನೋಡಿ ಶಚಿಯು ತಾನೂ ಕುಳಿತಳು.

ನಹುಷನು ಆಕೆಯನ್ನು ನೋಡಿ ಆಶ್ಚರ್ಯಪಟ್ಟನು. ಉಜ್ವಲವಾದರೂ ಶಾಂತವಾದ ಆ ರೂಪರಾಶಿಯನ್ನು ಆ ಅಂಗಸೌಷ್ಠವವನ್ನು ಮಿತಿಯನ್ನು ಯಾವ ರೀತಿಯಲ್ಲೂ ಮೀರದಂತೆ, ಜೋಡಿಸಿಟ್ಟಿರುವಂತೆ ಮರೆಯುತ್ತಿರುವ ಅಂಗಾಂಗಗಳ ಸೌಭಾಗ್ಯವನ್ನು ನೋಡಿ

ವಿಸ್ಮಿತನಾದನು. ಮನುಷ್ಯಲೋಕದಲ್ಲಿರಲಿ, ದೇವಲೋಕದಲ್ಲಿರಲಿ, ದೇವಲೋಕದಲ್ಲಿಯೂ ಅಂತಹ ರೂಪಸೌಭಾಗ್ಯ ಸಂಪನ್ನೆಯಿನ್ನೊಬ್ಬಳಿಲ್ಲ. ರಂಭೆ, ಮೇನಕೆ, ಊರ್ವಶಿ, ತಿಲೋತ್ತಮೆ, ಯಾರು ಆಕೆಯ ಬಳಿಯೂ ನಿಲ್ಲುವಂತಿಲ್ಲ. ಆತನಿಗೆ ಎನ್ನಿಸಿತು; "ಹೌದು, ಈ ಪುಣ್ಯಾವಂತೆಯಯನ್ನು ಪಡೆಯದೆ ಇಂದ್ರಾಧಿಕಾರವು ಯಾವ ರೀತಿಯಲ್ಲೂ ಪೂರ್ಣವಲ್ಲ. ಚೆನ್ನಾಗಿ ಸವಾರಿಯನ್ನು ಬಲ್ಲವನ್ನು ಸೊಗಸಾದ ಕುದುರೆಯನ್ನು ನೋಡಿ, 'ಇದನ್ನೇರಿ ವಿಹರಿಸದಿದ್ದರೆ ನಾನು ಸವಾರಿಯನ್ನು ಕಲಿತೇನು ಫಲ?' ಎಂಬತೆ, ಆ ದಿವ್ಯಸ್ತ್ರೀಯನ್ನು ನೋಡಿ, ಆಕೆಯ ಸೌಭಾಗ್ಯಾತಿಶಯವನ್ನು ಕಂಡು, ಆತನ ಮನಸ್ಸು ಒಮ್ಮೆ ತೊನೆಯಿತು. ಕೂಡಲೇ ಆ ಮನಸ್ಸು ಧರ್ಮದತ್ತ ತಿರುಗಿ, ಧರ್ಮಪತ್ನಿಯಾದ ವೀರಾಜಾದೆವಿಯನ್ನು ಕಂಡು, "ಹೌದು. ನದಿಯಲ್ಲಿ ಸಮುದ್ರದಷ್ಟು ನೀರಿಲ್ಲ. ಆದರೂ ಬಾಯಾರಿದವರಿಗೆ ಬೇಕಾದುದು ನದಿಯ ನೀರೇ!" ಎಂದುಕೊಂಡನು.

ಶಚಿಯು ತಾನೇ ಮೊದಲು ಮಾತನಾಡಿದಳು: "ದೇವೇಂದ್ರನಿಗೆ ವಿಜಯವಾಗಲಿ ! ದೇವಸಭೆಯು ನಾನು ಇಂದ್ರನನ್ನು ಕಾಯಾ ವಾಚಾ ಮನಸಾ ಸೇವಿಸಬೇಕೆಂದು ನಿರ್ಣಯಮಾಡಿದೆ. ಆ ಸಭೆಯು ಮಾಡಿದ ನಿರ್ಣಯವೆಂದರೆ ಅದು ನಮ್ಮೆಲ್ಲರಿಗೂ ಶಿರೋಧಾರ್ಯವಾದುದು. ಆದರೆ ಒಂದು ಅಡ್ಡಿಯಿದೆ. ನಾನು ಇಂದ್ರನನ್ನು ಪತಿಯೆಂದು ಸೇವಿಸಿದ್ದೆನು. ಆತನು ಹೊರಟು ಹೋಗುವಾಗ ನಮಗೆ ಯಾರಿಗೂ, ಹೇಳದೆ ಹೊರಟು ಹೋಗಿದ್ದಾನೆ. ನಾನು ಆತನ ನೆರಳಿನಂತೆ ಇದ್ದವಳು. ನನಗೆ ಹೇಳದೆ ಆತನು ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಅಂಥದರಲ್ಲಿ ಹೀಗೆ ಹೇಳದೆ ಹೊರಟು ಹೋಗಿರುವುದು ಇನ್ನೂ ಆಶ್ಚರ್ಯಕರವಾಗಿದೆ. ಆತನು ದುಡುಕಿದನೆಂದು ನಾನೂ ದುಡುಕುವುದು ಸ್ತ್ರೀಸ್ವಭಾವಕ್ಕೆ ಸರಿಹೋಗುವುದಿಲ್ಲ. ಆದರಿಂದ, ಧರ್ಮಶಾಸ್ತ್ರದಲ್ಲಿ, ದೇಶಾಂತರತನಾದ ಪತಿಯನ್ನು ಪತ್ನಿಯಾದವಳು ಎಷ್ಟು ದಿನ ನಿರೀಕ್ಷಿಸಬೇಕು ಎಂದು ಹೇಳಿದೆಯೋ ಅಷ್ಟು ದಿನ ನಿರೀಕ್ಷಿಸಲು ಅಪ್ಪಣೆಯಾಗಬೇಕು."

ನಹುಷನು ಆಕೆಯ ಮಾತಿನಲ್ಲಿರುವ ಅರ್ಥವನ್ನು ಪೂರ್ಣವಾಗಿ ಗ್ರಹಿಸಿದನು. ಆ ಭಾಮಿನಿಯು ಸ್ಪಷ್ಟವಾಗಿ ಆಡಿರುವ ಮಾತುಗಳಲ್ಲಿ ಶಂಕೆಗೆ ಏನೂ ಕಾರಣವಿಲ್ಲ. "ದೇವೇಂದ್ರನಿಗೆ ವಿಜಯವಾಗಲಿ." ಆ ಮಾತು ಇಂದಿನ ಇಂದ್ರನಿಗಾದರೂ ಅನ್ವಯಿಸಬಹುದು: ಹಿಂದಿನ ಇಂದ್ರನಿಗಾದರೂ ಅನ್ವಯಿಸಬಹುದು. "ದೇವ ಸಭೆಯು ನಾನು ಇಂದ್ರನನ್ನು ಕಾಯಾ ವಾಚಾ ಸೇವಿಸಬೇಕೆಂದು ನಿರ್ಣಯ ಮಾಡಿದೆ." ಅದೂ ಅಷ್ಟೆ! ಉಭಯರಿಗೂ ಅನ್ವಯಿಸುತ್ತದೆ. "ಆದರೆ ನಾನು ಇಂದ್ರನನ್ನು ಪತಿಯೆಂದು ಸೇವಿಸಿದ್ದೇನೆ." ಅಲ್ಲಿದೆ ವಿಷ. "ನಾನು ಆತನನ್ನು ಪತಿಯೆಂದು ಸೇವಿಸಿರಲು ನಿನಗೆ ಪರಪತ್ನಿ ಎಚ್ಚರಿಕೆ! ನಿನ್ನ ಅಧಿಕಾರಬಲದಿಂದ ನೀನು ನನ್ನನ್ನು ಆಕ್ರಮಿಸಿದರೆ, ಈ ಇಂದ್ರಲಕ್ಷ್ಮಿಯು ನನಗೆ ದೂರವಾದಳು" ಎಂದು ಸ್ಪಷ್ಟಾರ್ಥ. ಇದರ ಮೇಲೆ, ಧರ್ಮಶಾಸ್ತ್ರದ ಮಾತೂ ಇದಕ್ಕೆ ಅನುಗುಣವಾಗಿಯೇ ಇದೆ. "ಆಕೆಯು ಈಗ ಮಾಡುವುದು ಪತಿನಿರೀಕ್ಷೆ. ಒಪ್ಪದಿದ್ದರೆ ಧರ್ಮದ್ರೋಹ ಒಪ್ಪಿದ್ದರೆ ಆತ್ಮದ್ರೋಹ. ಆಕೆಯ ನಿರೀಕ್ಷೆಯು ಸಫಲವಾದರೂ ನಮಗೆ ಇಂದ್ರಪದವಿಯಿಲ್ಲ; ವಿಫಲವಾದರೆ ನಾವಾಗಿ ಕಳೆದುಕೊಳ್ಳಲು ದಾರಿ ಮಾಡಿಕೊಂಡಂತಾಯಿತು. ಅಂತೂ ಈಕೆಯು ಬಂದು, "ನೀನು ಇಂದ್ರನಾಗಿರುವುದು ಕೆಲವು ದಿನ ಮಾತ್ರ" ಎಂದು ಕಾಲಕ್ಕೆ ಅಂಚು ಕಟ್ಟಿಟ್ಟಂತಾಯಿತು ಎಂದು ವಿಷಣ್ಣನಾಗಿ ಕರದಲ್ಲಿ ಕಪೋಲವನ್ನಿಟ್ಟು ಚಿಂತಿಸಿದನು. ವಿರಾಜಾದೇವಿಯು ರತ್ನರಾಶಿಯ ಮುಂದೆ ಪೆಚ್ಚಾಗಿರುವ ಏಕರತ್ನದಂತೆ ಸಂಕುಚಿತಮನಸ್ಕಳಾಗಿ, ಎಲ್ಲಾ ವಿಧದಲ್ಲೂ ಸಂಕೋಚಮಾಡಿಕೊಂಡು ಕುಳಿತಿದ್ದಳು.

ಶಚಿಯು ಒಂದೇ ನಿಮಿಷದಲ್ಲಿ ಅರಸನ ಧರ್ಮಸಂಕಟವನ್ನು ತಿಳಿದಳು. ಬೇಟೆಗೆ ಆಳವಾದ ಗಾಯವನ್ನು ಮಾಡಿದ್ದರೂ, ಬೇಟೆಯು ಓಡಿಹೋದರೂ ಬದುಕುವುದಿಲ್ಲವೆಂದು ಗೊತ್ತಾಗಿದ್ದರೂ, ಆಟವಾಡುತ್ತ ಬೇಟೆಯ ಗಾಯಕ್ಕೆ ಮದ್ದು ಬಳಿಯುವ ಬೇಟೆಗಾರನಂತೆ, ಅರಸನ ಮನೋಭಿಪ್ರಾಯವನ್ನು ಬೇರೆಯಾಗಿ ಅರ್ಥಮಾಡಿಕೊಂಡಿರುವ ಮುಗ್ಧೆಯಂತೆ ಹೇಳಿದಳು; "ಇಂದ್ರನು ಸರ್ವಜ್ಯೇಷ್ಠನು. ಎಲ್ಲರನ್ನೂ ಧರ್ಮದಲ್ಲಿ ನಡೆಯುವಂತೆ ಪ್ರೇರಿಸುವವನಾತನು. ಆತನು ಇದು ಧರ್ಮವೆಂದು ಬೇರೆ ದಾರಿಯ ಇನ್ನು ತೋರಿಸಿದರೂ ನಾನು ನಡೆಯುವುದಕ್ಕೆ ಸಿದ್ಧಳಾಗಿರುವೆನು!" ಆ ಮಾತಿನಲ್ಲಿ "ನಾನು ಗೆದ್ದನು ದಿಗಿಲಿಲ್ಲ" ಎಂಬ ಚತುರೆಯ ನಂಬಿಕೆಯಿತ್ತು. "ಘಾತವು ಮಾರ್ಮಿಕವಾಗಿದೆ. ಬೇಟೆಯಲ್ಲಿ ಗೆದ್ದೆ" ಎಂಬ ಬೇಟೆಗಾರನ ಆತ್ಮಶ್ರದ್ಧೆ ಇತ್ತು.

ಅರಸನು ಶಚೀವಾಕ್ಯಗಳಿಂದ ಮರ್ಮಾಹತನಾಗಿದ್ದರೂ, ರೇಗಿದ್ದರೂ ಕಾರಣಾಂತರಗಳಿಂದ ಶಾಂತವಾರಬೇಕಾದ ನಾಗರಾಜನಂತೆ ಒಳಗೇ ಪರಿತಪಿಸುತ್ತಿದ್ದಾನೆ. "ಇವಳು ನಾರಿಯಲ್ಲ ಮಾರಿ" ಎನ್ನುವುದು ಮನಸ್ಸಿಗೆ ಚೆನ್ನಾಗಿ ಅರ್ಥವಾಗಿ ಪ್ರತಿಕ್ರಿಯೆ ಮಾಡಬೇಕೆನ್ನುವ ಘಟ್ಟಕ್ಕೆ ಅದು ಏರುತ್ತಿದೆ. ಆದರೂ ತಾನೂ ಇಂದ್ರ, ಇಂದ್ರನ ಗೌರವಕ್ಕೆ ಚ್ಯುತಿಯಿಲ್ಲದಂತೆ ನಡೆಯಲೇಬೇಕು ಎಂಬ ನಿರ್ಧಾರವು ಎಲ್ಲದಕ್ಕಿಂತ ಬಲವಾಗಿ ಕುಳಿತಿದೆ. ಆದರೂ, ಶಚಿಯು ಅಂತಃಪ್ರಾಣ ಘಾತಿನಿಯಾಗದಿದ್ದರೂ ಬಹಿಃಪ್ರಾಣವಾದ ಅರ್ಥವನ್ನು ಘಾತಿಸುವವಳೆಂದು ಪ್ರತ್ಯಕ್ಷವಾಗಿದೆ. ಇನ್ನು ಮಾತೇಕೆ?

ಅರಸನು ಒಂದು ಗಳಿಗೆ ನಿರುತ್ತರನಾಗಿದ್ದು ಹೇಳಿದನು: "ಶಚೀದೇವಿ, ಇಂದ್ರನು ಧರ್ಮವಿರೋಧಿಯಲ್ಲ. ಅವರವರು ಧರ್ಮವೆಂದು ಒಪ್ಪಿಕೊಂಡಿರುವುದನ್ನೇ ಪಾಲಿಸಬೇಕಾದುದು ಇಲ್ಲಿಯ ಧರ್ಮ. ಆದರಿಂದ ನೀನು ಪತಿಯೆಂದು ಗ್ರಹಿಸಿರುವ ಇಂದ್ರನನ್ನು ಪ್ರತೀಕ್ಷಿಸಲು ಕಾಲಾವಧಿಯುಂಟು. ಅದು ನಿನಗೆ ಲಭಿಸಿರುವುದು. ಅಷ್ಟೇ ಅಲ್ಲ. ನಿನ್ನ ಪತಿಯನ್ನು ನೀನು ಹುಡುಕಲೂ ನಿನಗೆ ಅಧಿಕಾರವುಂಟು. ಹುಡುಕು, ಹುಡುಕಿಸು, ಹೋಗಿ ಬಾ" ಎಂದು ಸಮಚಿತ್ತನಾಗಿ ಹೇಳಿದನು.

ಶಚಿಯು ಈ ಉತ್ತರಕ್ಕೆ ಬದ್ಧಳಾಗಿರಲಿಲ್ಲ. ಆಕೆಯ ದೃಷ್ಟಿಯಲ್ಲಿ ನಹುಷನು 'ಅರ್ಥಪರಃ ಕಾಮಚಪಲ ; ಆದರಿಂದ ತನ್ನನ್ನು ಬಯಸಿದನು' ಎಂದಿತ್ತು. ಆದರೂ ತಾನೇ ಎದುರಿಗೆ ಬಂದಿದ್ದರೂ ಯಾವ ಕಾರ್ಪಣ್ಯಕ್ಕೂ ಎಡಗೊಡದೆ ಸಮಚಿತ್ತನಾಗಿರುವುದನ್ನು

ನೋಡಿ ಆಶ್ಚರ್ಯವಾಯಿತು. ಅದುವರೆಗೂ ನಹುಷನೆಂದರೆ ಒಬ್ಬ ಮಾನವ ಎನ್ನುತ್ತಿದ್ದ ಆಕೆ, ಸಮ್ಮುಖದಲ್ಲಿ ನಹುಷನನ್ನು ಕಂಡು, ಆತನ ಆಚಾರವನ್ನು ನೋಡಿ, ಆತನ ಅಂತಸ್ಥವನ್ನು ತಿಳಿದು ವಿಸ್ಮಿತಳಾಗಿದ್ದಾಳೇ. ಋಷಿಪತ್ನಿಗಾಗಿ ಬಾಯಿ ಬಾಯಿ ಬಿಟ್ಟ ತನ್ನ ಅಧಿಕಾರವನ್ನು ಉಳಿಸಿಕೊಳ್ಳುಲು ಏನು ಬೇಕಾದರೂ ಮಾಡುವುದಕ್ಕೆ ಸಿದ್ಧನಾಗಿದ್ದ ತನ್ನ ಪತಿಯೊಡನೆ ಆತನನ್ನು ಹೋಲಿಸಿ, "ನಹುಷನು ನಿಜವಾಗಿ ಮಹಾನುಭಾವ!" ಎಂಬ ಸಿದ್ಧಾಂತಕ್ಕೆ ಬಂದಿದ್ದಾಳೆ. "ಈತನು ಇಂದ್ರನಾಗಿರುವುದು ಮೂರು ಲೋಕದ ಸೌಭಾಗ್ಯ! ಆದರೆ, ಹುಂ ವಿಧಿಯಾಟ. ಈ ಮಹಾಪುರುಷನನ್ನು ಈ ಪದವಿಯಿಂದ ಉರುಳಿಸುವ ದೌರ್ಭಾಗ್ಯ ನನ್ನ ಹಣೆಯಲ್ಲಿ ಬರೆದಿದೆಯೋ ಏನೋ?" ಎಂದು ವಿಷಾದಪಡುತ್ತಿದ್ದಾಳೆ. "ಈ ಇಂದ್ರನು ನಿಜವಾಗಿ ಧರ್ಮಪರಾಯಣ" ಎಂದು ಮನಸ್ಸು ಹರ್ಷಗೊಂಡಿದೆ.

ನಹುಷನು ಮತ್ತೊಂದು ಮಾತನ್ನೂ ಆಡದೆ ಮೇಲಕ್ಕೆದ್ದನು. ಅದನ್ನು ಕಂಡು ವಿರಾಜದೇವಿಯು ಮೇಲಕ್ಕೆದ್ದು ಸಡಗರದಿಂದ ಮಂಗಳದ್ರವ್ಯಗಳನ್ನೂ ಫಲತಾಂಬೂಲಗಳನ್ನೂ ಇಟ್ಟಿದ್ದ ರತ್ನದ ತಟ್ಟೆಯನ್ನು ತಂದು ಶಚೀದೇವಿಗೆ ಒಪ್ಪಿಸಿದಳು. ಅದೆಲ್ಲವನ್ನೂ ನೋಡಿ ಶಚಿಗೆ ಆನಂದವು ತಾನೇತಾನಾಗಿ ಕಣ್ಣಲ್ಲಿ ನೀರಾಗಿ ಹರಿಯಿತು. ವಿರಾಜದೇವಿಯನ್ನು ಬಾಚಿ ತಬ್ಬಿಕೊಂಡು "ತಂಗೀ, ನಿನ್ನ ವೈಭವವು ಅಖಂಡವಾಗಿ ಇರಲಿ" ಎಂದು ಆಶೀರ್ವಾದ ಮಾಡಿ, ಇಂದ್ರನಿಗೆ ಮತ್ತೆ ಬಗ್ಗಿ ನೆಲಮುಟ್ಟಿ ನಮಸ್ಕಾರಮಾಡಿ ಹೊರಟುಹೋದಳು.

ಆಕೆಯು ಹೊರಕ್ಕೆ ಹೋಗಿ ಕಣ್ಮರೆಯಾದ ಮೇಲೆ, ನಹುಷನು ವಿರಜೆಯನ್ನು ಆಲಿಂಗಿಸಿಕೊಂಡು, "ದೇವಿ, ದೇವತೆಗಳು ತಮ್ಮ ಆಟವನ್ನು ಚೆನ್ನಾಗಿ ಆಡಿದರು" ಎಂದನು. ದೇವಿಯು ಏನು ಎಂದು ತಲೆಯೆತ್ತಿ ನೋಡಲು, ಅರಸನು "ದೇವಿ, ದೇವತೆಗಳು ಯಾವಾಗಲೂ ವಿಷಮಿಶ್ರಿತವಾದ ಮೃಷ್ಟಾನ್ನವನ್ನು ವರವಾಗಿ ನಮಗೆ ಕೊಡುವರು. ನಾವು ಆ ಮೃಷ್ಟಾನ್ನವನ್ನು ನೋಡುವವೇ ಹೊರತು ಅದರಲ್ಲಿರುವ ವಿಷಯವನ್ನು ಕಾಣಲಾರೆವು. ಅದು ನಮ್ಮ ದುರದೃಷ್ಟ!" ಎಂದನು.

ಅಲ್ಲಿಗೂ ವಿರಾಜದೇವಿಯು ಅರ್ಥಮಾಡಿಕೊಳ್ಳದಿರಲು, "ಹೋಗಲಿ, ಬಿಡು, ಅನಿತ್ಯವಾದ ಅರ್ಥಕ್ಕೆ ಹಾನಿಯಾದರೂ, ನಿತ್ಯವಾದ ಧರ್ಮವನ್ನು ಪಾಲಿಸಿದಂತಾಯಿತು" ಎಂದನು.

ವಿರಾಜದೇವಿಯು ಅನ್ಯಮನಸ್ಕಳಾಗಿದ್ದವಳು "ನಿಜ, ಶಚಿಯು ಸಿಕ್ಕಿದರೂ ಕೆಲಸ ಕೆಟ್ಟಿತು. ಸಿಕ್ಕದಿದ್ದರೂ ಕೆಲಸ ಕೆಟ್ಟಿತು. ಅದಿರಲಿ, ತಮ್ಮನ್ನು ಶಚಿಯು ಒಲಿದರೆ ನನ್ನ ಗತೀಯೇನು?" ಎಂದಳು.

ಅರಸನಿಗೆ ಹೋಗಿದ್ದ ಅಸುವು ಬಂತು; "ಶಚಿಯು ಒಲಿದರೂ ನಾನು ಒಲಿಯುವುದಿಲ್ಲ. ನಾನು ಗ್ರಹಚಾರವಾನಾಗಿ ಒಲಿದರೂ, ಅವಳು ಅರ್ಥ ಪತ್ನಿ ನೀನು ಧರ್ಮಪತ್ನಿ ಹಾನಿಯೆಲ್ಲ ನನ್ನದು. ನಿನಗೆ ಒಳ್ಳಷ್ಟೂ ಹಾನಿಯಿಲ್ಲ. ಇದು ನನ್ನ ವರ ಸಾಕೇ?"

---

ಬದುಕಲೊಂದಿಷ್ಟು ಆಪ್ತ ಮಾತು

ಲೇ : ಬಿ.ಎನ್.ರಮೇಶ ಬೊಂಗಳೆ

# ಸೂಕ್ಷ್ಮ ಹಾಗೂ ಯಥಾರ್ಥ ತಿಳುವಳಿಕೆ

ಯಾವುದೇ ವಿಚಾರವನ್ನು ಉತ್ಪ್ರೇಕ್ಷಿಸಿ ನುಡಿಯುವುದು ನಮ್ಮ ಸ್ವಭಾವವೇ ಆಗಿದೆ. ಸುಳ್ಳೆನ್ನುವುದು ನಮ್ಮ ನರ–ನಾಡಿಗಳಲ್ಲಿಯೂ ತುಂಬಿದೆ. ಅದನ್ನು ಹೊರ ದಬ್ಬಿದಾಗ ಮಾತ್ರವೇ ನಾವು ಸುಖಿ ಹಾಗೂ ಶಾಂತ ಜೀವನ ನಡೆಸಬಹುದು. ಮಾನವ ಸ್ವಭಾವದಿಂದಲೆ ಸರಳ ಹಾಗೂ ಆಡಂಬರವಿಲ್ಲದ 'ಸತ್ಯ'ವನ್ನು ಇಷ್ಟಪಡುತ್ತಾನೆ. ಆದರಿಂದ ದೃಢ ಚಾರಿತ್ರ್ಯದ ಪರಿಚಯ ಸಿಗುತ್ತದೆ. ಆದರೆ ಈ ಕೆಳಗಿನ ಅಂಶಗಳು ಅವನನ್ನು ಟೊಳ್ಳಾಗಿಸಲೂ ಬಹುದು.

ಇನ್ನೊಬ್ಬರಿಗೆ ರುಚಿಸುವುದಿಲ್ಲವೆಂದು ಸವಿಯಾದ, ದ್ವಂದ್ವಾರ್ಥದ, ಇಲ್ಲವೆ ಅತಿ ರಂಜಿತವಾದ ಮಾತುಗಳನ್ನಾಡುವುದು, ಮನಸ್ಸಿರದಿದ್ದರೂ ಅನ್ಯರೊಂದಿಗೆ ಸಮ್ಮತಿಸುವ ಭಾವವನ್ನು ವ್ಯಕ್ತಪಡಿಸುವುದು, ತಮ್ಮ ನೈಜ ಭಾವನೆಗಳನ್ನು ಅದುಮಿಟ್ಟುಕೊಂಡು ಕಣ್ಣುಗಳಲ್ಲಿ ಪ್ರಸನ್ನತೆಯನ್ನು ಪ್ರದರ್ಶಿಸುವುದು. ಗೊತ್ತಿರದ ವಿಷಯವನ್ನು ಗೊತ್ತಿದೆಯೆನ್ನುವಂತೆ ಹೇಳುವುದು.

ಯಾರಲ್ಲಿ ಸೂಕ್ಷ್ಮ ದೃಷ್ಟಿಯ ಅಭ್ಯಾಸವಿರುವುದಿಲ್ಲವೋ ಕಣ್ಣು ಹಾಗೂ ಬುದ್ಧಿ ಸೂಕ್ಷ್ಮವಾಗಿ ಅವಲೋಕಿಸುವುದಿಲ್ಲವೋ ಅಂತಹವರು ಜಗತ್ತಿನಲ್ಲಿ ಯಾವುದೇ ವಿಶೇಷವಾದ ಕಾರ್ಯವನ್ನೆಸಗಲಾರರು. ರೈಲ್ವೆ ಹಳ್ಳಿಯಲ್ಲಿನ ಕೆಲವೊಂದು ಫಿಶ್‌ಪ್ಲೇಟ್‌ಗಳನ್ನು ಯಾರೋ ಕಿಡಿಗೇಡಿಗಳು ಬಿಚ್ಚಿದ್ದ ಕಾರಣ ಆ ಮಾರ್ಗದ ರೈಲಿನಲ್ಲಿ ಕುಳಿತಿದ್ದ ವಿಶ್ವೇಶ್ವರಯ್ಯನವರಿಗೆ ಅದರ ಅಸಹಜವಾದ ಶಬ್ದ ಅವರನ್ನು ರೈಲು ತಡೆಯುವಂತೆ ಮಾಡಿ ಅಪಘಾತ ತಪ್ಪಿಸುತ್ತದೆ. ಇದು ಅವರ ಸೂಕ್ಷ್ಮದೃಷ್ಟಿಗೆ ಒಂದು ಉದಾಹರಣೆಯಷ್ಟೇ.

ಒಂದೊಮ್ಮೆ ಯಾರೇ ಮಾಲೀಕ ಯಾವಾಗಲೂ ಕೆಲಸಗಾರನಿಗೆ ಕೆಲಸದ ಬಗ್ಗೆ ತಿಳುವಳಿಕೆ ನೀಡುತ್ತಿರುವುದಕ್ಕಿಂತ ಆತ ಸ್ವತಃ ಆ ಕೆಲಸವನ್ನು ಮಾಡುವುದು ಬಹಳ ಒಳ್ಳೆಯದು. ಅಂತಹ ನೌಕರನನ್ನು ಕೆಲಸಕ್ಕಿಟ್ಟುಕೊಳ್ಳುವುದನ್ನು ಯಾರು ತಾನೇ ಇಷ್ಟಪಡುತ್ತಾರೆ? ಆದರೆ ಯಾರು ಕೈಗೆತ್ತಿಕೊಂಡ ಕೆಲಸದಲ್ಲಿ ತಮ್ಮೆಲ್ಲ ಶಕ್ತಿಯನ್ನು ಮೀಸಲಿಡುತ್ತಾರೋ, ಬುದ್ಧಿಯನ್ನು ವ್ಯಯಿಸುತ್ತಾರೋ

ಹಾಗೂ ಸೂಕ್ಷ್ಮವಾಗಿ ಕೆಲಸ ನಿರ್ವಹಿಸುತ್ತಾರೋ ಅಂತಹವರಿಗೆ ಕೆಲಸದ ಕೊರತೆಯಿರುವುದಿಲ್ಲ. ಒಂದು ಸಾಧಾರಣ ವಸ್ತುವನ್ನು ಶ್ರೇಷ್ಠವಾದ ರೀತಿಯಲ್ಲಿ ಸಫಲತೆಯೆಡೆಗೆ ಕೊಂಡೊಯ್ದಾಗ ಏನೊಂದು ಖ್ಯಾತಿ ಲಭಿಸುತ್ತದೆಯೋ ಅದೇ ಯಾವುದೇ ದೊಡ್ಡದಾದುದನ್ನು ಅಪೂರ್ಣಗೊಳಿಸಿದಾಗ ಆ ಖ್ಯಾತಿ ಲಭಿಸುವುದಿಲ್ಲ. ಕಾರ್ಯದ ಸೂಕ್ಷ್ಮತೆಯನ್ನು ಗಮನಿಸಿ ಕೆಲಸ ಮಾಡುವಂತಹವರನ್ನು ಎಲ್ಲರೂ ಇಷ್ಟಪಡುತ್ತಾರೆ.

ಕಗ್ಗದ ಬೆಳಕಿನಲ್ಲಿ

ಲೇ: ಪಿ॥ ಜಿ. ಎಸ್. ನಟೇಶ್

# ಬಾಳಿನ ಸ್ವರೂಪ ಎಂಥದು?

**ಬಾಳ್ಕೆಯಲ್ಲಿ ನೂರೆಂಟು ತೊಡಕು ತಿಣುಕುಗಳುಂಟು**
**ಕೇಳ್ಕೆ ಮಾಣ್ಕೆಗಳಿವು ಜಗ್ಗವೊಂದಿನಿಸುಂ।**
**ಗೋಳ್ಕರದರೇನು ಫಲ? ಗುದ್ದಾಡಲೇನು ಫಲ?**
**ಪಲ್ಕಿರಿದು ತಾಳಿಕೊಳೊ – ಮಂಕುತಿಮ್ಮ॥**

**ಬಾಳಿನಲಿ ನೂರಾರು ಅಡ್ಡಿ ಆತಂಕಗಳು, ಆಯಾಸಗಳು ಇರುತ್ತವೆ. ನಾವು ಒಪ್ಪತಕ್ಕ ವಿಚಾರಗಳಿಗೆ ಅಥವಾ ಒಪ್ಪದಿರುವ ವಿಚಾರಗಳಿಗೆ ಅವು ಸ್ವಲ್ಪವೂ ಜಗ್ಗುವುದಿಲ್ಲ. ಗೋಳಾಡಿದರೆ ಏನು ಫಲ? ಗುದ್ದಾಡಿದರೆ ಏನು ಫಲ? ಎಲ್ಲವನ್ನೂ ಹಲ್ಲು ಕಿರಿದು ತಾಳಿಕೊ.**

ಬಾಳು ಅಂದರೆ ನೂರಾರು ಕಷ್ಟ ಕಾರ್ಪಣ್ಯಗಳ ಆಗರ. ಕ್ಷಣಕ್ಷಣಕ್ಕೂ ಅಡ್ಡಿ ಆತಂಕಗಳು ಎದುರಾಗುತ್ತವೆ. ಅನುದಿನವೂ ಆಯಾಸಗಳು ಉಂಟಾಗುತ್ತಲೇ ಇರುತ್ತವೆ. ಇವುಗಳು ಎಲ್ಲರ ಬದುಕಿನಲ್ಲೂ ಕಾಡುತ್ತಲೇ ಇರುತ್ತವೆ. ಕೆಲವಷ್ಟನ್ನು ನಾವು ಒಪ್ಪಿಕೊಳ್ಳುತ್ತೇವೆ. ಇನ್ನು ಕೆಲವನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಅವುಗಳು ಯಾವುದಕ್ಕೂ ಜಗ್ಗುವುದಿಲ್ಲ. ಒಪ್ಪಿಕೊಂಡರೂ ಸರಿ, ಒಪ್ಪದಿದ್ದರೂ ಸರಿ, ಅವು ಇದ್ದೇ ಇರುತ್ತವೆ. ನಾವು ನಮ್ಮ ಜೀವನದಲ್ಲಿ ಸದಾ ಆರೋಗ್ಯವನ್ನು ಬಯಸುತ್ತೇವೆ. ರೋಗ ರುಜಿನಗಳಾಗುವುದನ್ನು ಬಯಸುವುದಿಲ್ಲ. ನಾವು ಬಯಸುವಂಥದ್ದು ಸಿಗುತ್ತದೆಯೆಂದು ನಿರೀಕ್ಷಿಸುವಂತಿಲ್ಲ. ಬಯಸದೆ ಇರುವಂಥದ್ದು ಆಗುವುದಿಲ್ಲ ಎಂದೂ ತಿಳಿಯುವಂತಿಲ್ಲ. ಇದಾವುದೂ ನಮ್ಮ ನಿಯಂತ್ರಣದಲ್ಲಿಲ್ಲ. ಅಂದಮೇಲೆ ಗೋಳಾಡಿದರೆ ಏನೂ ಪ್ರಯೋಜನವಿಲ್ಲ. ಅವುಗಳೊಂದಿಗೆ ಗುದ್ದಾಡಿದರೂ ಪ್ರಯೋಜನವಿಲ್ಲ. ಎಲ್ಲವನ್ನೂ ಹಲ್ಕಿರಿದು ಸಹಿಸಿಕೊಳ್ಳುವುದೊಂದೇ ದಾರಿ.

**ನರಳುವುದು ಬದುಕೆ?**

**ತರಚು ಗಾಯವ ಕೆರೆದು ಹುಣ್ಣನಾಗಿಪುದು ಕಪಿ**
**ಕೊರತೆಯೊಂದನು ನೀನು ನೆನೆನೆನೆದು ಕೆರಳಿ।**
**ಧರೆಯೆಲ್ಲವನು ಶಪಿಸಿ ಮನದಿ ನರಕವ ನಿಲಿಸಿ**
**ನರಳುವುದು ಬದುಕೇನೊ? ಮಂಕುತಿಮ್ಮ॥**

**ಕಪಿ ತರಚಿದ ಸಣ್ಣ ಗಾಯವನ್ನು ಕೆರೆದುಕೊಂಡು ದೊಡ್ಡ ಹುಣ್ಣನ್ನಾಗಿ ಮಾಡಿಕೊಳ್ಳುತ್ತದೆ. ಹಾಗೆಯೇ ನೀನೂ ಕೂಡ ಯಾವುದೋ ಒಂದು ಕೊರತೆಯನ್ನು ಮತ್ತೆ ಮತ್ತೆ ನೆನಪಿಸಿಕೊಂಡು, ಕೋಪಿಸಿಕೊಂಡು ಇಡೀ ಭುಮಿಯನ್ನೇ ಶಪಿಸುತ್ತಾ ಮನಸ್ಸಿನಲ್ಲಿಯೇ ನರಕವನ್ನು ಸೃಷ್ಟಿ ಮಾಡಿಕೊಂಡು ನರಳುತ್ತಿರುತ್ತೀಯೆ. ಇದು ಬದುಕೇನು?**

ಕೋತಿ ಸುಮ್ಮನಿರುವುದಿಲ್ಲ. ಸದಾ ಏನಾದರೂ ಚೇಷ್ಟೆ ಮಾಡುತ್ತಲೇ ಇರುತ್ತದೆ. ತರಚಿದ ಸಣ್ಣ ಗಾಯವಾದಾಗ ಅದನ್ನು ಕೆರೆದು ಕೆರೆದು ದೊಡ್ಡ ಹುಣ್ಣನ್ನಾಗಿ ಮಾಡಿಕೊಂಡು ಕೊನೆಗೆ ನರಳುತ್ತದೆ. ಈ ವಿಚಾರದಲ್ಲಿ ಮನುಷ್ಯನಿಗೂ ಕಪಿಗೂ ಏನೂ ಅಂತರವಿಲ್ಲ. ಮನುಷ್ಯನೂ ಕೂಡ ಹಿಂದೆ ನಡೆದುಹೋದ ದುಃಖವನ್ನೋ, ಕೊರತೆಯನ್ನೋ ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾ ಕೆರಳುತ್ತಲೇ ಇರುತ್ತಾನೆ. ಆ ಕೋಪದಲ್ಲಿ ಲೋಕವನ್ನೇ ಶಪಿಸುತ್ತಾನೆ. ತನ್ನ ಕೊರತೆಯನ್ನು ಇತರರ ಮೇಲೆ ಎರಚಿ ತನ್ನ ಮನಸ್ಸನ್ನು ನರಕ ಮಾಡಿಕೊಳ್ಳುತ್ತಾನೆ. 'ಕಾಮಾಲೆ ಕಣ್ಣಿನವನಿಗೆ ಲೋಕವೆಲ್ಲಾ ಹಳದಿ' ಎಂಬಂತೆ ಅವನಿಗೆ ಸುತ್ತಮುತ್ತಲಿರುವ ಜನರೆಲ್ಲ ಕೆಟ್ಟವರಾಗಿ ಕಾಣುತ್ತಾರೆ. ಒಟ್ಟಿನಲ್ಲಿ ಜೀವನವಿಡೀ ನರಳುತ್ತಾ ಕಾಲ ಕಳೆಯುತ್ತಾನೆ. ಕುಂದುಕೊರತೆಗಳು ಎಲ್ಲರ ಬದುಕಿನಲ್ಲಿಯೂ ಇದ್ದೇ ಇರುತ್ತವೆ. ಕಳೆದು ಹೋದುದರ ಬಗ್ಗೆ ಚಿಂತೆ ಮಾಡದೆ ಭವಿಷ್ಯದ ಬಗ್ಗೆ ಕನಸು ಕಾಣದೆ ವರ್ತಮಾನದಲ್ಲಿಯೇ ನೆಮ್ಮದಿಯಿಂದ ಬದುಕುವುದನ್ನು ಮನುಷ್ಯ ಅಭ್ಯಾಸ ಮಾಡಿಕೊಳ್ಳಬೇಕು.

**ಆತ್ಮಕ್ಕೆ ಚಿಕಿತ್ಸೆ ಯಾವುದು?**

**ಚಿಂತೆ ಸಂತಾಪಗಳು ಮನಸಿಗೆ ವಿರೇಚಕವೊ**
**ಸಂತಸೋತ್ಸಾಹಗಳೆ ಪಥ್ಯದುಪಚಾರ।**
**ಇಂತುಮಂತುಂ ನಡೆಯುತಿರುವುದಾತ್ಮ ಚಿಕಿತ್ಸೆ**
**ಎಂತಾದಡೊಂತೆ ಸರಿ – ಮಂಕುತಿಮ್ಮ॥**



ತಾಯ್ನಾಡು ಪತ್ರಿಕೆಯ ಸ್ಥಾಪಕರು –ಪಿ.ಆರ್.ರಾಮಯ್ಯ

**ಚಿಂತೆ ಮತ್ತು ದುಃಖ ದುಮ್ಮಾನಗಳು ಮನಸ್ಸಿನ ಕೊಳೆಯನ್ನು ಹೊರಹಾಕುತ್ತವೆ. ಸಂತೋಷ ಮತ್ತು ಉತ್ಸಾಹಗಳು ಆ ಮನಸ್ಸಿಗೆ ಪಥ್ಯದ ಉಪಚಾರಗಳು ಹೀಗೆಯೋ ಹಾಗೆಯೋ ಆತ್ಮದ ಚಿಕಿತ್ಸೆ ನಡೆಯುತ್ತಲೇ ಇರುತ್ತದೆ. ಹೇಗೆ ಆಗುತ್ತದೆಯೋ ಹಾಗೆಯೇ ಸರಿ.**

ಶರೀರಕ್ಕೆ ರೋಗ ಬಂದರೆ ಅದನ್ನು ಹೊರ ಹಾಕುವುದಕ್ಕೆ ಔಷಧಿಗಳು ಬೇಕಾಗುತ್ತವೆ. ಕೇವಲ ಔಷಧ ಸೇವನೆಯಿಂದಲೇ ರೋಗ ನಿವಾರಣೆಯಾಗುವುದಿಲ್ಲ. ಜೊತೆಗೆ ಪಥ್ಯದ ಉಪಚಾರಗಳೂ ಬೇಕು. ಸಿಹಿಯನ್ನು ಹೆಚ್ಚು ತಿಂದಾಗ ಹೊಟ್ಟೆನೋವು ಉಂಟಾಗುತ್ತದೆ. ಕಹಿಯಾದ ಮದ್ದು ಅದನ್ನು ಹೊರಹಾಕುತ್ತದೆ. ಅದೇ ಸಮಯಕ್ಕೆ ಸಿಹಿಯನ್ನು ಸೇವಿಸದಿರುವುದು ಆರೋಗ್ಯಕ್ಕೆ ಪಥ್ಯದುಪಚಾರ. ರೋಗಗಳ ಚಿಕಿತ್ಸೆಯ ಸ್ವರೂಪವೇ ಅಂಥದ್ದು. ಅದು ಹಾಗೆಯೇ ನಡೆಯಬೇಕು. ಹಾಗಾದರೆ ಮನೋರೋಗಕ್ಕೆ ಚಿಕಿತ್ಸೆ ಯಾವುದು? ಸಾಮಾನ್ಯವಾಗಿ ಚಿಂತೆ ಸಂತಾಪಗಳು ಮನಸ್ಸಿನ ಕೊಳೆಯನ್ನು ಹೊರ ಹಾಕುತ್ತವೆ. ದುಃಖ ಉಮ್ಮಳಿಸಿದಾಗ ಕಣ್ಣೀರು ಬರುತ್ತದೆ. ಸಾಕಷ್ಟು ಕಣ್ಣೀರು ಹರಿದ ಮೇಲೆ ಮನಸ್ಸು ತಿಳಿಯಾಗುತ್ತದೆ. ದುಃಖ ಬಂದಾಗ ಕುಗ್ಗಿ ಹೋಗಿ ಸಂತೋಷ ಉತ್ಸಾಹಗಳನ್ನು ಕಳೆದುಕೊಳ್ಳಬಾರದು. ದುಃಖ ದುಮ್ಮಾನಗಳು ಮನಸ್ಸಿನ ಕೊಳೆಯನ್ನು ಹೊರ ಹಾಕುವ ಔಷಧವಾದರೆ ಸಂತೋಷ ಉತ್ಸಾಹಗಳು ಆ ದುಃಖ ಮತ್ತೆ ಬಾರದಂತೆ ಮಾಡುವ ಪಥ್ಯದ ಉಪಚಾರ. ಆತ್ಮದ ಚಿಕಿತ್ಸೆ ಹೀಗೆಯೋ ಹಾಗೆಯೋ ನಡೆಯತ್ತಲೇ ಇರುತ್ತದೆ. ಅದು ಹೇಗಾದರೂ ಸರಿಯೇ. ದೇಹದ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವೂ ಅಷ್ಟೇ ಮುಖ್ಯವಾದುದು. ಆ ಸಮತೋಲನವನ್ನು ನಾವೆಂದೂ ಕಳೆದುಕೊಳ್ಳುವಂತಿಲ್ಲ.

**ಮನಸ್ಸನ್ನು ಸಂತೈಸುವುದು ಹೇಗೆ?**

**ಸಂತತದ ಶಿಕ್ಷೆಯಿಂದೀರ್ಘಭ್ಯಾಸದಿಂ–**
**ದಂತರಂಗದ ಕಡಲು ಶಾಂತಿಗೊಳಲಹುದು।**
**ಸಂತೃಪ್ತ ವೃತ್ತಿಯಿಂದೇಕಾಂತ ಸೇವೆಯಿಂ**
**ಸಂತಯಿಸು ಚಿತ್ತವನು – ಮಂಕುತಿಮ್ಮ॥**

**ನಿರಂತರ ಶಿಕ್ಷೆಯಿಂದ, ಬಹಳ ಕಾಲ ಮಾಡುವ ಅಭ್ಯಾಸದಿಂದ ಮನಸ್ಸಿನ ಸಾಗರ ಶಾಂತವಾಗಲು ಸಾಧ್ಯ. ತೃಪ್ತಿಯನ್ನುಂಟು ಮಾಡುವ ಕೆಲಸದಿಂದ, ಏಕಾಂತದ ಸೇವೆಯಿಂದ ನಿನ್ನ ಮನಸ್ಸನ್ನು ಸಮಾಧಾನಪಡಿಸು.**

ಮಾನವನ ಮನಸ್ಸು ಸ್ವಾಭಾವಿಕವಾಗಿಯೇ ಚಂಚಲವಾದುದು. ಅದು ನಿಂತಲ್ಲಿ ನಿಲ್ಲುವುದಿಲ್ಲ. ಅಂತೆಯೇ ಮನಸ್ಸಿನ ಕಡಲು ಅಲ್ಲೋಲಕಲ್ಲೋಲವಾಗಿರುತ್ತದೆ. ಯೋಚನೆಯ ಲಹರಿಗಳು ಸದಾ ಬೀಳುತ್ತಿರುತ್ತವೆ, ಏಳುತ್ತಿರುತ್ತವೆ. ಅದನ್ನು ಶಾಂತಗೊಳಿಸುವುದು ಹೇಗೆ? ಕೆಲವಷ್ಟು ಸಂದರ್ಭದಲ್ಲಿ ಮನಸ್ಸನ್ನು ದಂಡಿಸಬೇಕಾಗುತ್ತದೆ. ಅದು ಹೇಳಿದಂತೆಲ್ಲಾ ಕೇಳಲಾಗುವುದಿಲ್ಲ. ಮನಸ್ಸನ್ನು ಒಂದು ವಿಷಯದಲ್ಲಿ ಸ್ಥಿರವಾಗಿ ನಿಲ್ಲಿಸಬೇಕಾದರೆ ನಿರಂತರ ಅಭ್ಯಾಸ ಅಗತ್ಯ. 'ಅಭ್ಯಾಸೇನತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೆ' ಭಗವದ್ಗೀತೆಯಲ್ಲಿ ಶ್ರೀಕೃಷ್ಣ 'ಅಭ್ಯಾಸದಿಂದ ಹಾಗೂ ವೈರಾಗ್ಯದಿಂದ ಮನಸ್ಸಿನ ಚಾಂಚಲ್ಯವನ್ನು ದೂರ ಮಾಡಿಕೊಂಡು ಅದನ್ನು ಹಿಡಿತದಲ್ಲಿರಿಸಿಕೊಳ್ಳಬಹುದು' ಎಂದು ಹೇಳಿದ್ದಾನೆ. ಏಕಾಂತದ ಸೇವೆಯಿಂದಲೂ ಮನಸ್ಸನ್ನು ಸಮಾಧಾನಪಡಿಸಬಹುದು. ಭರತನಿಗೆ ರಾಜ್ಯದ ಸಿರಿ ತಾನಾಗಿಯೇ ಒಲಿದು ಬಂದಿತ್ತು. ಆದರೆ ರಾಮನಿಗೆ ಸಲ್ಲಿಸಬೇಕಾಗಿದ್ದ ಆ ರಾಜ್ಯವನ್ನು ಅವನು ಸ್ವೀಕರಿಸಲಿಲ್ಲ. ಸಂಪತ್ತಿಗೆ ಅವನ ಮನಸ್ಸು ಚಂಚಲವಾಗಲಿಲ್ಲ. ಕೊನೆಗೆ ಅನಿವಾರ್ಯತೆಯುಂಟಾದಾಗ ರಾಜ್ಯವನ್ನು ನ್ಯಾಸಭೂತವನ್ನಾಗಿ ಮಾಡಿಕೊಂಡು ರಾಮನ ಪರವಾಗಿಯೇ ಆಡಳಿತ ನಡೆಸಿದ. ರಾಮ ಬಂದಾಕ್ಷಣ ಒಂದು ಕ್ಷಣವೂ ಚಿಂತಿಸದೆ ಅವನಿಗೆ ರಾಜ್ಯವನ್ನು ಒಪ್ಪಿಸಿಬಿಟ್ಟ, ಆ ಕೆಲಸವೇ ಅವನಿಗೆ ತೃಪ್ತಿ ತಂದಿತು. ಅದನ್ನು ರಾಮನ ಸೇವೆಯೆಂದೇ ನಿರ್ವಹಿಸಿದ.

**ಭರತನಿಂದ ನಾವು ಕಲಿಯಬೇಕಾದುದೇನು?**

**ಅರಸಡವಿಗೈದಿದೊಡಮ್, ಅವನಿತ್ತ ಪಾದುಕೆಗ**
**ಳೊರೆಯದೊಡಮೇನನಂ, ತಾಂ ವರದಿಯೊರೆದು।**
**ದೊರೆತನದ ಭಾರವನು ಹೊತ್ತು ದೊರೆಯಾಗದಾ**
**ಭರತನವೊಲಿರು ನೀನು – ಮಂಕುತಿಮ್ಮ॥**

**ರಾಜನಾದ ರಾಮ ಕಾಡಿಗೆ ಹೋದರೂ ಅವನು ಕೊಟ್ಟ ಪಾದುಕೆಗಳು ಏನನ್ನೂ ಹೇಳದಿದ್ದರೂ, ಆ ಪಾದುಕೆಗಳಿಗೆ ತಾನೇ ಪ್ರತಿನಿತ್ಯ ವರದಿಯನ್ನು ಒಪ್ಪಿಸಿ, ರಾಜ್ಯದ ಭಾರವನ್ನು ಹೊತ್ತುಕೊಂಡಿದ್ದರೂ ರಾಜನಾಗದೇ ಆಳ್ವಿಕೆ ನಡೆಸಿದ ಭರತನಂತೆ ನೀನು ಇರು.**

ದಶರಥ ತನ್ನ ಜ್ಯೇಷ್ಠ ಪುತ್ರನಾದ ರಾಮನಿಗೆ ಪಟ್ಟ ಕಟ್ಟಬೇಕೆಂದು ತೀರ್ಮಾನಿಸಿದಾಗ ಕೈಕೇಯಿ ಅದನ್ನು ತಡೆದು ತನ್ನ ಮಗನಾದ ಭರತನಿಗೆ ಅದು ಸಲ್ಲಬೇಕೆಂದು ಹಠ ಹಿಡಿದಳು. ರಾಮನನ್ನು ಹದಿನಾಲ್ಕು ವರ್ಷ ಕಾಡಿನಲ್ಲಿ ಕಾಲ ಕಳೆಯುವಂತೆ ನಿರ್ಬಂಧಿಸಿದಳು. ದಶರಥನಿಗೆ ಅದು ಇಷ್ಟವಾಗದಿದ್ದರೂ ಅನಿವಾರ್ಯವಾಯಿತು. ತಂದೆಯ ಮಾತಿನಂತೆ ಶ್ರೀರಾಮ ವನವಾಸಕ್ಕೆ ತೆರಳಿದ. ಭರತನಿಗೆ ವಿಷಯ ತಿಳಿದ ಮೇಲೆ ಒಂದು ಕ್ಷಣವೂ ಅಲ್ಲಿ ನಿಲ್ಲಲಿಲ್ಲ. ಕಾಡಿಗೆ ಹೋಗಿ ರಾಮನನ್ನು ಕರೆತಂದು ಅವನನ್ನೇ ಸಿಂಹಾಸನದಲ್ಲಿ ಕುಳ್ಳಿರಿಸಬೇಕೆಂದು ಬಯಸಿದ. ಅದಕ್ಕೆ ರಾಮನು ಒಪ್ಪದಿದ್ದಾಗ, ಪ್ರತಿನಿಧಿಗಳಾಗಿ ಅವನ ಪಾದುಕೆಗಳನ್ನು ಯಾಚಿಸಿ, ತಲೆಯ ಮೇಲೆ ಹೊತ್ತು ತಂದು ಸಿಂಹಾಸನದಲ್ಲಿಟ್ಟು ರಾಮನ ಪರವಾಗಿ ರಾಜ್ಯವನ್ನು ನಿರ್ವಹಿಸಿದ. ಆ ಪಾದುಕೆಗಳನ್ನು ಸಾಕ್ಷಾತ್



ಕರ್ಮವೀರ ಪತ್ರಿಕೆಯ ಸ್ಥಾಪಕರು –ಆರ್.ಎಸ್.ಹುಕ್ಕೇರಿಕರ, ಆರ್.ಆರ್.ದಿವಾಕರ

ರಾಮನೆಂದೇ ತಿಳಿದು ದೈನಂದಿನ ಎಲ್ಲ ವಿಚಾರಗಳನ್ನು ಆ ಪಾದುಕೆಗಳಿಗೆ ವರದಿಯೊಪ್ಪಿಸುತ್ತಿದ್ದ. ಆ ಪಾದುಕೆಗಳು ಏನನ್ನೂ ಹೇಲುತ್ತಿರಲಿಲ್ಲವಾದರೂ ಅವನು ಮಾತ್ರ ತನ್ನ ವರದಿಯನ್ನು ನಿಲ್ಲಿಸಲಿಲ್ಲ. ರಾಜ್ಯದ ಎಲ್ಲಾ ಭಾರಗಳನ್ನು ರಾಮನ ಪರವಾಗಿ ಹೊತ್ತುಕೊಂಡ. ಆದರೂ ರಾಜನಾಗಿರಲಿಲ್ಲ. ಅಂತಹ ಭರತನ ಹಾಗೆ ನಾವು ಜೀವನವನ್ನು ನಿರ್ವಹಿಸಬೇಕು. ಸಂಸಾರದ ಭಾರ ಹೊತ್ತೂ ಹೊರದಂತೆ, ಪ್ರಪಂಚಕ್ಕೆ ಅಂಟಿಕೊಳ್ಳದೆ ತಾವರೆಯ ದಳದ ಮೇಲಿರುವ ಹನಿಯಂತೆ ಬದುಕನ್ನು ನಿರ್ವಹಿಸಿಕೊಂಡು ಹೋಗಬೇಕು. ಈ ನಿಟ್ಟಿನಲ್ಲಿ ಭರತ ನಮಗೆ ಆದರ್ಶ.

---

ವಚನಭಾಗವತ

ಲೇ: ತ. ಸು. ಶಾಮರಾಯ

# ನಿಮಿ

ಇಕ್ಷ್ವಾಕುವಿನ ನೂರು ಜನ ಮಕ್ಕಳಲ್ಲಿ ಹಿರಿಯನಾದವನು ವಿಕುಕ್ಷಿ. ಅವನ ಮತ್ತು ಅವನ ವಂಶದವರ ಕಥೆಯನ್ನು ಈವರೆಗೆ ಕೇಳಿದ್ದೀರಿ. ಈಗ ಇಕ್ಷ್ವಾಕುವಿನ ಎರಡನೆಯ ಮಗನಾದ ನಿಮಿಯ ಕಥೆಯನ್ನು ಕೇಳಿ. ಈತ ಒಮ್ಮೆ ಒಂದು ಯಾಗವನ್ನು ಮಾಡಬೇಕೆಂದು ನಿಶ್ಚಯಿಸಿ, ಕುಲಗುರುಗಳಾದ ವಸಿಷ್ಠರಲ್ಲಿ ಅದನ್ನು ತಿಳಿಸಿದ. ಅವರು 'ಮಹಾರಾಜ, ನಾನು ಈಗಾಗಲೇ ದೇವೇಂದ್ರನ ಯಾಗದಲ್ಲಿ ಪುರೋಹಿತನಾಗುವುದಾಗಿ ಒಪ್ಪಿಕೊಂಡಿದ್ದೇನೆ. ಆದ್ದರಿಂದ ಆ ಯಾಗವನ್ನು ಮುಗಿಸಿ ಬಂದಮೇಲೆ ನಿನ್ನ ಯಾಗವನ್ನು ಮಾಡಿಸುತ್ತೇನೆ' ಎಂದರು. ನಿಮಿಯು ಯಾವ ಉತ್ತರವನ್ನೂ ಕೊಡದೆ ಮೌನವಾಗಿದ್ದು, ಅವರು ಅತ್ತ ಹೋಗುತ್ತಲೆ ಇತ್ತ ಆತನು – 'ಈ ಬಾಳು ಕ್ಷಣಿಕ, ಇಂದು ಇದ್ದವರು ನಾಳೆ ಇರುವರೊ ಇಲ್ಲವೊ! ಆದ್ದರಿಂದ ಇಂದು ಮಾಡುವ ಕೆಲಸವನ್ನು ನಾಳೆಗೆ ಮುಂದೂಡುವುದು ಬೇಡ' ಎಂದು ಯೋಚಿಸಿದನು. ತನಗೆ ಅದು ಸರಿಯೆಂದು ತೋರಿದುದರಿಂದ ಆತನು ಬೇರೆಯ ಮಹರ್ಷಿಗಳನ್ನು ಕರೆಸಿ, ತನ್ನ ಯಾಗವನ್ನು ಪ್ರಾರಂಭಿಸಿದನು. ಅದು ನಡೆಯುತ್ತಿರುವಾಗ ವಸಿಷ್ಠನರು ಇಂದ್ರನ ಯಾಗವನ್ನು ಮುಗಿಸಿ, ನೇರವಾಗಿ ನಿಮಿಯ ಬಳಿಗೆ ಬಂದರು. ತಮ್ಮ ಶಿಷ್ಯನ ಅಪಚಾರವನ್ನು ಕಂಡು ಅವರಿಗೆ ತುಂಬ ಸಿಟ್ಟು ಬಂತು. ಅವರು 'ಎಲ ದುರಹಂಕಾರಿ, ನಿನ್ನ ದೇಹ ಬಿದ್ದು ಹೋಗಲಿ' ಎಂದು ಶಪಿಸಿದರು. ನಿಮಿಗೂ ರೇಗಿತು; 'ದುಡ್ಡಿನಾಶೆಯಿಂದ ಧರ್ಮವನ್ನು ಗಮನಿಸದ ನಿನ್ನ ದೇಹವೂ ಬಿದ್ದು ಹೋಗಲಿ' ಎಂದು ಪ್ರತಿಶಾಪವನ್ನು ಕೊಟ್ಟ. ಇಬ್ಬರೂ ಏಕಕಾಲದಲ್ಲಿ ಸತ್ತು ಬಿದ್ದರು.

ಸತ್ತ ವಸಿಷ್ಠರು ಮಿತ್ರಾವರುಣರ ಮಗನಾಗಿ ಊರ್ವಶಿಯಲ್ಲಿ ಹುಟ್ಟಿದರು. ಯಾಗಭೂಮಿಯಲ್ಲಿ ಬಿದ್ದಿದ್ದ ನಿಮಿಯ ದೇಹವನ್ನು ಯಾಗಕಾರ್ಯದಲ್ಲಿ ತೊಡಗಿದ್ದ ಮಹರ್ಷಿಗಳು ಸುಗಂಧದಿಂದ ಕೂಡಿದ ಎಣ್ಣೆಯಲ್ಲಿ ಇಟ್ಟು ಕಾಪಾಡುತ್ತಾ, ಯಾಗವನ್ನು ಮಾಡಿ ಮುಗಿಸಿದರು. ಆ ಯಾಗದ ಕೊನೆಯಲ್ಲಿ ಅವರು ಯಾಗಕ್ಕಾಗಿ ಬಂದಿದ್ದ ದೇವತೆಗಳನ್ನು ಕುರಿತು 'ಮಹಾನುಭಾವರಿರಾ, ನಮ್ಮ ಯಾಗಕಾರ್ಯದಿಂದ ನೀವು ತೃಪ್ತರಾಗಿದ್ದರೆ, ಬೇಡಿದ ವರವನ್ನು ನೀಡಲು ನಿಮಗೆ ಶಕ್ತಿಯಿದ್ದಲ್ಲಿ ಈ ನಿಮಿಯ ದೇಹವನ್ನು ಬದುಕಿಸಿಕೊಡಿ' ಎಂದು ಕೇಳಿದರು. ದೇವತೆಗಳು ಅದಕ್ಕೆ ಒಪ್ಪಿದರು. ಆದರೆ ಸೂಕ್ಷ್ಮ ದೇಹದಲ್ಲಿದ್ದ ನಿಮಿಯು ಅವರನ್ನು ಕುರಿತು 'ಮಹಾತ್ಮರೆ, ಮತ್ತೆ ಈ ದೇಹದ ಸಂಬಂಧ ನನಗೆ ಬೇಡ. ಇದು ಎಂದಿದ್ದರೂ ಬಿದ್ದು ಹೋಗುವುದೇ. ಇದನ್ನು ತಿಳಿದೇ ಜ್ಞಾನಿಗಳಾದವರು ಈ ದೇಹದ ಮೇಲಿನ ಆಶೆಯನ್ನು ತೊರೆದು ಪರಮಾತ್ಮನಲ್ಲಿ ಮನಸ್ಸನ್ನು ನೆಲೆಗೊಳಿಸುತ್ತಾರೆ' ಎಂದನು. ಆಗ ದೇವತೆಗಳು ಮಹರ್ಷಿಗಳನ್ನು ಕುರಿತು 'ನಾವು ಆತನ ಇಷ್ಟದಂತೆಯೇ ನಡೆದುಕೊಳ್ಳೋಣ. ಈತನಿಗೆ ಇನ್ನು ಸ್ಥೂಲದೇಹ ಬೇಡ. ಸೂಕ್ಷ್ಮದೇಹದಿಂದಲೆ ಪ್ರಾಣಿಗಳ ಕಣ್ಣುಗಳಲ್ಲಿ ನೆಲೆಸಿ, ಅವುಗಳನ್ನು ಮುಚ್ಚುವ ಮತ್ತು ತೆರೆಯುವ ಕಾರ್ಯವನ್ನು ನಿರ್ವಹಿಸಲಿ' ಎಂದರು. ಅದರಂತೆ ಅಂದಿನಿಂದ ಆತ ಪ್ರಾಣಿಗಳ ಎವೆಯಲ್ಲಿ ಸೂಕ್ಷ್ಮದೇಹದಿಂದ ನೆಲೆಸಿದ್ದಾನೆ.

ನಿಮಿಯು ಮಕ್ಕಳಿಲ್ಲದೆ ಸತ್ತುದರಿಂದ ರಾಜ್ಯ ಅನಾಯಕವಾಗುವಂತಾಯಿತು. ಆಗ ಋಷಿಗಳೆಲ್ಲ ಸೇರಿ ಆಲೋಚಿಸಿ, ನಿಮಿಯ ಪೀಳಿಗೆಯನ್ನು ಪಡೆಯುವುದಕ್ಕಾಗಿ ಆತನ ದೇಹವನ್ನು ಮಂತ್ರಪೂರ್ವಕವಾಗಿ ಕಡೆದರು. ಆಗ ಆ ದೇಹದಿಂದ ಒಂದು ಮಗು ಹುಟ್ಟಿಬಂತು. ಮಥನ(ಕಡೆಯುವುದು)ದಿಂದ ಹುಟ್ಟಿದುದರಿಂದ ಆ ಮಗುವಿಗೆ ಮಿಥಿಲನೆಂದು ಹೆಸರಾಯಿತು. ಪುರುಷದೇಹದಿಂದ ಹುಟ್ಟಿದುದರಿಂದ ಆ ಮಗುವಿಗೆ ಜನಕನೆಂದೂ, ಸತ್ತ ದೇಹದಿಂದ ಹುಟ್ಟಿದವನಾದುದರಿಂದ ವಿದೇಹನೆಂದೂ ಆತನಿಗೆ ಹೆಸರುಗಳಾದವು. ಮಿಥಿಲನು ಬೆಳೆದು ದೊಡ್ಡವನಾಗಿ. ಹೊಸ ರಾಜಧಾನಿಯೊಂದನ್ನು ನಿರ್ಮಿಸಿದನು. ಅದರ ಹೆಸರು ಮಿಥಿಲಾನಗರಿಯೆಂದಾಯಿತು. ಆನಕನೂ ಆತನ ವಂಶದವರೂ ಯಾಜ್ಞವಲ್ಕರೇ ಮೊದಲಾದ ಮಹರ್ಷಿಗಳ ಅನುಗ್ರಹಕ್ಕೆ ಪಾತ್ರರಾಗಿ ಬ್ರಹ್ಮಜ್ಞರಾಗಿದ್ದವರು. ಸಂಸಾರದಲ್ಲಿ ಇದ್ದುಕೊಂಡೇ ಅವರು ಮೋಕ್ಷವನ್ನು ಸಾಧಿಸಿದರು.

**ತೇಜಸ್ವಿ ಹೇಮಪುರ ಮಾಸ ಪತ್ರಿಕೆಯ ಚಂದಾವಿವರ**

* ಬಿಡಿ ಪತ್ರಿಕೆ – ರೂ.20/– * ವಾರ್ಷಿಕ ಚಂದಾ – ರೂ.200/– * ಪಂಚವಾರ್ಷಿಕ ಚಂದಾ – ರೂ.1000/–
* ಆಜೀವ ಸದಸ್ಯತ್ವ – ರೂ.5000/–

**ವಿವರಗಳಿಗೆ ಸಂಪರ್ಕಿಸಿ :** ಸಂಪಾದಕರು, ಹೇಮಪುರ ಮಾಸಪತ್ರಿಕೆ. ಮೊಬೈಲ್ ನಂ: 9480179197, 9740945126



ಕನ್ನಡ ಪ್ರಭ ಪತ್ರಿಕೆಯ ಸ್ಥಾಪಕರು –ರಾಮನಾಥ ಗೋಯಂಕಾ

ಧರೆಗಿಳಿದ ದಿವ್ಯತೇಜ ಲೇ: ಲ. ನ. ಶಾಸ್ತ್ರೀ

# ಶಿಷ್ಯಾನುಶಾಸನ

ಆಚಾರ್ಯರು ಬದರೀನಾಥಕ್ಕೆ ಮರಳಿ ಬಂದಾಗ ಈ ಮಹಾ ಪರಿವ್ರಾಜಕನನ್ನು, ರಾಜಾ ಬ್ರಹ್ಮ ಗುಪ್ತನೂ, ಆತನ ಮಕ್ಕಳೂ, ಮಂತ್ರಿಗಳೂ ಸಮಸ್ತ ರಾಜಮರ್ಯಾದೆಗಳಿಂದ ಸ್ವಾಗತಿಸಿದರು. ಆಚಾರ್ಯರು ರಾಜ ಮತ್ತು ಶಿಷ್ಯರೊಡನೆ ಶ್ರೀ ಬದರೀ ನಾರಾಯಣನ ದರ್ಶನವನ್ನು ಮಾಡಿ, ಅನಂತರ ವ್ಯಾಸಗುಹೆಗೆ ಹಿಂದಿರುಗಿದರು.

ನೇಪಾಳ ಮತ್ತು ಪ್ರಯಾಗಗಳ ಯಾತ್ರೆಯಾದ ನಂತರ ಆಚಾರ್ಯರು ಹೆಚ್ಚಾಗಿ ಮೌನಿಯಾಗಿಯೂ, ಅಂತರ್ಮುಖಿಯಾಗಿಯೂ ಆಗಿರುತ್ತಿದ್ದರು. ಆದರೂ ಸಹ ತಮ್ಮ ದರ್ಶನ ಮತ್ತು ಉಪದೇಶಗಳನ್ನು ಅಪೇಕ್ಷಿಸಿ ಬಂದವರಿಗೆ ನಿರಾಶೆಯುಂಟು ಮಾಡದೆ, ಅವರನ್ನು ಅದರ ವಿಶ್ವಾಸಗಳಿಂದ ಮಾತನಾಡಿಸಿ ಅವರ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು.

ಗುರುದೇವರಲ್ಲಿ ಧಾರ್ಮಿಕ ಮತ್ತು ತಾತ್ತ್ವಿಕ ಸಮಸ್ಯೆಗಳನ್ನು ಹೊತ್ತು ಬರುತ್ತಿದ್ದವರಂತೆಯೇ, ವ್ಯವಹಾರಿಕ ಜಗತ್ತಿನ ಸಮಸ್ಯೆಗಳ ಭಾರ ಹೊತ್ತವರೂ ಬರುತ್ತಿದ್ದರು. ರೋಗರುಜಿನ, ಕಷ್ಟಕಾರ್ಪಣ್ಯ, ಸಾವುನೋವು, ಬಡತನ, ದಾರಿದ್ರ್ಯ ಒಂದೇ ಎರಡೇ; ಇಂತಹ ನೂರಾರು ಸಮಸ್ಯೆಗಳನ್ನು ಎದುರಿಸುತ್ತಿದ್ದವರು ಬರುತ್ತಿದ್ದರು. ಆಚಾರ್ಯರ ಒಂದು ಸಾಂತ್ವನದ ನುಡಿ, ಒಂದು ಮಂತ್ರೋಪದೇಶ, ಇವು ಸಾಕಾಗಿತ್ತು ಅವರನ್ನು ಸಮಾಧಾನಗೊಳಿಸುವುದಕ್ಕೆ. ಆಚಾರ್ಯರ ನುಡಿಗಳು ಅವರಲ್ಲಿ ಆತ್ಮ ವಿಶ್ವಾಸವನ್ನೂ ಸ್ವಸಮಸ್ಯೆಗಳನ್ನು ಎದುರಿಸುವ ಧೈರ್ಯವನ್ನೂ ತುಂಬುತ್ತಿದ್ದವು. ಒಮ್ಮೆ ವಾರಣಾಸಿಯ ಕೃಷ್ಣಮಿಶ್ರರು "ಗುರುದೇವರಲ್ಲಿ ಧಾರ್ಮಿಕ ಆಧ್ಯಾತ್ಮಿಕವಾದ ವಿಚಾರಗಳನ್ನು ಬಿನ್ನಹ ಮಾಡಿಕೊಳ್ಳುವವರಿಗಿಂತ ಸಾಂಸರಿಕ ಸಮಸ್ಯೆಗಳ ಪರಿಹಾರಕ್ಕೆ ಬರುವವರೇ ಹೆಚ್ಚು" ಎಂದು ನುಡಿದರು. ಅದನ್ನು ಕೇಳಿದ ಸುರೇಶ್ವರರು "ಸಾಂಸಾರಿಕ ಕಷ್ಟನಷ್ಟ, ದುಃಖ ವ್ಯಸನಗಳೂ ಇತರ ಹತ್ತಾರು ಸಮಸ್ಯೆಗಳೂ, ವ್ಯಾಕುಲಗಳೂ ಮನಸ್ಸಿನಲ್ಲಿದ್ದು, ಕಾಡುತ್ತಿರುವಾಗ ಈ ಒತ್ತಡಗಳಿಗೆ ಪಾರಿಹಾರ ದೊರಕದಿದ್ದರೆ, ಧಾರ್ಮಿಕ ಸಾಧನೆ ಮಾಡಲು ಜನರಿಗೆ ಸಾಧ್ಯವಾಗುತ್ತದೆಯೇ? ಅವುಗಳ ಪರಿಹಾರಕ್ಕಾಗಿ ಜನ ಗುರುದೇವರಲ್ಲಿ ಬರುವುದರಲ್ಲಿ ತಪ್ಪೇನು? ಗುರುವು ತಾಯಿಯಿದ್ದಂತಲ್ಲವೇ? ತಾಯಿಯಲ್ಲಿ ತಮ್ಮ ನೋವು, ಕಷ್ಟವನ್ನು ಹೇಳಿಕೊಳ್ಳದೆ ಮಕ್ಕಳು ಮತ್ತಾರಲ್ಲಿ ಹೇಳಿಕೊಂಡಾರು?" ಎಂದರು. ಶಂಕರಾಚಾರ್ಯರು ತಾಯಿಯಂತೆ ಮೃದುಹೃದಯರೂ ಆರ್ತ ಶಿಷ್ಯವತ್ಸಲರೂ ಆಗಿದ್ದರು. ಅವರದು ವಿಶ್ವಮಾತೃಹೃದಯ.

ಒಂದು ದಿನ ಆಚಾರ್ಯರು ತಮ್ಮ ನಾಲ್ವರು ಪ್ರಮುಖ ಶಿಷ್ಯರೊಡನೆ ಮಾತನಾಡುತ್ತಿದ್ದಾಗ, ಉಳಿದೆಲ್ಲ ಸಂನ್ಯಾಸಿ ಶಿಷ್ಯರನ್ನೂ ಕರೆ ಕಳುಹಿಸಿದರು. ಅವರೆಲ್ಲರೂ ಬಂದು ನಮಸ್ಕರಿಸಿ ಕುಳಿತ ನಂತರ:

"ಧರ್ಮ ಪ್ರಸಾರಕ್ಕಾಗಿ ನಾಲ್ಕು ಮಠಗಳನ್ನು ಸ್ಥಾಪಿಸಲಾಯಿತು. ಶ್ರೀ ಸುರೇಶ್ವರಾದಿಯಾಗಿ ಶ್ರೀ ಸನಂದನ, ಶ್ರೀ ಹಸ್ತಾಮಲಕ, ಶ್ರೀ ತೋಟಕರು ಇನ್ನು ಮುಂದೆ ಈ ಪೀಠಗಳಲ್ಲಿ ನೆಲೆಸಿ ಧಾರ್ಮಿಕ ಮಾರ್ಗದರ್ಶನ ನೀಡುತ್ತಾರೆ. ಉಳಿದ ನೀವೆಲ್ಲರೂ ಇಡೀ ಭರತ ಖಂಡದಲ್ಲಿ ಸಂಚರಿಸುತ್ತ ಜನಗಳನ್ನು ಧರ್ಮಮಾರ್ಗದಲ್ಲಿ ನಡೆಯುವಂತೆ ಪ್ರೇರಿಸಿ, ನಾಲ್ಕು ವರ್ಣದವರೂ ಪರಸ್ಪರ ಸಹಕಾರ ಸ್ನೇಹದಿಂದ ಇರುವಂತೆ ಬೋಧಿಸಿ. ಶಾಸ್ತ್ರ ವಿಚಾರದಲ್ಲಿ ತತ್ತ್ವ ವಿಚಾರದಲ್ಲಿ ಸಂದೇಹ ಬಂದಾಗ, ಆಯಾ ಪೀಠದ ಆಚಾರ್ಯರ ಮಾರ್ಗದರ್ಶನವನ್ನು ಪಡೆದುಕೊಳ್ಳಿರಿ. ಬ್ರಹ್ಮಣರು ಕಾಮಕ್ರೋಧ ವಶರಾದರೆ, ಕ್ಷತ್ರಿಯರು ದ್ವೇಷ ಅಸೂಯೆಗಳಿಗೆ ವಶರಾದರೆ, ವೈಶ್ಯರು ಲೋಭಮೋಹಗಳಿಗೆ ವಶರಾದರೆ, ದಾರಿತಪ್ಪಬಹುದು. ಇವರಲ್ಲಿ ಯರೊಬ್ಬರು ದಾರಿ ತಪ್ಪಿದರೂ ಅದು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದ್ದರಿಂದ ಅವರನ್ನು ನ್ಯಾಯಮಾರ್ಗದಲ್ಲಿ ನಡೆಯುವಂತೆ ನೀವು ತಿದ್ದಿ, ಪ್ರೇರಿಸಬೇಕು. **ಮಹಾಜನೋಯೇನಗತಃ ಸಪಂಥಾಃ** ಹಿರಿಯರು ಹೇಗೆ ನಡೆದುಕೊಳ್ಳುತ್ತಾರೋ, ಅವರನ್ನು ಇತರ ಬಹುಜನರೂ ಅನುಸರಿಸುತ್ತಾರೆ. ಆದ್ದರಿಂದ ಸಮಾಜದ ಮುಖಂಡರೆನಿಸಿದವರು ಬಲು ಎಚ್ಚರದಿಂದ ಇದ್ದು ಧರ್ಮದಿಂದ ನಡೆಯುವಂತೆ ನೀವು ನೋಡಿಕೊಳ್ಳಬೇಕು.

"ಧರ್ಮಕ್ಕೆ ಅಪಾಯ ಬಂದಾಗ, ನೀವು ಜನಗಳಲ್ಲಿ ಒಗ್ಗಟ್ಟನ್ನು ಮೂಡಿಸಿ ದೇಶವನ್ನೂ ಧರ್ಮವನ್ನೂ ರಕ್ಷಿಸಬೇಕು. ಇಂತಹ ಅಪಾಯವು ಒಳಗಿನಿಂದಲೂ ಬರಬಹುದು . ಅಪಾಯವು ಆಂತರಿಕವಾದುದಾಗಲೀ, ಬಾಹ್ಯದಿಂದ ಬಂದುದಾಗಲೀ ಅದು ಧರ್ಮಕ್ಕಷ್ಟೇ ಅಲ್ಲದೆ ದೇಶಕ್ಕೂ ಧಕ್ಕೆ ತಂದೀತು. ಅಂತಹ ಸಮಯದಲ್ಲಿ ನೀವು ಜಾಗ್ರತರಾಗಿದ್ದು, ಜನರನ್ನು ಧರ್ಮರಕ್ಷಣೆಗೂ, ದೇಶದ ರಕ್ಷಣೆಗೂ ಪ್ರೇರಿಸಬೇಕು. ಈ ಜಗತ್ತು ಮಿಥ್ಯಾ ಎಂದುಕೊಂಡು ಉಪೇಕ್ಷೆ ಮಾಡಕೂಡದು. ವ್ಯವಹಾರ ಪ್ರಪಂಚದಲ್ಲಿ ಇರುವಷ್ಟು ಕಾಲವೂ ಅದಕ್ಕೆ ತಕ್ಕಂತೆಯೇ ವರ್ತಿಸಬೇಕು" ಎಂದು ಬೋಧಿಸಿದರು.

ಆಚಾರ್ಯರು ತಮ್ಮ ಈ ಸಂನ್ಯಾಸೀ ಶಿಷ್ಯರನ್ನು ಅವರವರಿರುವ ಸ್ಥಳ, ಸನ್ನಿವೇಶ ಮತ್ತು ಅವರವರ ಮನಃ ಪರಿಪಾಕಕ್ಕೆ ಸಾಧನೆಗೆ ತಕ್ಕಂತೆ, ತೀರ್ಥ, ಆಶ್ರಮ, ವನ, ಅರಣ್ಯ, ಗಿರಿ, ಪರ್ವತ, ಸಾಗರ, ಪುರೀ, ಸರಸ್ವತೀ, ಭಾರತೀ ಎಂಬ ವ್ಯಾಪಕವೂ, ಅನ್ವರ್ಥವೂ ಆದ ನಾಮಗಳಿಂದ ಕರೆದರು. ಈ ದಶನಾಮೀ ಸಂನ್ಯಾಸಿಗಳು ಭಾರತ ವರ್ಷದ ಎಲ್ಲಾ ಸ್ಥಳಗಳಲ್ಲಿಯೂ ಸಂಚರಿಸಿ, ಧರ್ಮತತ್ತ್ವ ಪ್ರಚಾರ ಮಾಡುತ್ತಿರಬೇಕೆಂದು ಅಪ್ಪಣೆ ಮಾಡಿದರು. ಪೀಠಾಧಿಪತಿಗಳು ವಿನಾ ಉಳಿದವರೆಲ್ಲರೂ ಹೆಚ್ಚು ಕಾಲ, ಒಂದೇ ಸ್ಥಳದಲ್ಲಿ ನಿಲ್ಲದೆ, ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ, ಜನಗಳ ಸಂಪರ್ಕ ಬೆಳೆಸುತ್ತಾ, ಭರತಖಂಡವನ್ನೆಲ್ಲಾ ವ್ಯಾಪಕವಾಗಿ ಸುತ್ತುತ್ತಿರಬೇಕೆಂದು ತಿಳಿಸಿದರು. ಈ ಸಾಧು ಸಂನ್ಯಾಸಿಗಳ ಬೈರಾಗಿಗಳ ಯೋಗ ಕ್ಷೇಮವನ್ನು,ಸಮಾಜವು ನೋಡಿಕೊಳ್ಳತಕ್ಕದ್ದೆಂದೂ. ಅವರ ಭಿಕ್ಷೆ,



ಜಯ ಕರ್ನಾಟಕ ಪತ್ರಿಕೆಯ ಸ್ಥಾಪಕರು –ಆಲೂರು ವೆಂಕಟರಾಯರು

ವಸನಗಳ ಹೊಣೆ ಸಮಜದ್ದೆಂದೂ ಸ್ಪಷ್ಟಪಡಿಸಿದರು.

"ಸದಾ ತತ್ತ್ವಾರ್ಥ ಚಿಂತನೆಯನ್ನು ಮಾಡುತ್ತಿರಿ. ನಿಮ್ಮ ಹೃದಯದಿಂದ ಲೌಕಿಕ ಆಸೆ, ಮಮತೆ, ಮೋಹಗಳನ್ನು ಹೊರಕ್ಕೆ ಅಟ್ಟಿಬಿಡಿ, ಪ್ರಲೋಭನೆಗಳಿಗೆ ವಶರಾಗಬೇಡಿ. ಆಗಾಗ ಶಾಂತವೂ ನಿರ್ಜನವೂ ಆದ, ವನ, ಅರಣ್ಯ, ಗಿರಿ, ಪರ್ವತ, ಸಾಗರ ತಟಗಳಲ್ಲಿದ್ದು, ತಪ, ಜಪಗಳಲ್ಲಿ ನಿರತರಾಗಿರಿ. ಗಂಭೀರವಾದ, ನಿಶ್ಚಿತವಾದ ಬುದ್ದಿಯಿಂದ, ಜಗತ್ತನ್ನು ಅಸತ್ತೆಯೆಂದು ಭಾವಿಸಿರಿ, ವೇದಾಂತ ಶಾಸ್ತ್ರವನ್ನು ಅಧ್ಯಯನ ಮಾಡುತ್ತೀರಿ. ಆಧ್ಯಾತ್ಮ ವಿದ್ಯೆಯ ಸಂಪೂರ್ಣಜ್ಞಾನದಿಂದ ಆತ್ಮ ಜ್ಞಾನದಿಂದ ಪರಮಾತ್ಮನೇ ನಾನೆಂಬ ದಿವ್ಯ ಆನಂದಾನುಭವವನ್ನು ಪಡೆಯಿರಿ".

ಹೀಗೆ ಆಚಾರ್ಯರು ತಮ್ಮ ಅನುಯಾಯಿಗಳಾಗಿದ್ದ ನೂರಾರು ಜನ ಸಂನ್ಯಾಸೀ ಶಿಷ್ಯರಿಗೆ, ನೈತಿಕ ತತ್ತ್ವ ಪ್ರಚಾರಕ್ಕಾಗಿ, ದೇಶ ಸಂಚಾರ ಕರ್ತವ್ಯವನ್ನು ಸಮಾಜದ ಧಾರ್ಮಿಕ ಉನ್ನತಿಯನ್ನು ಸಾಧಿಸುವ ಹೊಣೆಯನ್ನೂ ವಹಿಸಿಕೊಟ್ಟರು. ಈ ಎಲ್ಲಾ ದಶನಮೀ ಸಂನ್ಯಾಸಿಗಳೂ ಬಬ್ಬೊಬ್ಬರಾಗಿ ಗುಂಪುಗುಂಪಾಗಿ ಬಂದು ಆಚಾರ್ಯರ ಪಾದಗಳಿಗೆ, ಎರಗಿದರು. ಧರ್ಮರಕ್ಷಣೆಯ ದೀಕ್ಷಾ ಬದ್ಧರಾಗಿದ್ದೇವೆಂದು, ಅವರಲ್ಲಿ ವಿಜ್ಞಾಪಿಸಿ, ಅಪ್ಪಣೆ ಪಡೆದುಕೊಂಡು ಭಾರತ ವರ್ಷದ ನಾಲ್ದೆಸೆಗಳತ್ತಲೂ ಚದುರಲು ಬಬ್ಬೊಬ್ಬರಾಗಿ ಹೊರಟರು ಈ ಧಾರ್ಮಿಕ ಸೇನಾನಿಗಳು.

ಇದಾದ ನಲ್ಕು ದಿನಗಳಾಗಿರಬಹುದು. ಆಚರ್ಯರು ತಾವು ಸ್ಥಾಪಿಸಿದ ನಾಲ್ಕು ಮಠಗಳ ಅಧ್ಯಕ್ಷರಿಗೆ ಮಾರ್ಗದರ್ಶನವಾಗುವಂತೆ ಮಹಾನುಶಾಸನವನ್ನು ರಚಿಸಿ ಅದನ್ನು ಬರೆಸಿದರು. ಮಠಾಧಿಪತಿಗಳ ನಿದಿರ್ಷ್ಟ ಕರ್ತವ್ಯ ಮತ್ತು ಅದರ ನಿರ್ವಹಣೆ ಇವುಗಳನ್ನು ಸ್ಪಷ್ಟಪಡಿಸಿದರು.

"ಮಠಾಧಿಪತಿಗಳು ತಮ್ಮ ರಾಷ್ಟ್ರದ–ಭರತಖಂಡದ–ಅಭ್ಯುದಯಕ್ಕಾಗಿ, ವೇದಾಂತ ಧರ್ಮಪ್ರಸಾರಕ್ಕಾಗಿ ತಮ್ಮ ತಮ್ಮ ಪ್ರದೇಶಗಳಲ್ಲಿ ಸದಾಕಾಲವೂ ಸಂಚರಿಸುತ್ತಿರಬೇಕು. ವೇದಶಾಸ್ತ್ರಗಳಲ್ಲಿ ಪ್ರತಿಪದಿತರಾಗಿರುವ ವರ್ಣ ಮತ್ತು ಆಶ್ರಮ ಧರ್ಮಗಳ ರಕ್ಷಣೆಯನ್ನು ಮಾಡಬೇಕು. ಅಲಸಿಕೆಯಿಂದ ಧರ್ಮಕ್ಕೆ ಗ್ಲಾನಿಯುಂಟಾಗುವ ಅಪಾಯವಿರುವುದರಿಂದ, ಮಠಾಧಿಪತಿಗಳು ಸದಾಕಾಲವೂ ಜಾಗೃತರಾಗಿದ್ದು, ಉತ್ಸಾಹದಿಂದ ಶ್ರದ್ಧೆಯಿಂದ ವೇದಾಂತ ಧರ್ಮವನ್ನು ರಕ್ಷಿಸಿ, ಪೋಷಿಸಬೇಕು. ಮಠಾಧಿಪತಿಗಳು ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಇದ್ದು, ಎಲ್ಲರೂ ಸೇರಿ ಭಾರತ ದೇಶದಲ್ಲಿ, ವೇದಾಂತ ಧರ್ಮವು ಅವಿಚ್ಛಿನವಾಗಿ ವರ್ಧಿಸುವುದಕ್ಕೆ, ಮಹತ್ತರವಾದ ಧಾರ್ಮಿಕ ವ್ಯವಸ್ಥೆಯನ್ನು, ಆಯಾ ದೇಶ ಕಾಲಗಳಿಗೆ ಅನುಗುಣವಾಗಿ ಮಾಡಬೇಕು.

"ಮಠಾಧಿಪತಿಯಾಗುವಾತನು ಸದ್ಗುಣಶೀಲನಾಗಿರಬೇಕು .ಪವಿತ್ರನೂ ಜಿತೇಂದ್ರಿಯನೂ ಆಗಿರಬೇಕು. ಆತನಿಗೆ ವೇದಗಳಲ್ಲಿ ಶಾಸ್ತ್ರಗಳಲ್ಲಿ ಪಾಂಡಿತ್ಯವಿರಬೇಕು. ಯೋಗಾಭ್ಯಾಸದಿಂದ ಶರೀರವನ್ನು, ಯೋಗಾನುಷ್ಠಾನುದಿಂದ ಅಂತಃಕರಣವನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡಿರಬೇಕು. ಎಲ್ಲ ಶಾಸ್ತ್ರಗಳ ಪರಿಚಯವೂ ಆತನಿಗಿದ್ದು, ಆತನು ಸ್ವಭಾವತಃ ನಿಸ್ವಾರ್ಥಿಯೂ, ವಿರಾಗಿಯೂ, ಆಗಿರಬೇಕು. ಅದ್ವೇಷ, ಮೈತ್ರಿ, ಕರುಣೆ ಮುಂತಾದ ಆತ್ಮಗುಣಗಳುಳ್ಳನನ್ನೇ ವಿದ್ವಾಂಸರು ಆರಿಸಿ ಪೀಠಾಧಿಪತಿಯನ್ನಾಗಿ ನೇಮಿಸಬೇಕು. " ಹೀಗೆ ಆವಾರ್ಯರು ಅನುಶಾಸನವನ್ನು ಮಾಡಿದರು.

ಆಚಾರ್ಯರು ಸ್ವಲ್ಪ ದಿನಿಗಳ ಕಾಲ, ಆತ್ಮಾರಾಮರಾಗಿ ಮೌನವಾಗಿ ಇದ್ದು ಬಿಟ್ಟರು, ಅವರನ್ನು ನೋಡಬರುವವರಿಗೆ ದರ್ಶನ ಮಾತ್ರ ಸಿಕ್ಕುತ್ತಿತ್ತು. ಅವರ ಅಂತರ್ಮುಖತೆ ಹೆಚ್ಚಾಗುತ್ತಾ ಬಂದು, ಅವರೇ ವಿವೇಕ ಚೂಡಾಮಣಿಯಲ್ಲಿ ಬರೆದಿದ್ದಂತೆ, ಒಮ್ಮೊಮ್ಮೆ ಮಗುವಿನಂತೆ, ಒಮ್ಮೊಮ್ಮೆ ಮರುಳರಂತೆ, ಜಡರಂತೆ ವರ್ತಿಸುತ್ತಿದ್ದರು. ಪದೇ ಪದೇ ಸಮಾಧಿ ಸ್ಥಿತಿಯಲ್ಲಿ ಇದ್ದು ಬಿಡುತ್ತಿದ್ದರು. ಕೆಲವೊಮ್ಮೆ ವಾರಗಟ್ಟಲೆ ಅವರು ಆತ್ಮಾರಾಮರಾಗಿ, ಸಮಾಧಿ ಸ್ಥಿತಿಯಲ್ಲಿ ಮುಳುಗಿರುತ್ತಿದ್ದರು. ಆ ದಿನಗಳಲ್ಲಿ ಆಹಾರ ಪಾನೀಯಗಳಾವುವೂ ಇಲ್ಲ. ಸದರಿಯಂತೆ ಸನಂದನ, ಸುರೇಶ್ವರ, ಹಸ್ತಾಮಲಕ, ತೋಟಕರು ಅವರನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು.

ಆಚಾರ್ಯರ ಮೂವತ್ತಮೂರನೆಯ ವರ್ಧಂತಿ ಬಂದಿತು. ಅವರು ಆ ದಿನವೂ ಅಂತರ್ಮುಖರಾಗಿಯೇ ಇದ್ದರು. ಬ್ರಹ್ಮಗುಪ್ತನು ಹಿಂದಿನಂತೆಯೇ ವರ್ಧಂತಿಗೆ ವಿಶೇಷವಾದ ವ್ಯವಸ್ಥೆಯನ್ನು ಮಾಡಿದ್ದನು. ವೇದ ಪಾರಾಯಣ, ಉಪನಿಷತ್ ಪಾರಾಯಣ, ಭಾಷ್ಯಾಪಾರಾಯಣ ಎಲ್ಲಕ್ಕೂ ಏರ್ಪಾಡು ಆಗಿತ್ತು. ಶ್ರೀ ರುದ್ರ ಹೋಮವನ್ನು ನಡೆಸಲು ಹರಿದ್ವಾರ, ಹೃಷಿಕೇಶದಿಂದ ಋತ್ವಿಜರು ಬಂದಿದ್ದರು. ಆ ಸುತ್ತಮುತ್ತಲೂ ಇದ್ದ ಸಾಧುಸಂತರೂ, ಸಂನ್ಯಾಸಿಗಳು, ತಪಸ್ವಿಗಳು ನೂರಾರು ಜನ ಆಗಮಿಸಿದ್ದರು.

ಶ್ರೀ ಬದರೀ ನಾರಾಯಣನ ಪೂಜೆಯಿಂದ ಕಾರ್ಯಕ್ರಮವು ಆರಂಭಗೊಂಡಿತು. ಹೋಮ ಪೂರ್ಣಾಹುತಿಯ ಸಮಯದಲ್ಲಿ ಮಂತ್ರೋದ್ಘೋಷ ಭೇರಿ ಶಂಖಗಳ ಮಂಗಳ ನಿನಾದ ಮುಗಿಲನ್ನು ಮುಟ್ಟಿತು.

ವ್ಯಾಸಗುಹೆಯಲ್ಲಿ ಅಂತರ್ಮುಖರಾಗಿದ್ದ ಗುರುದೇವರಿಗೆ ಎಚ್ಚರವಾಯಿತು. ಅವರು ನಿಧಾನವಾಗಿ ಕಣ್ತೆರೆದರು. ಬಾಹ್ಯ ಪ್ರಂಪಚದತ್ತ ಅವರ ಗಮನ ಹರಿಯಿತು. ಮೆಲ್ಲನೆದ್ದರು, ಶರೀರ ದುರ್ಬಲವಾಗಿದ್ದಂತೆ ಕಂಡಿತು. "ಇದಕ್ಕೆ ಅನ್ನ ಆಹಾರಗಳಿಲ್ಲದೆ ಇದು ಸೊರಗಿದೆ" ಎಂದು ಕೊಂಡರು. ನಾರಾಯಣ ನಾರಾಯಣ ಎನ್ನುತ್ತಾ ಗುಹೆಯ ದ್ವಾರದ ಬಳಿಗೆ ಬಂದರು. ಅಲ್ಲಿ ಕುಳಿತಿದ್ದ ಬ್ರಹ್ಮಚಾರಿ ವಾಮದೇವನು ದಿಗ್ಗನೆದ್ದು, ನಮಸ್ಕಾರಮಾಡಿ, ಕೈಮುಗಿದು ನಿಂತನು. ಆಚಾರ್ಯರು ಮೆಲುದನಿಯಲ್ಲಿ "ವತ್ಸ ಇದೇನು ವಿಶೇಷ ಭೇರಿಯ ಶಬ್ದ ಮೊಳಗಿತಲ್ಲ?" ಎಂದರು

ವಾಮದೇವನು ನಮ್ರನಾಗಿ "ಗುರುದೇವ ಇಂದು ತಮ್ಮ ವರ್ಧಂತಿ ಯಲ್ಲವೇ?" ಎಂದನು. "ಹೌದು ಮುವ್ವತ್ತೆರಡು ಸಂವತ್ಸರಗಳಾಯಿತಲ್ಲವೇ ನಾನು ಜನ್ಮತಳೆದು?" ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡರು.

"ಹೌದು ಗುರುದೇವ ತಮ್ಮ ಅವತಾರವಾಗಿ ಇಂದಿಗೆ ಮೂವತ್ತೆರಡು ವರ್ಷಗಳು ವರ್ಧಿಸಿವೆ" ಎಂದು ನುಡಿದ ವಾಮದೇವ.

ಆಚಾರ್ಯರು ನಕ್ಕು "ವಾಮದೇವ ಬಾ, ನಡಿ ಸ್ನಾನ ಮಾಡಿ ಬರೋಣ" ಎಂದರು. ವಾಮದೇವನು ಆಚಾರ್ಯರ ಮಡಿ ವಸ್ತ್ರಗಳನ್ನು ತೆಗೆದುಕೊಂಡು, ಅವರ ಹಿಂದೆಯೇ ಹೊರಟನು. ಗುರುದೇವರು ಗಂಗೆಯಲ್ಲಿ ಇಳಿದು ಗಂಗಾಸ್ತವನವನ್ನು ಹೇಳುತ್ತಾ ಸ್ನಾನ ಮಾಡಿದರು. ವಾಮದೇವನನ್ನು ಕರೆದು " ಸೋಮ್ಯ ನೀನು ನೀರಿಗೆ ಇಳಿ, ಮತ್ತೊಮ್ಮೆ ಸ್ನಾನ ಮಾಡು" ಎಂದರು. ವಾಮದೇವನು ಸ್ನಾನಕ್ಕೆಂದು ಗಂಗೆಯಲ್ಲಿ ಇಳಿದನು. ಆರ್ಚಾಯರು ತಮ್ಮ ಕಮಂಡಲುವಿನಿಂದ, ಮಕ್ಕಳಿಗೆ ತಾಯಿ ಸ್ನಾನ ಮಡಿಸುವಂತೆ, ಮೂರು ಸಲ ಆತನಿಗೆ ನೀರನ್ನು ಎರೆದರು. ಅನಂತರ ಹೊರಬಂದು ಶುಷ್ಕ ವಸ್ತ್ರಗಳನ್ನು ಧರಿಸಿದರು. ಭಸ್ಮ ರುದ್ರಾಕ್ಷಧಾರಣ ಮಾಡಿಕೊಂಡು, ಜಪಕ್ಕೆ ಕುಳಿತರು. ಗುರುದೇವರ ಜಪವಾಗುವ ವೇಳೆಗೆ, ಬ್ರಹ್ಮಚಾರಿಯ ಬಟ್ಟೆಗಳೂ ಒಣಗಿದ್ದವು. ಗುರು ಶಿಷ್ಯರಿಬ್ಬರೂ ವ್ಯಾಸ ಗುಹೆಯತ್ತ ಹೊರಟರು.

ಆಲಯದಲ್ಲಿ ಪೂರ್ಣಾಹುತಿಯಾಗಿ ಹೋಮವು ಮುಗಿಯುತ್ತಿದ್ದಂತೆಯೇ ಸುರೇಶ್ವರಾದಿ ನಾಲ್ವರು ಯತಿಗಳೂ ವ್ಯಾಸ ಗುಹೆಗೆ ಬಂದರು. ಅಲ್ಲಿ ಗುರುಗಳನ್ನು ಕಾಣಿಸದೆ ತಲ್ಲಣಿಸಿದರು. ಗುರುಗಳೂ ಇಲ್ಲ ಅವರನ್ನು ನೋಡಿಕೊಳ್ಳಲು ನೇಮಿಸಿದ್ದ ವಾಮದೇವನೂ ಇಲ್ಲ. ಬ್ರಹ್ಮಗುಪ್ತನಿಗೆ ಸುದ್ದಿ ಹೋಯಿತು. ಆತನು ಗಾಬರಿಯಿಂದ ಓಡೋಡಿ ಬಂದನು. ಆಚಾರ್ಯರನ್ನು ಹುಡುಕಲೆಂದು ನಲ್ಕಾರು ದಿಕ್ಕಿನತ್ತ ಸವಾರರು ಹೊರಟರು. ಅಷ್ಟರಲ್ಲಿ ಆಚಾರ್ಯರು ನಿಧಾನವಾಗಿ ಬರುತ್ತಿದ್ದುದು ಕಾಣಿಸಿತು. ಎಲ್ಲರೂ ಮಕ್ಕಳಂತೆ ಕುಣಿದಾಡಿ ಜಯಘೋಷ ಮಾಡಿದರು. ಯಜ್ಞಕುಂಡದ ಜ್ವಾಲೆಯಂತೆ, ಪ್ರಕಾಶಿಸುತ್ತಿದ್ದ ಆಚಾರ್ಯರನ್ನು ಎಲ್ಲರೂ ಪ್ರಣಾಮಪೂರ್ವಕವಾಗಿ ವಂದಿಸಿದರು.

ಒಂದು ವಾರ ಪೂರ್ಣವಾಗಿ ಸಮಾಧಿ ಸ್ಥಿತಿಯಲ್ಲಿಯೇ ಮುಳುಗಿದ್ದ ಗುರುದೇವರು, ತಮ್ಮ ಮೂವತ್ತಮೂರನೆಯ ವರ್ಧಂತಿಯ ದಿನ ಬಾಹ್ಯ ಪ್ರಪಂಚಕ್ಕೆ ಮರಳಿದ್ದರು. ಆ ದಿನವೆಲ್ಲಾ ಸ್ವಲ್ಪ ಆಯಸದಿಂದಲೇ ಇದ್ದುದರಿಂದ ಯಾರೂ ಅವರನ್ನು ಮಾತನಾಡಿಸಿ ಮತ್ತೆ ಆಯಾಸಗೊಳಿಸಲಿಲ್ಲ. ಆಹ್ನೀಕಾದಿಗಳನ್ನು ಮುಗಿಸಿದ ಆಚಾರ್ಯರು ಸ್ವಲ್ಪವೇ ಹಣ್ಣಿನ ರಸವನ್ನು ಕುಡಿದು, ಶಿಷ್ಯರು ಮಾಡುತ್ತಿದ್ದ ವೇದ ಪರಾಯಣದಲ್ಲಿ ತನ್ಮಯರಾಗಿ ಬಿಟ್ಟರು. ಮುಖವು ಪ್ರಶಾಂತವಾಗಿತ್ತು, ಎಂದಿನಂತೆಯೇ ಪ್ರಕಾಶಮಾನವಾದ ತಂಪನ್ನು ಪ್ರಸರಿಸುತ್ತಿತ್ತು.

---

ಸುಂದರಕಾಂಡದ ಸೌಂದರ್ಯ

ಲೇ॥ ರಾಮಕೃಷ್ಣ.ಎನ್.ಹೆಗಡೆ

# ಶ್ರೀ ವೀರಾಂಜನೇಯ

ಮಂಗಲಂ ಕೋಸಲೇಂದ್ರಯ ಮಹನೀಯ ಗುಣಾಬ್ದಯೇ ।
ಚಕ್ರವರ್ತಿ ತನುಜಾಯ ಸಾರ್ವಭೌಮಾಯ ಮಂಗಲಮ್ ॥

ಹನುಮಂತನು ಲಂಕೆಗೆ ಹೊರಟಾಗಿನಿಂದ ಇಲ್ಲಿಯವರೆಗೆ ನಡೆದಿರುವ ಎಲ್ಲಾ ವೃತ್ತಾಂತವನ್ನು ಹೇಳಿದ್ದಾನೆ. ಹಾಗೆಯೇ ಸೀತಾ ಸಂದೇಶವನ್ನು ತಿಳಿಸಿದ್ದಾನೆ. ಶ್ರೀರಾಮನು ಲಂಕೆಗೆ ಆಗಮಿಸಿ ದುಷ್ಟರಾಗಿರುವ ಇಲ್ಲಿಯ ರಾಕ್ಷಸರನ್ನು ಸಂಹಾರ ಮಾಡಿ ರಾಮಭಕ್ತನಾಗಿರುವ ವಿಭಿಷಣನಿಗೆ ಪಟ್ಟವನ್ನು ಕಟ್ಟಿ ಸೀತೆಯನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವ ಕಾರ್ಯವಿದೆ ಸೀತಾಮಾತೆಯ ಕುರಿತು ಹೇಳುತ್ತಾ ಹನುಮಂತನು

ಜಾನಕೀ ನ ಚ ದಸ್ಥೀತಿ ವಿಸ್ಮಯೋದಂತ ಭಾಷಿತಮ್ ।
ತತೋ ಮೇ ಬುದ್ಧಿರುತ್ಪನ್ನಾ ಶ್ರುತ್ವಾ ತಾಮದ್ಭುತಂ ಗಿರಮ್ ॥

ಅಂದರೆ ಅಗ್ನಿಜ್ವಾಲೆಗಳಿಂದ ಲಂಕಾ ನಗರವು ಸಂಪೂರ್ಣವಾಗಿ ಸುಟ್ಟು ಹೋಗಿದ್ದರೂ ಕೂಡ ಸೀತೆಗೆ ಮಾತ್ರ ಏನೂ ಆಗಲಿಲ್ಲ. ಅಗ್ನಿಯು ಸೀತೆಯ ವಿಷಯದಲ್ಲಿ ತುಂಬಾ ಶಾಂತವಾಗಿ ವರ್ತಿಸಿದನು. ಇಂತಹ ಒಂದು ಸನ್ನಿವೇಶವನ್ನು ದೇವತೆಗಳೂ ಕೂಡ ನೋಡಿ ಸಂತೋಷವನ್ನು ಹೊಂದಿದರು. ಹಾಗೆಯೇ ಹನುಮಂತನ ಬಾಲವು ಅಗ್ನಿಯಿಂದ ಹೊತ್ತಿಕೊಂಡು ಉರಿಯುತ್ತಿದ್ದರೂ ಕೂಡ ಬಾಲವನ್ನು ಅಗ್ನಿದೇವರು ಸುಡಲಿಲ್ಲ. ಅದಕ್ಕೆ ಪೂರಕವಾಗಿ ವಾಯುದೇವನೂ ಸುಗಂಧವನ್ನು ಬೀರುತ್ತಿದ್ದನು. ಹೀಗೆ ಲಂಕೆಯಲ್ಲಿ ದೇವತೆಗಳೂ ಕೂಡ ಶ್ರೀರಾಮನ ಕಾರ್ಯಕ್ಕೆ ಸಹಕಾರವನ್ನು ನೀಡಿದರು ಎನ್ನುವುದನ್ನು ಹನುಮಂತನು ಜ್ಞಾಪಿಸಿಕೊಳ್ಳುತ್ತಿದ್ದಾನೆ. "ತೇನ ವಿನಾ ತೃಣಮಪಿ ನ ಚಲತಿ" ಎನ್ನುವಂತೆ ದೇವತೆಗಳು ಅಪೇಕ್ಷೆ ಇಲ್ಲದೇ ಹುಲ್ಲುಕಡ್ಡಿಯೂ ಚಲಿಸಲಾರದು. ಹಾಗೆ ದೇವತಾ ಕಾರ್ಯಕ್ಕೆ ವಿಘ್ನಬಾರದಂತೆ ದೇವತೆಗಳೇ ರಕ್ಷಣೆ ಒದಗಿಸಿದರು ಇಂತಹ ಮಹತ್ತರವಾದ ದೇವಕಾರ್ಯವು ಹನುಮಂತನಿಂದ ನೇರವೇರುವುದಕ್ಕೂ ದೇವತೆಗಳ ಇಚ್ಚೆಯೇ ಕಾರಣ ಎನ್ನುವುದನ್ನು ಇಲ್ಲಿ ಮರೆಯುವಂತಿಲ್ಲ. ಹಾಗಾದರೆ ಇನ್ನೂ ಒಂದು ತಿಂಗಳ ಅವಧಿಯಲ್ಲಿ ಏನೇನು ಮಾಡಬೇಕಿದೆ? ಎನ್ನುವುದನ್ನು ಹನುಮಂತನು ಚಿಂತಿಸುತ್ತಾನೆ.

ಚಿರಂ ಜೀವತಿ ವೈದೇಹೀ ಯದಿ ಮಾಸಂ ಧರಿಷ್ಯತಿ ।

ನ ಜೀವೀಯಂ ಕ್ಷಣಮಪಿ ವಿನಾ ತಾಮಸಿತೇ ಕ್ಷನಾಮ್ ॥

ಹೌದು ಸೀತೆಯು ಒಂದು ತಿಂಗಳು ನನ್ನ ಪ್ರಾಣವನ್ನು ತಡೆಹಿಡಿದಿರುತ್ತೇನೆ ಎನ್ನುವುದು ಏನಿದೆಯೋ ಅದು ಬಹಳ ದೀರ್ಘವಾಧ ಅವಧಿಯಾಗಿ ಶ್ರೀರಾಮನಿಗೆ ಗೋಚರಿಸುತ್ತದೆ ಆದರೆ ಶ್ರೀರಾಮನಿಗೆ ಸೀತೆಯನ್ನು ಕ್ಷಣಕಾಲ ಅಗಲಿರುವುದೂ ಕಷ್ಟ ಹಾಗಾಗಿ ಶೀಘ್ರವಾಗಿ ಶ್ರೀರಾಮನನ್ನು ಲಂಕಾಪಟ್ಟಣಕ್ಕೆ ಕರೆದೊಯ್ಯಬೇಕು. ಕಪಿಸೈನ್ಯದ ವಿಜಯೋತ್ಸವವು ನಡೆಯಬೇಕು ಹೀಗೆ ಹನುಮಂತನು ತನ್ನ ಕಾರ್ಯಯೋಜನೆಯನ್ನು ರೂಪಿಸುತ್ತಿದ್ದಾನೆ.

–ಮುಂದುವರಿಯುವುದು.

**ಸಂಗ್ರಹ – ಎಮ್. ಚನ್ನಕೇಶವಪ್ಪ**

# ನಾನು ನನ್ನದು

ಮನುಷ್ಯ ತನ್ನ ಭಾವನೆಗಳನ್ನು ಇತರರಿಗೆ ಹೇಳಲು ಪಡುವ ಮನುಸ್ಸತ್ವಕ್ಕೆ ತನ್ನ ಕುರಿತು ತಾನೇ ಮರೆತು ಹೋಗುತ್ತಿರುತ್ತಾನೆ. ಇತರರು ತನ್ನನ್ನು ಕುರಿತು ದೊಡ್ಡದಾಗಿ ಹೇಳಿಕೊಳ್ಳಬೇಕೆಂದು ತಾನು ಮಾಡುವ ಕೆಲಸಗಳನ್ನು ಇತರರು ಮೆಚ್ಚಿಕೊಂಡು ಹೊಗಳಬೇಕೆಂದು ಇಷ್ಟಪಡುತ್ತಾನೆ. ಪ್ರಜ್ಞ ಅನ್ನುವುದು ಸಹಜವಾಗಿ ಎಲ್ಲರೂ ಅಭಿನಂದಿಸುವಂತೆ ಇರಬೇಕು. ಅದು ಲೋಕೋಪವಾಗಿರಬೇಕು, ಆಗ ಪ್ರಶಂಸೆಗೆ ಅರ್ಹವಾಗುತ್ತದೆ. ತಾಯಿ ತನ್ನ ಮಕ್ಕಳಿಗೆ ಪ್ರೀತಿಯಿಂದ ಮುದ್ದಿನಿಂದ ಮಾಡುವ ಸೇವೆಗಳು, ತಂದೆ ತನ್ನ ಸಂತಾನಕ್ಕೆ ಅಭಿವೃದ್ಧಿ ಹೊಂದಲು ಕಷ್ಟಪಟ್ಟು ಕಲ್ಪಿಸುವ ಸೌಕರ್ಯಗಳು ಆಪತ್ಕಾಲದಲ್ಲಿ ಮಿತ್ರರು ಹಿತೈಷಿಗಳು ಮಾಡುವ ಸಹಾಯ ಸಹಕಾರ ಗುರುಗಳು ಜ್ಞಾನ ಬೋಧಿಸುವುದು, ಇವೆಲ್ಲ ದೈವಾಧೀನ ಅನ್ನುತ್ತೇವೆ ವಿನಹ ಅವರು ನಮಗಾಗಿ ಎಷ್ಟು ಕಷ್ಟಪಟ್ಟಿರುತ್ತಾರೆ ಎನ್ನುವುದನ್ನು ಮರೆಯುತ್ತೇವೆ. ಈಗಿನ ಕಾಲದಲ್ಲಿ ಅವರವರ ತಂದೆ ತಾಯಿಗಳಿಗೆ ವಾರ್ದಿಕ್ಯ(ಮುದಿಕಾಲ) ಕಾಲಬಂದಾಗ್ಯೆ, ಯಾವ ಮಗ ಎಷ್ಟು ರೀತಿ ನಿಗವಹಿಸಿ ನೋಡಿಕೊಳ್ಳುತ್ತಾನೆ? ಸಾದಾರಣವಾಗಿ ನಮ್ಮ ಚರ್ಯಗಳೆಲ್ಲಾ ಸ್ವಾರ್ಥ ಭರಿತವಾದುದೇ, ಇತರರಿಂದ ಎಷ್ಟೋ ಆಶಿಸುತ್ತೇವೆ ಅದರಲ್ಲಿ ಸ್ವಲ್ಪವೂ ಸಹ ನಾವು ಇತರರನ್ನ ಗಮನಿಸಿದಷ್ಟು, ನಮ್ಮನ್ನು ನಾವು ನಮ್ಮ ಮನಸ್ಥತ್ವವನ್ನು ಗಮನಿಸಿಕೊಳ್ಳುವುದಿಲ್ಲ. ಮಾನವನು ತಾನೂ ಮಾಡುವ ತಪ್ಪುಗಳಿಗೆ ಪರದೆ ಹಾಕಿಕೊಂಡು ಇತರರ ತಪ್ಪುಗಳನ್ನು ಎತ್ತಿ ಹಿಡಿದುಕೊಂಡು ಆಡಿಕೊಳ್ಳುತ್ತಾನೆ. ಇದೆಲ್ಲದ್ದಕ್ಕೂ "ನಾನು ನನ್ನದು" ಎಂಬುವ ಅಹಂಬಾವವೇ ಕಾರಣ. ನಾನು ಎನ್ನುವ ಈ ಅಹಂಬಾವ ಇಡೀ ವ್ಯಕ್ತಿತ್ವವನ್ನೇ ನಾಶಮಾಡುತ್ತದೆ. ರಾಮಾಯಣದಲ್ಲಿ ಶ್ರೀರಾಮಚಂದ್ರರು ಒಂದು ಮಾತನ್ನು ಈ ರೀತಿ ಹೇಳಿದ್ದಾರಂತೆ ರಾವಣನನ್ನು ನಾನು ಕೊಂದಿಲ್ಲ ಅವನಲ್ಲಿದ್ದ "ನಾನು" ಎನ್ನುವ ಅಹಂಬಾವವೇ ಅವನ ನಾಶಕ್ಕೆ ಕಾರಣವಾಯಿತು ಎಂದಿದ್ದಾರಂತೆ.

ಕೃಷ್ಣದೇವರಾಏರ ಆಸ್ಥಾನ ಗುರುಗಳಾದ ಶ್ರೀವ್ಯಾಸರಾಯ ತೀರ್ಥರು ಒಮ್ಮೆ ಶಿಷ್ಯರ ಸಮೂಹ ನೋಡುತ್ತಾ, ನೋಡಿ ನಿಮ್ಮಲ್ಲಿ ಯಾರು ಮೋಕ್ಷಕ್ಕೆ ಹೋಗುತ್ತಾರೆ ಎಂದಾಗ ಆಗ ಕನಕದಾಸರು "ಸ್ವಾಮಿ ನಾನು ಹೋದರೆ ಹೋಗಬಹುದು ಎಂದಾಗ, ಈ ಉತ್ತರದಿಂದ ಇತರೆ ಶಿಷ್ಯರೆಲ್ಲಾ ಕೋಪೋದ್ರಿಕ್ತರಾದರಂತೆ, ಆಗ ಗುರುಗಳು ಹಾಸ್ಯಮುಖದಿಂದ "ನಾನು" ಎಂಬ ಅಹಂಕಾರ ಹೋದರೆ ಮಾತ್ರ ಮೋಕ್ಷಕ್ಕೆ ಹೋಗಬಹುದು ಎಂಬುದು ಕನಕದಾಸರ ಮಾತಿನ ಸಾರ ಮತ್ತು ಅಭಿಪ್ರಾಯ ಎಂದಾಗ ಅವರ ಮಾತಿನ ಯೋಗ್ಯತೆ ತಿಳಿದ ಶಿಷ್ಯರೆಲ್ಲರೂ ಸುಮ್ಮನಾದರಂತೆ.

"ತೇನ ವಿನಾ ತೃಣಮಪಿ ನ ಚಲತಿ" ಎಂದು ವೇದಗಳು ಸಾರಿದೆ ಅಂದರೆ ದೇವಾ ನಿನ್ನ ಕೃಪೆ ಇಲ್ಲದೆ ಒಂದು ಹುಲ್ಲು ಕಡ್ಡಿಯು ಅಲುಗಾಡಿಸಲ್ಲಿಕೆ ಸಾಧ್ಯವಿಲ್ಲ ಎನ್ನುವ ಹಾಗೆ ನಾವು "ನಾನು" ಎಂಬ ಅಹಂಕಾರ ತೊರೆದು ವಿಶಾಲ ಭಾವ, ನಿರ್ಮಲ ಮನಸ್ಸು ಬೆಳೆಸಿಕೊಂಡು ಇತರರ ನ್ಯೂನತೆಗಳನ್ನು ಎಣಿಸದೆ ಸದ್ ಪ್ರವರ್ತತೆಯಿಂದ ಜೀವನದಲ್ಲಿ ಇತರರಿಗೆ ಕೈಲಾದಷ್ಟು ಉಪಕಾರಮಾಡುತ್ತಾ, ದೇವರ ಸೇವೆ ಮಾಡುತ್ತಾ ದೈವಾನುಗ್ರಹ ಪಡೆದು ನಾವು ಧನ್ಯರಾಗೋಣ.

**ಆನೋ ಭದ್ರಾಃ ಕೃತವೋಯಂತು ವಿಶ್ವಥಃ** **ವ್ಯಾಟ್ಸಪ್‌ನಿಂದ ಪಡೆದದ್ದು**

# ನೀತಿ ಕಥೆ: ಅಧಿಕಾರದ ಮದದಲ್ಲಿ ತೇಲಬೇಡ

ಆ ಊರಿನ ಹೆಸರು ರಾಂಪುರ. ವನವಾಸದ ಸಂದರ್ಭದಲ್ಲಿ ಶ್ರೀರಾಮಚಂದ್ರ, ಸೀತಾ, ಲಕ್ಷ್ಮಣರು ಇಲ್ಲಿ ಒಂದು ದಿನ ತಂಗಿದ್ದರೆಂದೂ, ಅದೇ ಕಾರಣಕ್ಕೆ ಈ ಊರಿಗೆ ರಾಮಪುರ ಎಂಬ ಹೆಸರು ಬಂತೆಂದೂ, ಕಾಲಕ್ರಮೇಣ ಜನರ ಆಡು ಭಾಷೆಯಲ್ಲಿ ಅದು ರಾಂಪುರ ಎಂದಾಯಿತೆಂದೂ ಜನ ಈಗಲೂ ಮಾತಾಡುತ್ತಾರೆ. ಊರ ಮುಂದಿರುವ ಈಶ್ವರನ ದೇವಾಲಯ ತೋರಿಸಿ, ಇಲ್ಲಿ ಶ್ರೀರಾಮಚಂದ್ರ ಶಿವನನ್ನು ಪೂಜಿಸಿದನಂತೆ ಎಂದು ಇನ್ನೊಂದು ಕತೆಯನ್ನು ಹೇಳುತ್ತಾರೆ. ಈಗ ಹೇಳಲಿರುವ ಕಥೆ ಅದೆಷ್ಟೋ ವರ್ಷಗಳ ಹಿಂದೆ ನಡೆದದ್ದು. ಅಂದರೆ, ರಾಜರ ಆಡಳಿತವಿತ್ತಲ್ಲ? ಆಗ ನಡೆದದ್ದು. ರಾಂಪುರದಲ್ಲಿ ಆಗ ಒಬ್ಬ ಭಿಕ್ಷುಕನಿದ್ದ. ಅವನ ಹೆಸರು ಸುಬ್ಬ. ಒಂದು ಮಾಸಲು ಅಂಗಿ, ಅಲ್ಯುಮಿನಿಯಂ ತಟ್ಟೆ ಹಾಗೂ ಮಾರುದ್ದದ ಒಂದು ಕೋಲು ಇವಿಷ್ಟೂ ಸುಬ್ಬನ

ಆಸ್ತಿ. ಬೆಳಗಿನ ಹೊತ್ತು, ಈಶ್ವರನ ದೇವಾಲಯದ ಮುಂದಿನ ಅರಳೀಕಟ್ಟೆಯಲ್ಲಿ ಆತ ಕೂತಿರುತ್ತಿದ್ದ. ದೇವಸ್ಥಾನಕ್ಕೆಂದು ಬಂದವರು ಏನಾದರೂ ಕೊಟ್ಟರೆ ಅದನ್ನು ಪಡೆದುಕೊಳ್ಳುತ್ತಿದ್ದ. ಬೆಳಗ್ಗೆ–ಮಧ್ಯಾಹ್ನ–ಸಂಜೆ ಏನು ಸಿಗುತ್ತಿತ್ತೋ ಅದನ್ನು ಖುಷಿಯಿಂದ ತಿನ್ನುತ್ತಿದ್ದ. ಬಹುಶಃ ಅವನಿಗೆ ಆಸೆಯಿರಲಿಲ್ಲ. ನಾಳೆಗೆ ಕೂಡಿಡುವ ಬುದ್ಧಿಯೂ ಇರಲಿಲ್ಲ. ಹಾಗಾಗಿ ಅವನು ಮನೆಮನೆಯಲ್ಲಿ ಭಿಕ್ಷೆ ಕೇಳಲು ಹೋಗುತ್ತಿರಲಿಲ್ಲ. ಸಂಜೆಯಾಗುತ್ತಿದ್ದಂತೆ ಊರಿನ ಯಾರದಾದರೂ ಮನೆಯ ಜಗುಲಿಯಲ್ಲಿ ಮಲಗಿಬಿಡುತ್ತಿದ್ದ. ಬೆಳಗ್ಗೆ ಆದದ್ದೇ ತಡ, ಊರ ಸಮೀಪವಿದ್ದ ಕೆರೆಯ ಬಳಿ ಹೋಗಿ, ನಿತ್ಯಕರ್ಮಗಳನ್ನು ಮುಗಿಸಿ ಸೀದಾ ಬಂದು ಅರಳೀಕಟ್ಟೆಯಲ್ಲಿ ಕೂತುಬಿಡುತ್ತಿದ್ದ. ಸುಬ್ಬನಿಂದ ಯಾವತ್ತೂ ಯಾರಿಗೂ ತೊಂದರೆಯಾಗಿರಲಿಲ್ಲ. ದಿನವೂ ಒಂದೊಂದು ಮನೆಯ ಜಗುಲಿಯಲ್ಲಿ ಮಲಗುತ್ತಿದ್ದನಲ್ಲ? ಆಗ, ಕೂಡ ಮನೆಯವರಿಗೆ ಯಾವುದೇ ರೀತಿಯ ಕಿರಿಕಿರಿಯಾಗದಂತೆ ಎಚ್ಚರವಹಿಸುತ್ತಿದ್ದ. ಅವನು ಹೊರಗಿದ್ದಾನೆ ಎಂದರೆ, ಮನೆಯ ರಕ್ಷಣೆಗೆ ಒಬ್ಬ ಸಮರ್ಥ ಕಾವಲುಗಾರ ಇದ್ದಂತಾಗುತ್ತಿತ್ತು. ಈ ಕಾರಣದಿಂದ ಊರಿನ ಯಾರೂ ಸುಬ್ಬನನ್ನು ಯಾಕಪ್ಪಾ ಇಲ್ಲಿ ಉಳ್ಕೊಂಡಿದೀಯ ಎಂದು ಕೇಳುತ್ತಿರಲಿಲ್ಲ. ಹುಟ್ಟು ಸೋಮಾರಿಯಂತಿದ್ದ, ಭಿಕ್ಷೆಯನ್ನೇ ಬದುಕಾಗಿಸಿಕೊಂಡಿದ್ದ ಸುಬ್ಬನಿಗೆ ಒಂದು ವಿಶೇಷ ಗುಣವಿತ್ತು. ಆನ ಏನಾದರೂ ಸಮಸ್ಯೆ ಹೇಳಿದರೆ, ಅವನು ಅದಕ್ಕೆ ಪರಿಹಾರ ಹೇಳುತ್ತಿದ್ದ. ಎಷ್ಟೇ ಕಷ್ಟದ ಸಮಸ್ಯೆ ಅಂದುಕೊಂಡರೂ ಅದನ್ನು ಸುಲಭವಾಗಿ ಬಿಡಿಸುತ್ತಿದ್ದ. ಹೀಗೆ ಪರಿಹಾರ ಹೇಳುತ್ತಿದ್ದನಲ್ಲ? ಅದಕ್ಕೆ ನಯಾಪೈಸೆಯ ಗೌರವಧನವನ್ನೂ ಪಡೆಯುತ್ತಿರಲಿಲ್ಲ. ಬದಲಾಗಿ, ಇದು ನನ್ನ ಆತ್ಮ ಸಂತೋಷದ ಕೆಲಸ ಎಂದು ಬಿಡುತ್ತಿದ್ದ. ರಾಮಪುರದ ಕಡುಬಡವನಿಂದ ಹಿಡಿದು ಪಟೇಲರವರೆಗೆ ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಸುಬ್ಬನ ಬಳಿಗೆ ಸಮಸ್ಯೆ ಹೊತ್ತುಕೊಂಡು ಬರುತ್ತಿದ್ದರು. ಆತ ಎಲ್ಲವನ್ನೂ ಕೇಳಿಸಿಕೊಂಡು ಐದಾರು ನಿಮಿಷದ ನಂತರ ಪರಿಹಾರ ಹೇಳುವುದನ್ನು ವಿಸ್ಮಯದಿಂದ ಕೇಳುತ್ತಿದ್ದರು. ನಂತರ, ಇಷ್ಟೊಂದು ಬುದ್ಧಿವಂತನಾಗಿದ್ದರೂ ಈತ ಪಟ್ಟಣಕ್ಕೆ ಹೋಗಿ ಕೈತುಂಬಾ ಸಂಪಾದಿಸದೆ, ಕುಗ್ರಾಮದಲ್ಲಿ ಭಿಕ್ಷೆ ಬೇಡುವುದಾದರೂ ಏಕೆ ಎಂದು ತಮಗೆ ತಾವೇ ಕೇಳಿಕೊಳ್ಳುತ್ತಿದ್ದರು. ಉತ್ತರ ಹೊಳೆಯದೇ ಹೋದಾಗ ಸುಮ್ಮನಾಗುತ್ತಿದ್ದರು. ಹೀಗಿರುವಾಗಲೇ ಒಂದು ದಿನ ಮಹಾರಾಜರ ಸವಾರಿ ರಾಂಪುರ ಗ್ರಾಮಕ್ಕೆ ಬಂತು. ಅಂದಮೇಲೆ ಕೇಳಬೇಕೆ? ಈಶ್ವರ ದೇವಾಲಯವನ್ನು ಬಗೆಬಗೆಯಲ್ಲಿ ಅಲಂಕರಿಸಲಾಯಿತು. ಪಟೇಲರೂ ಸೇರಿದಂತೆ ಊರ ಹಿರಿಯರೆಲ್ಲ ಬೆಳಗಿನಿಂದಲೇ ಮಹಾರಾಜರ ದರಿ ಕಾಯುತ್ತಿದ್ದರು. ಕಡೆಗೊಮ್ಮೆ ಮಹಾರಾಜರ ಸವಾರಿ ಬಂದೇ ಬಂತು. ಮುಖಂಡರಿಂದ ಮಹಾರಾಜರು ಆತಿಥ್ಯ ಸ್ವೀಕರಿಸಿದರು. . ತುಸು ಹೊತ್ತು ವಿಶ್ರಾಂತಿ ಪಡೆದರು. ನಂತರ ಪ್ರಜೆಗಳ ಸುಖ–ದುಃಖ ಕೇಳಲು ಹೊರಟರು. ಆ ಸಂದರ್ಭದಲ್ಲಿಯೇ ಅರಳೀಕಟ್ಟೆಯಲ್ಲಿ ಒಂದು ಮಾಸಲು ಅಂಗಿ–ಅಲ್ಯುಮಿನಿಯಂ ತಟ್ಟೆ ಹಿಡಿದು ಕೂತಿದ್ದ ಸುಬ್ಬ ಮಹಾರಾಜರ ಕಣ್ಣಿಗೆ ಬಿದ್ದ. ಚಂದಮಾಮ, ಬಾಲಮಿತ್ರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ನೀತಿಕತೆಗಳು ಹೀಗೇ ಇರುತ್ತಿತ್ತು. ತಮ್ಮದು ರಾಮರಾಜ್ಯ, ಸುಭಿಕ್ಷಾ ಸಾಮ್ರಾಜ್ಯ ಎಂಬುದು ಮಹಾರಾಜರ ನಂಬಿಕೆಯಾಗಿತ್ತು. ಇಂಥ ಸಂದರ್ಭದಲ್ಲಿ ಭಿಕ್ಷುಕನೊಬ್ಬ ಕಣ್ಣಿಗೆ ಬಿದ್ದುದರಿಂದ ಅವರಿಗೆ ತುಂಬ ಬೇಜಾರಾಯಿತು. ಛೆ, ನಮ್ಮ ರಾಜ್ಯದಲ್ಲಿ ಈಗಲೂ ಭಿಕ್ಷುಕರಿದ್ದಾರಲ್ಲ ಎಂದು ನೊಂದುಕೊಂಡರು. ನಂತರ ಪಟೇಲರನ್ನು ಕರೆದು–ಯಾರೀತ? ನೋಡೋಕೆ ಗಟ್ಟಿಮುಟ್ಟಾಗೇ ಇದ್ದಾನೆ. ಇವನಿಗೆ ದುಡಿದು ತಿನ್ನಲು ಏನು ದಾಡಿ ಎಂದು ಪ್ರಶ್ನೆ ಹಾಕಿದರು. ಮಹಾಪ್ರಭುಗಳೆ, ಈತ ಭಿಕ್ಷುಕ ನಿಜ. ಆದರೆ ಇವನು ಬುದ್ಧಿವಂತನೂ ಹೌದು. ಎಂಥ ಸಮಸ್ಯೆಗೂ ಪರಿಹಾರ ಹೇಳಬಲ್ಲ ಶಕ್ತಿ ಈ ಭಿಕ್ಷುಕನಿಗಿದೆ. ಅಂದಹಾಗೆ, ಇವನ ಹೆಸರು ಸುಬ್ಬ. ಇವನನ್ನು ನಮ್ಮ ಊರಿನ ಆಸ್ತಿ ಎಂದು ಕರೆದರೂ ತಪ್ಪಿಲ್ಲ ಸ್ವಾಮಿ. ಪಟೇಲರಿಂದ ಈ ಬಗೆಯ ಉತ್ತರ ಕೇಳಿ ಮಹಾರಾಜರಿಗೆ ಆಶ್ಚರ್ಯವಾಯಿತು. ಹಿಂದೆಯೇ, ಈ ಭಿಕ್ಷುಕನ ಇನ್ನೊಂದು ಮುಖವನ್ನು ನೋಡಿಬಿಡುವ ಆಸೆಯೂ ಬಲಿಯಿತು. ಅದೇ ಸಂದರ್ಭಕ್ಕೆ, ತುಂಬ ದಿನಗಳಿಂದಲೂ ಪರಿಹಾರವಾಗದೆ ತಲೆ ತಿನ್ನುತ್ತಿದ್ದ ಆಡಳಿತಕ್ಕೆ ಸಂಬಂಧಿಸಿದ ಸಮಸ್ಯೆಯೊಂದು ನೆನಪಾಯಿತು. ತಕ್ಷಣವೇ ಭಿಕ್ಷುಕನ ಬಳಿ ಹೋದ ಮಹಾರಾಜರು–ನೋಡಯ್ಯ, ನನ್ನದೊಂದು ಸಮಸ್ಯೆ ಇದೆ. ಅದಕ್ಕೆ ಪರಿಹಾರ ಸೂಚಿಸಿದರೆ ನಿನಗೆ ಬಹುಮಾನವಾಗಿ ಒಂದು ಚಿನ್ನದ ನಾಣ್ಯ ಕೊಡುತ್ತೇನೆ ಎಂದರು. ಈ ಸುಬ್ಬ ತಕ್ಷಣವೇ ಹೀಗೆಂದ. ಮಹಾಪ್ರಭುಗಳೆ, ನನಗೆ ಚಿನ್ನದ ನಾಣ್ಯ ಬೇಡ, ಅದನ್ನು ನೀವೇ ಇಟ್ಟುಕೊಳ್ಳಿ . ನಿಮ್ಮನ್ನು ಕಾಡುತ್ತಿರುವ ಸಮಸ್ಯೆ ಏನೆಂದು ಹೇಳಿ. ಒಬ್ಬ ಯಃಕಶ್ಚಿತ್ ಭಿಕ್ಷುಕನಿಂದ ಈ ಬಗೆಯ ಉತ್ತರವನ್ನು ಮಹಾರಾಜರು ನಿರೀಕ್ಷಿಸಿರಲಿಲ್ಲ. ಅವರಿಗೆ ತುಂಬ ಬೇಸರವಾಯಿತು. ಆದರೆ ಏನೂ ಮಾಡುವಂತಿರಲಿಲ್ಲ. ಇರಲಿ ಎಂದುಕೊಂಡು ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ಭಿಕ್ಷುಕ ಸುಬ್ಬ ಐದಾರು ನಿಮಿಷ ತಲೆ ತಗ್ಗಿಸಿದ್ದ. ಆ ಸಮಯದಲ್ಲಿ ತನ್ನಷ್ಟಕ್ಕೆ ತಾನೆ ಏನೇನೋ ಮಾತಾಡಿಕೊಂಡ. ಕೈಬೆರಳುಗಳನ್ನು ಬಿಡಿಸಿ, ಮಡಿಚಿ ಅದೇನೇನೋ ಲೆಕ್ಕಾಚಾರ ಮಾಡಿದ. ನಂತರ ಒಂದು ಪರಿಹಾರ ಹೇಳಿಯೇ ಬಿಟ್ಟ. ಅದು ಮಹಾರಾಜರಿಗೆ ಸರಿ ಕಾಣಿಸಿತು. ಅವರು ಸುಬ್ಬನನ್ನು ಪ್ರೀತಿ, ಅಭಿಮಾನ, ಮೆಚ್ಚುಗೆಯಿಂದ ನೋಡುತ್ತ, ಒಂದು ಚಿನ್ನದ ನಾಣ್ಯವನ್ನು ಅವನ ಮುಂದಿಟ್ಟು ಇದನ್ನು ನೀನು ಸ್ವೀಕರಿಸಲೇಬೇಕು ಎಂದು ಹೇಳಿ ಅರಮನೆಗೆ ಬಂದರು. ಮರುದಿನ ಮಹಾರಾಜರಿಗೆ ಆಡಳಿತದ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಮಸ್ಯೆ ತಲೆದೋರಿತು. ಮಂತ್ರಿಮಂಡಲದ ಪ್ರಮುಖರ ಮುಂದೆ ಈ ಸಮಸ್ಯೆ ಇಟ್ಟರು. ಅವರು ಸೂಚಿಸಿದ ಪರಿಹಾರಗಳು ಮಹಾರಜರಿಗೆ ಇಷ್ಟವಾಗಲಿಲ್ಲ. ಇಂಥ ಸಂದರ್ಭದಲ್ಲಿ ಸಹಜವಾಗಿಯೇ ಮತ್ತೆ ರಾಂಪುರದ ಭಿಕ್ಷುಕ ಸುಬ್ಬನ ನೆನಪಾಯಿತು. ಅವತ್ತೇ ಸಂಜೆ ಸಮಸ್ಯೆಯೊಂದಿಗೆ ರಾಜ, ಸುಬ್ಬನ ಮುಂದೆ ನಿಂತಿದ್ದ. ಸುಬ್ಬ ಈ ಬಾರಿಯೂ ಮಹಾರಾಜನಿಗೆ ತುಂಬ ಇಷ್ಟವಾಗುವಂಥ ರೀತಿಯಲ್ಲೇ ಸಮಸ್ಯೆಗೆ ಪರಿಹರ ಸೂಚಿಸಿದ. ಅದನ್ನು ಕೇಳಿದ ನಂತರವಂತೂ ಸುಬ್ಬನ ಪ್ರಚಂಡ ಬುದ್ಧಿಶಕ್ತಿಯ ಕುರಿತು ಮಹಾರಾಜರಿಗೆ ಅನುಮಾನವೇ ಉಳಿಯಲಿಲ್ಲ. ಅವರು ಎರಡೇ ಕ್ಷಣದಲ್ಲಿ ಒಂದು ನಿರ್ಧಾರಕ್ಕೆ ಬಂದು ಸುಬ್ಬನನ್ನು ಉದ್ದೇಶಿಸಿ ಹೀಗೆಂದರು: ಸುಬ್ಬು

ಅವರೇ, ನೀವು ಒಂದೊಂದು ಸಮಸ್ಯೆಗೂ ಪರಿಹಾರ ಸೂಚಿಸುವ ರೀತಿ ಸೊಗಸಾಗಿದೆ. ಒಬ್ಬ ಮಹಾಮಂತ್ರಿಗೆ ಇರಬೇಕಾದ ಬುದ್ಧಿಶಕ್ತಿ ನಿಮಗಿದೆ. ಅದು ಸದುಪಯೋಗ ಆಗಬೇಕು. ಹಾಗಾಗಿ ನೀವು ದಯವಿಟ್ಟು ಅರಮನೆಗೆ ಬನ್ನಿ, ನನ್ನ ವಿಶೇಷ ಸಲಹೆಗಾರರೆಂದು ನಿಮ್ಮನ್ನು ನೇಮಿಸಿಕೊಳ್ಳುತ್ತೇನೆ. ನಿಮಗೆ ಅರಮನೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ನಿಮಗೆ ಎಷ್ಟು ದಿನ ಸಾಧ್ಯವೋ ಅಷ್ಟು ದಿನ ನಮಗೆ ಆಡಳಿತದಲ್ಲಿ ಮಾರ್ಗದರ್ಶನ ಮಾಡಿ. ಮಹಾರಾಜರು ಹೇಳಿದ ಮೇಲೆ ಕೇಳಬೇಕೇ? ಅವತ್ತೆ ಅಲ್ಲಲ್ಲಿ ಹರಿದುಹೋಗಿದ್ದ, ಗಬ್ಬುನಾತ ಹೊಡೆಯುತ್ತಿದ್ದ ಶರ್ಟು, ಅಲ್ಯುಮಿನಿಯಂ ತಟ್ಟೆ ಹಾಗೂ ಹಳೆಯ ಊರುಗೋಲಿನೊಂದಿಗೇ ಸುಬ್ಬ ಅರಮನೆಗೆ ಬಂದ. ಮರುದಿನದಿಂದಲೇ ಅವನ ಗೆಟಪ್ಪು ಬದಲಾಗಿಹೋಯಿತು. ಮೊದಲಿಗೆ, ಸುಬ್ಬನ ಹೆಸರು ಸುಬ್ರಾಯ ಶರ್ಮ ಎಂದಾಯಿತು. ಕೆಲವರು ಅವನನ್ನು ಜೋಯ್ಸರೇ ಎನ್ನಲೂ ಶುರುಮಾಡಿದರು. ಮಹರಾಜರಂತೂ ತುಂಬ ಪ್ರೀತಿಯಿಂದ ಮಂತ್ರಿಗಳೇ ಎಂದೇ ಕರೆಯುತ್ತಿದ್ದರು. ಮಹಾರಾಜರ ನಿವಾಸದ ಪಕ್ಕದಲ್ಲೇ ಇದ್ದ ಇನ್ನೊಂದು ಸೌಧದಲ್ಲಿ ಸುಬ್ಬುವಿನ ವಾಸಕ್ಕೆ ವ್ಯವಸ್ಥೆ ಮಾಡಲಾಯಿತು. ಒಂದು ಕಾಲದಲ್ಲಿ ವಾರವಿಡೀ ಸ್ನಾನ ಮಾಡದಿದ್ದ ಸುಬ್ಬ, ಈಗ ಪ್ರತಿದಿನವೂ ಸುಗಮದದ್ರವ್ಯ ಹಾಕಿದ್ದ ನೀರಲ್ಲೆ ಕೈ ತೊಳೆಯುವುದನ್ನು, ದಿನದಿನವೂ ಮಡಿವಸ್ತ್ರ ಧರಿಸುವುದನ್ನು, ಅರಮನೆಯ ಶಿಸ್ತು, ಶಿಷ್ಟಾಚಾರದೊಂದಿಗೆ ಬದುಕುವುದನ್ನು ರೂಢಿ ಮಾಡಿಕೊಂಡ. ಈ ಹಿಂದೆಲ್ಲಾ ರಾಂಪುರದ ಅರಳೀಕಟ್ಟೆಯಲ್ಲಿ ಕೂತು ಅವರಿವರ ಸಂಕಟಗಳಿಗೆ ಪರಿಹಾರ ಹೇಳುತ್ತಿದ್ದವನು, ಈಗ ರಾಜನ ಎಲ್ಲ ಸಮಸ್ಯೆಗಳಿಗೂ ಪರಿಹಾರ ಹೇಳುವಂಥವನಾದ. ಮಹಾರಾಜರು ಈ ಸುಬ್ರಾಯನನ್ನು ಅದೆಷ್ಟು ಹಚ್ಚಿಕೊಂಡರೆಂದರೆ, ಅರಮನೆಯ ಹಾಗೂ ರಾಜ್ಯದ ಎಲ್ಲ ರಹಸ್ಯಗಳನ್ನೂ ಅವನೊಂದಿಗೆ ಹೇಳಿಕೊಂಡರು. ಮಹಾರಾಜರು ಮೊನ್ನೆ ಮೊನ್ನೆಯಷ್ಟೇ ಬಂದ ಸುಬ್ರಾಯಶರ್ಮನಿಗೆ ಇನ್ನಿಲ್ಲದ ಪ್ರಾಮುಖ್ಯತೆ ನೀಡಿದ್ದು ಅರಮನೆಯಲ್ಲಿದ್ದ ಉಳಿದ ಮಂತ್ರಿಗಳನ್ನು ಕೆರಳಿಸಿತು. ಹಾಗೇ ಸುಬ್ರಾಯನ ಅತಿಯಾದ ಬುದ್ಧಿವಂತಿಕೆ ಕಂಡು ಅವರಿಗೆ ಅನುಮಾನವೂ ಬಂತು. ಸಮಯ ನೋಡಿ ಮಹರಾಜರಿಂದ ಅವನನ್ನು ದೂರ ಮಾಡಲೇಬೇಕು ಎಂದು ಅವರೆಲ್ಲ ಲೆಕ್ಕ ಹಾಕಿಯೇಬಿಟ್ಟರು. ಸುಬ್ರಾಯನ ಒಂದೇ ಒಂದು ತಪ್ಪಿಗಾಗಿ ಹುಡುಕುತ್ತಿದ್ದವರಿಗೆ, ಕಡೆಗೂ ಅಂಥದೊಂದು ಸಂದರ್ಭ ಒದಗಿ ಬಂತು. ಈ ವೇಳೆಗೆ ಸುಬ್ರಾಯ ಅರಮನೆಗೆ ಬಂದು ಒಂದು ವರ್ಷವೇ ಕಳೆದಿತ್ತು. ಅದೊಂದು ದಿನ ಮಂತ್ರಿಮಂಡಲದ ಎಲ್ಲರೂ ಸೇರಿ ಮಹಾರಾಜರ ಬಳಿಗೆ ಹೋದರು. ಪ್ರಭೂ, ನಾವೆಲ್ಲ ನಿಮ್ಮೊಂದಿಗೆ ಒಮದು ಮಹತ್ವದ ವಿಷಯ ಕುರಿತು ಚರ್ಚಿಸಬೇಕಾಗಿದೆ. ಒಂದು ರಹಸ್ಯ ಸಭೆಯ ಏರ್ಪಾಡು ಮಾಡಿ. ಆದರೆ, ಒಂದು ವಿನಂತಿ. ಈ ಸಭೆಗೆ ಸುಬ್ರಾಯಶರ್ಮನನ್ನು ಕರೆಯಬಾರದು ಎಂದರು. ಈ ಮಂತ್ರಿಗಳೆಲ್ಲ ಅರಮನೆಯಲ್ಲಿ ದಶಕಗಳಿಂದ ಇದ್ದವರು. ಹಾಗಾಗಿ ಅವರನ್ನು ಸಂದೇಹದಿಂದ ನೋಡಲು ರಾಜನಿಗೆ ಮನಸ್ಸಾಗಲಿಲ್ಲ. ವಿಷಯ ಮಹತ್ವದ್ದೇ ಇರಬೇಕು. ಹೇಗಿದ್ದರೂ ದಿನವೂ ಸಂಜೆ ಸುಬ್ರಾಯ ಶರ್ಮ ಅಂತಃಪುರದಲ್ಲಿ ನಡೆವ ಚರ್ಚೆಗೆ ಬರುತ್ತಾನೆ. ಆಗ ಇದನ್ನೆಲ್ಲ ಹೇಳಿದರಾಯಿತು ಎಂದೇ ರಾಜ ಯೋಚಿಸಿದ. ನಂತರ, ಗುಪ್ತ ಸಭೆಗೆ ದಿನವನ್ನೂ ನಿಗದಿಪಡಿಸಿದ. ಮಹಾರಾಜರೇ ದಯವಿಟ್ಟು ನಮ್ಮ ಮಾತನ್ನು ನಂಬಿ. ನಾವು ಕಳೆದ ಐದು ತಿಂಗಳಿನಿಂದಲೂ ದಿನದಿನವೂ ಕಣ್ಣಲ್ಲಿ ಕಣ್ಣಿಟ್ಟು ನೋಡಿದ ನಂತರವೇ ಈ ಮಾತು ಹೇಳುತ್ತಿದ್ದೇವೆ. ಏನೆಂದರೆ ಸುಬ್ರಾಯಶರ್ಮ ಬೇರೆ ಯಾರೂ ಅಲ್ಲ, ಆತ ಶತ್ರುದೇಶದ ಗೂಢಚಾರಿ. ಅವನಿಗೆ ಸಕಲೆಂಟು ವಿದ್ಯೆಗಳನ್ನು ಕಲಿಸಿದ ನಂತರವೇ ನಮ್ಮ ದೇಶಕ್ಕೆ ಕಳಿಸಲಾಗಿದೆ. ಇಲ್ಲವಾದರೆ ಒಬ್ಬ ಯಃಕಶ್ಚಿತ್ ಭಿಕ್ಷುಕನಿಗೆ ಇಂಥ ಅಪರೂಪದ ಬುದ್ಧಿವಂತಿಕೆ ಬರಲು ಹೇಗೆ ಸಾಧ್ಯ? ನಾವು ಕಣ್ಣಾರೆ ಕಂಡಿರುವ ಮಾತು ಕೇಳಿ; ಸುಬ್ರಾಯ ಪ್ರತಿದಿನವೂ ಸಂಜೆ ತನ್ನ ಮಹಲಿನ ಸಮೀಪವಿರುವ ಪುಟ್ಟದೊಂದು ಕೋಣೆಗೆ ತಪ್ಪದೇ ಹೋಗುತ್ತಾನೆ. ಒಬ್ಬನೇ ಹೋಗುತ್ತಾನೆ. ಹಾಫೆ ಹೋಗುವ ಮುನ್ನ ಸುತ್ತಮುತ್ತ ಯಾರೂ ಇಲ್ಲ ಎಂಬುವುದನ್ನು ಖಚಿತಪಡಿಸಿಕೊಳ್ಳುತ್ತಾನೆ. ಹಾಗೆ ಕೋಣೆಯ ಒಳಗೆ ಹೋದವನು, ಅರ್ಧ ಗಂಟೆಯ ನಂತರ ಹೊರಗೆ ಬರುತ್ತಾನೆ. ಹಾಗೆ ಹೊರಬಂದವನನ್ನು ಕೋಣೆಯಲ್ಲಿ ಇಷ್ಟು ಹೊತ್ತು ಏನು ಮಾಡುತ್ತಿದ್ದೆ ಎಂದು ಕೇಳಿದರೆ ಹಾರಿಕೆಯ ಉತ್ತರ ಕೊಡುತ್ತಾನೆ. ಬಹುಶಃ ಅವನು ತನ್ನವರಿಗೆ ಆ ಕೋಣೆಯಲ್ಲಿ ನಿಂತು ನಮ್ಮ ರಾಜ್ಯದ ರಹಸ್ಯವನೆಲ್ಲ ಹೇಳುತ್ತಾನೆ ಅನಿಸುತ್ತೆ. ಆ ಕೋಣೆಯಿಂದ ಹೊರಗೆಹೋಗಲು ಸುರಂಗ ಮಾರ್ಗವಿದ್ದರೂ ಇದ್ದೀತು. ಯಾವುದನ್ನೂ ನೀವೇ ಪರಿಶೀಲಿಸಿ ಬೇಕಾದರೆ...' ಎಂದರು. ಒಂದು ಅನುಮಾನದ ಅಡ್ಡಗೆರೆ ಎಂಥ ಮಧುರ ಬಾಂದವ್ಯವನ್ನೂ ಅಳಿಸಿಹಾಕಬಲ್ಲದು. ಮಹಾರಾಜನ ವಿಷಯದಲ್ಲೂ ಹೀಗೇ ಆಯಿತು. ಮಂತ್ರಿಮಂಡಲದ ಸದಸ್ಯರೆಲ್ಲರ ಮಾತುಗಳನ್ನೇ ಮತ್ತೆ ಮತ್ತೆ ಮೆಲಕು ಹಾಕಿದ ರಾಜನಿಗೆ ಸುಬ್ರಾಯ ಶರ್ಮ ಒಬ್ಬ ಗೂಢಾಚಾರಿ ಎಂಬುದು ಗ್ಯಾರಂಟಿಯಾಗಿ ಹೋಯಿತು. ಅದುವರೆಗೆ ಅವನ ಬುದ್ದಿವಂತಿಕೆಯ ವಿಷಯದಲ್ಲಿ ಇದ್ದ ಅಭಿಮಾನವೆಲ್ಲ ಕ್ಷಣ ಮಾತ್ರದಲ್ಲಿಯೇ ಅನುಮಾನವಾಗಿ ಬದಲಾಯಿತು. ಇರಲಿ. ಎಲ್ಲವನ್ನೂ ಪತ್ರ್ಯಕ್ಷವಾಗಿ ನೋಡೋಣ. ಅನಂತರವೇ ಸುಬ್ರಾಯನನ್ನು ಶಿಕ್ಷಿಸೋಣ ಎಂದು ನಿರ್ಧರಿಸಿದ ರಾಜ. ಅದೊಂದು ಸಂಜೆ ಸುಬ್ರಾಯ ಆ ಕೋಣೆಗೆ ಹೋದ ಹತ್ತು ನಿಮಿಷದ ನಂತರ ತಾನೂ ಹೋಗಲು ನಿರ್ಧರಿಸಿದೆ. ಕೋಣೆಯ ಸುತ್ತಲೂ ಮಾರುವೇಷದಲ್ಲಿ ಸೈನಿಕರನ್ನು ಬಿಟ್ಟು ಒಳಗಿನಿಂದ ಯಾರೇ ಅಪರಿಚಿತರು ಬಂದರೂ ಹಿಂದೆ ಮುಂದೆ ನೋಡದೇ ಕತ್ತರಿಸಿ ಹಾಕಿ ಎಮಧು ಸೈನಿಕರಿಗೆ ತನ್ನ ಆದೇಶ ನೀಡಿದ. ಕಡೆಗೂ, ಎಲ್ಲರೂ ಅಂದುಕೊಂಡಿದ್ದ ಸಮಯ ಬಂತು. ಸುಬ್ರಾಯ ಶರ್ಮ ಅವಸರದಲ್ಲಿ ಎಂಬಂತೆ ತನ್ನ ಮನೆಗೆ ಸಮೀಪದ ಕೋಣೆ ಹೊಕ್ಕ. ಸ್ವಲ್ಪ ದೂರದಲ್ಲಿ ಮಾರು ವೇಷದಲ್ಲಿದ್ದ ರಾಜ ಇದನ್ನು ಗಮನಿಸಿದ. ಸುಬ್ರಾಯ, ಕಳ್ಳನಂತೆ ಸುತ್ತಮುತ್ತ ನೋಡಿ ಕೊಣೆ ಪ್ರವೇಶಿಸಿದನಲ್ಲ? ಅದನ್ನು ಕಂಡು ರಾಜನ ರಕ್ತ ಕುದಿಯಿತು. ಅವನ ದೇಶದ್ರೋಹ ಏನಿರಬಹುದು ಎಂದು ನೆನಪು ಮಾಡಿಕೊಂಡು ನಿಂತಲ್ಲೇ ಕಟಕಟನೆ ಹಲ್ಲು ಕಡಿದ. ನಂತರ, ತನ್ನನ್ನು ತಾನೇ ನಿಗ್ರಹಿಸಿಕೊಂಡು, ಸಮಾಧಾನ ಮಾಡಿಕೊಂಡು ಸದ್ದಾಗದಂತೆ ಆ ಕೋಣೆಯ ಬಳಿ ಬಂದು, ದಬದಬನೆ ಬಾಗಿಲು ಬಡಿದು. ಯಾರದು?' ಎಂದ ಸುಬ್ರಾಯನ



ಪ್ರಜಾವಾಣಿ ಪತ್ರಿಕೆಯ ಸ್ಥಾಪಕರು –ಕೆ.ಎನ್.ಗುರುಸ್ವಾಮಿ, ಬಿ.ಪುಟ್ಟಸ್ವಾಮಯ್ಯ

ತಣ್ಣಗಿನ ದನಿಗೆ ನಾನು. ಬಾಗಿಲು ತೆಗೆ' ಎಂದ ರಾಜ. ಬಾಗಿಲು ತೆರೆಯಿತು. ರಾಜ ಕತ್ತಿ ಹಿಡಿದುಕೊಂಡೇ ಒಳಗೆ ಬಂದ. ಸುಬ್ರಾಯನನ್ನು ಬಿಟ್ಟು ಯಾವ ಕುನ್ನಿಯೇ ಕಂಡರೂ ಅದರ ತಲೆ ಹಾರಿಸಬೇಕು ಎಂಬುದು ರಾಜನ ಎಣಿಕೆಯಾಗಿತ್ತು. ಆದರೆ, ಅಲ್ಲಿ ಯಾರೆಂದರೆ ಯಾರು ಇರಲಿಲ್ಲ. ಬದಲಿಗೆ ಸುಬ್ರಾಯನ ಹಳೆಯ ಸಂಗಾತಿಯಾದ ಹರಕ ಬಟ್ಟೆ, ಅಲ್ಯುಮಿನಿಯಂ ತಟ್ಟೆ ಹಾಗೂ ಊರುಗೋಲಿತ್ತು. ಅವನನ್ನೇ ಬೆರಗಿನಿಂದ ನೋಡಿದ ರಾಜ–ನೀನು ದಿನಾಲೂ ಇಲ್ಲಿಗೆ ಬರ್ತೀಯಂತೆ. ಸ್ವಲ್ಪ ಹೊತ್ತು ಇಲ್ಲೇ ಇರ್ತೀಯಂತೆ. ಇಲ್ಲಿ ನೀನು ಏನು ಮಾಡ್ತಿರ್ತೀಯ? ಹೇಳು...' ಅಂದ. ಮಾಹಾಪ್ರಭುಗಳೆ, ಒಂದು ಕಾಲದಲ್ಲಿ ಬೀದೀಲಿ ಕೂತು ಭಿಕ್ಷೆ ಬೇಡುತ್ತಿದ್ದವ ನಾನು. ಅಂಥವನಿಗೆ ಈಗ ರಾಜ ಮರ್ಯಾದೆ ಸಿಗುತ್ತಿದೆ. ಅಧಿಕಾರದ ಅಮಲಿನಲ್ಲಿ ತೇಲಬೇಡ. ಈ ಹಿಂದೆ ನೀನು ಏನಾಗಿದ್ದೆ ಎಂಬುವುದನ್ನು ಮರೆಯಬೇಡ ಎಂದು ನನಗೆ ನಾನೇ ಹೇಳಿಕೋಳ್ಳುವ ಸಲುವಾಘಿ ದಿನವೂ ಕೋಣೆಗೆ ಬರುತ್ತಿದ್ದೆ. ಈ ಹಳೆಯ ಸಂಗಾತಿಗಳ ಮುಂದೆ ನಿಂತು ಆ ಮಾತುಗಳನ್ನು ನನಗೆ ನಾನೇ ಹೇಳಿಕೊಳ್ಳುತ್ತದ್ದೆ. ನೀವು ಯಾರನ್ನೋ ಬೇಟೆಯಾಡಲು ಬಂದಂತಿದೆಯಲ್ಲ, ಯಾರ ನಿರೀಕ್ಷೆಯಲ್ಲಿ ಬಂದಿರಿ ಮಹಾಪ್ರಭು ಎಂದ ಸುಬ್ಬ ಉರುಫ್ ಸುಬ್ರಾಯ ಶರ್ಮ. ಈ ಮಾತು ಕೇಳಿ ರಾಜನಿಗೆ ತನ್ನ ಕುರಿತು ನಾಚಿಕೆಯಾಯಿತು. ಸುಬ್ರಾಯನ ವಿಷಯವಾಗಿ ಏನೇನೋ ಕಲ್ಪಿಸಿಕೊಂಡಿದ್ದಕ್ಕೆ ಅಸಹ್ಯ ಅನ್ನಿಸಿತು. ಆತ ಏನೊಂದೂ ಮಾತಾಡದೆ, ಸುಬ್ರಾಯನನ್ನು ಬಾಚಿ ತಬ್ಬಿಕೊಂಡ. ಆ ಅಪ್ಪುಗೆ, ಅದರ ಬಿಸುಪು ಜತೇಗೇ ಇದ್ದ ಮೌನ–ಅದೆಷ್ಟೂ ಪ್ರಶ್ನೆಗಳಿಗೆ ಉತ್ತರ ಹೇಳಿತು.

# ಔಷಧೀಯ ಸಸ್ಯ ಸಂಪತ್ತು

**ಉಪ್ಪಳಿಕೆ ಮರ**

**ಲೇ || ಶ್ರೀ ಪಿ. ಎಸ್. ವೆಂಕಟರಾವ್ ದೈತೋಟ್.**

ಉಷ್ಣ ವ್ರಣಗಳಿಗೆ ಗುಣಪ್ರದ



**ಹೆಸರುಗಳು**

**ಕನ್ನಡ:** ಉಪ್ಪಳಿಕೆ ಮರ, ಉಪ್ಪೆಲೆ, ಕಂಚುಪ್ರಾಂತಿ, ಬೆಂತಕಣ್ಣಿ, ಚಂಡುಕಲು, ಬಟ್ಟುಚಂದ್ರಿಕೆ, ಚೂತಕಣ್ಣಿ, ಚಂಡಕಣ್ಣಿ;
**ತುಳು:** ಉಪ್ಪೋಳಿಗೆ; **ಕರ್ನಾಡ:** ಕುರ್ಕುಟಿ;
**ಮಲಯಾಳಂ:** ವಟ್ಟಕಣ್ಣಿ, ಉಪ್ಪಿಲ;
**ತಮಿಳು:** ಉಟ್ಟತಾಮರೈ; **ತೆಲುಗು:** ಬೊಡಿಚೆಟ್ಟು;
**ಸಸ್ಯಶಾಸ್ತ್ರೀಯ:** *Macaranga peltata*(Roxb.) Muell. Arg.
**ಕುಟುಂಬ:** Euphorbiaceae

**ಮೂಲಿಕಾ ಪರಿಚಯ**

ಆರಾಮವಾಗಿ ಊಟ ಮುಗಿಸಲು ಸಾಧ್ಯವಾಗುವಷಗಷ್ಟು ವಿಶಾಲವಾದ ಉರುಟು ಎಲೆಗಳು. ತಾವರೆಯೆಲೆಗಿದ್ದಂತೆ ನಡುವೆ ಸೇರುವ ನೀಳ ಕಡ್ಡಿತೊಟ್ಟುಗಳು. ಎಳೆಯ ಭಾಗಗಳು, ನರಗಳದು ಕಂದುಗೆಂಪು ಛಾಯೆ. ಜೇಡನ ಬಲೆ ಹೋಲುವ ನರವಿನ್ಯಾಸ, ಕೊಂಚ ದೂರಗಾದ ಎಲೆಯಡಿ ಭಾಗ ಬೂದು ರೋಮಶ. ರೆಂಬೆಗಳು ದೂರವಾಗಿ ನೀಳವಾಗಿ ಹರಡುವಂತಹವು. ಗಿಣ್ಣುಗಳು ಕಡಿಮೆಯಾಗಿ ನೇರ. ಹಗುರವಾದ ರೆಂಬೆ ಗುದ್ದಲಿ (ಹಾರೆ) ಹಿಡಿಗೆ ಅನುಕೂಲ. ತುದಿ ರೆಂಬೆಗಳಲ್ಲೇ ಎಲೆಗಳು ಗುಂಪು ಕೂಡಿರುತ್ತವೆ. ಚಳಿಗೆ ಎಲೆ ಗುಂಪುಗಳಡಿ ಭಾಗದಲ್ಲಿ ಹೊರಬರುವ ಹೂಗೊಂಚಲುಗಳು, ಬೇಸಿಗೆಯಾರಂಭದೊಳಗೆ ಉದುರುವ ತೊಗರಿ ಗಾತ್ರದ ಕಾಯಿಗಳು. ರೆಂಬೆ ಮುರಿದಾಗ ಕತ್ತರಿಸಿದಾಗ ಜಿನುಗುವ ಕೆಂಪು ಅಂಟಾದ ರಸಸಾರವೇ ಈ ಸಸ್ಯದ ಪ್ರಮುಖ ಔಷಧದ್ರವ್ಯ. ಮರ ಮೃದು, ಹಗುರ, ಕಡಿಮೆ ಬಾಳಿಕೆಯದು. ತಾರೆಣ್ಣೆ, ಗೇರೆಣ್ಣೆ ಲೇಪನದಿಂದ ಹಲವಾರು ವರ್ಷ ಬರುವುದು. ಉಪ್ಪಿಗೂ ಮರಕ್ಕೂ ಬಹಳ ನಂಟು. ಎಲೆಗಳಲ್ಲಿ ಉಪ್ಪು ಸುತ್ತಿಟ್ಟರೆ ದ್ರವಿಸದೆ ಉಳಿಯುವುದು. ಹಿಂದೆ ಉಪ್ಪು ಶೇಖರಣೆಗಾಗಿ ಇದರ ಹಲಗೆಗಳ ಪೆಟ್ಟಿಗೆ ತಯಾರಿಸುವುದಿತ್ತು. ಇತರ ಮರಗಳ ಪೆಟ್ಟಿಗೆಗೂ ಒಳಗೆ ಎಲೆಗಳನ್ನು ಹಾಸಿ ಉಪ್ಪು ಸುರಿಯುವುದು ವಾಡಿಕೆ. ಉಪ್ಪಿನ ರಕ್ಷಣಾ ಗುಣದಿಂದ 'ಉಪ್–ಹಲಿಗೆ' ಉಪ್–ಹೆಳಿಕೆ' 'ಉಪ್ಪಿಲ' ಎಂದು ಹೆಸರುಗಳಾಗಿವೆ. ಹಣ್ಣುಗಳನ್ನು ಆಹಾರದಲ್ಲಿ ಬೇಯಿಸಿ ಬಳಸುವುದಿದೆ. ಆದರೆ ಉಪ್ಪು ಸೇರಿಸಲೇಬಾರದೆಂದಿದೆ. ಮಯಣವು ಲೋಹದೆರಕಗಳಲ್ಲಿನ ಅಚ್ಚು ಮಿಶ್ರಣ ತಯಾರಿಕೆಗೆ ವಿಶೇಷ. ಎಲೆಗಳು ಕಡಿಬಿನಂತಹ ತಿಂಡಿಗಳನ್ನು ಉಗಿಯಲ್ಲಿ ಬೇಯಿಸುವಾಗ ಸುತ್ತಿಡಲು ಒಳ್ಳೆಯದೆಂದೂ, ರುಚಿಯಾಗುವುದೆಂದೂ ಅನುಭವಿಗಳ ಹೇಳಿಕೆ. ಪ್ಲೀಹದ ಬಾವುಗಳಲ್ಲೂ ಸಾಂಸರ್ಗಿಕ ಲೈಂಗಿಕ ವ್ರಣಗಳಲ್ಲೂ ಔಷಧ. ಪಶ್ಚಿಮ ಕರಾವಳಿ, ಘಟ್ಟಗಳ ಬುಡ, ಒರಿಸ್ಸಾ, ಆಂಧ್ರದ ಭಾಗಗಳಲ್ಲಿ 3000 ಅಡಿಗಳ ಕೆಳಗೆ ಬೆಳೆಯುವುದು. 6–8 ಅಡಿ ಉದ್ದದ ರೆಂಬೆಗಳನ್ನು ಕಡಿದು ಮಳೆಯಾರಂಭದಲ್ಲಿ 2 ಅಡಿ ಹೂತರೆ ಎಂತಹ ಬೋಳು ನೆಲದಲ್ಲೂ ಚಿಗುರಿ ಗಾಳಿ, ಮಳೆಗಳಿಂದ ಮಣ್ಣಿಗೆ ರಕ್ಷಣೆ ಹಾಗೂ ದಟ್ಟ ನೆರಳೀಯುವುದು.


ವಿಶ್ವವಾಣಿ ಪತ್ರಿಕೆಯ ಸ್ಥಾಪಕರು –ಪಾಟೀಲ ಪುಟ್ಟಪ್ಪ

'ಮಲೆ ಉಪ್ಪಳಿಕೆ' ಇದರದೇ ಇನ್ನೊಂದು ಪ್ರಭೇದ ಘಟ್ಟ ಪ್ರದೇಶಗಳಲ್ಲಿ ಬೆಳೆಯುವುದು. ಇವುಗಳೊಳಗೆ ಹೋಲಿಕೆ ಬಹಳ.

**ಉಪಯೋಗಗಳು :** ಬೇರು, ಅಂಟು, ಎಲೆ, ತೊಗಟೆ, ಕಾಯಿಗಳು ಪ್ರತ್ಯೇಕವಾಗಿ.

**ಉಷ್ಣ ವ್ರಣಗಳಿಗೆ:** (ಉರಿ ಹುಣ್ಣುಗಳು, ನಂಜುಗಾಯಗಳು, ಕೆಂಪು ಕಜ್ಜುಗಳು, ಕೀಟಗಳ ಕಡಿತದಿಂದಾದ ಹುಣ್ಣುಗಳು ಸಹ)–ಮರದ ಗಾಯದಿಂದ ಸುರಿಯುವ ಕೆಂಪು ದಪ್ಪ ಅಂಟನ್ನು (ಮಯನ, ಹಯನು) ಆಗಾಗ ಲೇಪಿಸುವುದು. ದಿನಕ್ಕೊಮ್ಮೆ ಇದರದೇ ಎಲೆಗಳ ಕಷಾಯದಲ್ಲಿ ತೊಳೆಯುವುದೂ ಸಹಾಯಕ. 2 ರಿಂದ 6 ದಿನ.

ಬಾವುಗಳು–(ಎಲ್ಲಾ ತರದವು–ಸೋರು ಮುಖವಾಗದವು, ಕುರಗಳು) ಇದೇ ಮಯಣವನ್ನು ದಪ್ಪವಾಗಿ ಲೇಪಿಸುವುದು. ಒಮ್ಮೆ ಲೇಪಿಸಿದರೆ ಹಲವು ಗಂಟೆ ಕಾಲ ಲೇಪ ಬಿಗಿಯಾಗಿರುವುದು. ಆಗಾಗ ಲೇಪನ ಬೇಡ. ಬಾವು ಆರುವುದು ಯಾ ಸಣ್ಣದಾಗಿ ಸೋರಿ ಹೋಗುವುದು.

**ಸೂಚನೆ:** ಲೇಪಿಸುವಾಗ ಸೋರು ಮುಖ ಬಿಟ್ಟು ಬಿಡಬೇಕು. 1–2 ದಿನ.

# ಸೇವೆ

ಲೇ ॥ ಎಂ. ಶಂಕರ

ಸೇವೆ ಸ್ವಾರ್ಥರಹಿತವಾಗಿದ್ದಾಗ ಹೆಚ್ಚಿನ ಮೌಲ್ಯ ಪಡೆಯುತ್ತದೆ. ಸೇವೆಗೆ ಅತಿಶ್ರೇಷ್ಠ ಉದಾಹರಣೆ ಎಂದರೆ ಅಮ್ಮ ಮಗುವಿಗೆ ನೀಡುವ ಆರೈಕೆ. ಇದರಲ್ಲಿ ಯಾವ ಸ್ವಾರ್ಥವೂ ಇಲ್ಲ. ಪ್ರೀತಿ ಮತ್ತು ಕರ್ತವ್ಯಗಳ ಸಮ್ಮಿಶ್ರಣ ಇದು. ಈ ರೀತಿ ಸೇವೆ ಮಾಡುವುದು ಅಷ್ಟು ಸುಲಭವಲ್ಲ. ಮನುಷ್ಯನಿಗಿಂತ ಹೊರತಾದ – ನದಿ ಹರಿಯುವುದು, ಪರರ ಸೇವೆಗಾಗಿಯೇ ಮೋಡ ಮಳೆ ಸುರಿಸುವುದು, ಸೂರ್ಯ ಬೆಳಕನ್ನು ನೀಡುವುದು, ಗಾಳಿ ಹರಿದಾಡುವುದು, ಮರ ನೆರಳನ್ನು ಕೊಡುವುದು, ಫಲ ನೀಡುವುದು, ಎಲ್ಲವೂ ಪರರಿಗೆ ಮಾಡುವ ನಿಸ್ವಾರ್ಥ ಸೇವೆಯೇ. ಆದರೆ ಮನುಷ್ಯ ಜೀವಿಯು ಇಂತಹ ಎತ್ತರಕ್ಕೇರುವುದು ಸುಲಭ ಸಾಧ್ಯವಿಲ್ಲ. ಆದರೂ ಅದೆಷ್ಟೋ ಮಂದಿ ಏನೂ ಪ್ರತಿಫಲದ ಅಪೇಕ್ಷೆ ಇಲ್ಲದೆ ಸೇವೆ ಮಾಡುವವರು ಇದ್ದಾರೆ. ಅತಿವೃಷ್ಟಿ ನಡೆದ ಈ ದಿನಗಳಲ್ಲಿ ಅಂತಹವರ ಸೇವೆ ಸಮಾಜಕ್ಕೆ ಪ್ರತಿಫಲಿಸಿದೆ. ಕೆಲವೊಮ್ಮೆ ಇತರ ಯಾವುದೇ ವ್ಯವಸ್ಥೆ ಇಲ್ಲದಿದ್ದಾಗ ದುಡ್ಡು ಪಡೆದು ಉಪಕಾರ ಮಾಡಿದರೂ ಲಾಭದ ಉದ್ದೇಶ ಇಲ್ಲದಿದ್ದಾಗ ಸೇವೆ ಎನಿಸುತ್ತದೆ. ಸರಕಾರಿ ಬಸ್, ರೇಲ್ವೇ ಸೇವೆಗಳು ಇಂತಹ ವ್ಯವಸ್ಥೆಗಳಿಂದ ಲಾಭದ ಉದ್ದೇಶ ಇಲ್ಲ. ಕೇವಲ ಜನರಿಗೆ ಉಪಕಾರವಾಗಬೇಕೆಂಬುದೇ ಧ್ಯೇಯವಾಗಿರುತ್ತದೆ. ಪ್ರತಿಫಲ ಅಪೇಕ್ಷೆ ಇಲ್ಲದೆ ಮಾಡುವ, ಪ್ರತಿಫಲವಿದ್ದರೂ ಜನೋಪಕಾರವೇ ಪ್ರಧಾನವಾಗಿರುವ ಲಾಭದ ಉದ್ದೇಶವಿಲ್ಲದ ಸೇವೆಗಳೂ ಆದರಣೀಯವಾಗಬಲ್ಲವು. ಅವಕಾಶ ಸಿಕ್ಕಾಗ ಅಗತ್ಯ ಉಳ್ಳವರಿಗೆ ಮಾಡುವ ಪ್ರತಿಯೊಂದು ಸಣ್ಣ ಅಥವಾ ದೊಡ್ಡ ಉಪಕಾರವೂ ಸೇವೆಯಾಗಬಲ್ಲದು. ಸಮಾಜ ಪರಸ್ಪರರಿಗಾಗಿ ಬದುಕಬೇಕು. ಇನ್ನೊಬ್ಬರ ಕಷ್ಟದಲ್ಲಿ ಕರಗುವ ಅಂತಃಕರಣವಾಗಬೇಕು. ಮಾನವೀಯತೆಯು ಮೆರೆಯಬೇಕು. ಸೇವೆ ಸ್ವಾರ್ಥರಹಿತವಾಗಿರಬೇಕು. ಇದರಿಂದ ವ್ಯಕ್ತಿ ಎತ್ತರಕ್ಕೇರಬಲ್ಲ. ಶ್ರೀಕ್ಷೇತ್ರ ಬಂಗಾರಮಕ್ಕಿಯಲ್ಲಿ ಸೇವೆ ಮಾಡುವ ಕೈಗಳು ಪುನೀತವಾಗಲಿ, ಅವರವರ ಬದುಕು ಬಂಗಾರವಾಗಲಿ, ಸಹಸ್ರಾರು ಭಕ್ತರಿಗೆ ಮಾದರಿಯಾಗಲಿ. ಜೈ ಶ್ರೀರಾಮ.




ಸುಮಾರು 17–18 ವರ್ಷದಿಂದ ಶ್ರೀಕ್ಷೇತ್ರದಲ್ಲಿ ಸೇವೆಯ ವ್ರತವನ್ನು ಆಚರಿಸುತ್ತಿರುವ ಶ್ರೀಮತಿ ಜಯಲಕ್ಷ್ಮೀ ಮನೋಹರ, ಇವರು ಶ್ರೀ ವೀರಾಂಜನೇಯ ದೇವರ ಪರಮ ಭಕ್ತರಾಗಿದ್ದು ತಮ್ಮ ಸಂಘಟನೆಯಲ್ಲಿ ಸಾವಿರ ಸಾವಿರ ಜನರನ್ನು ಕ್ಷೇತ್ರದ ಸೇವೆಗೆ ಕರೆತಂದು ನಿಸ್ವಾರ್ಥ ಸೇವೆಯ ಮೂಲಕ ಅವರ ಸಮಸ್ಯೆಗಳನ್ನು ವೀರಾಂಜನೇಯನ ಕೃಪೆಯಿಂದ ಬಗೆಹರಿಸಿ ಎಲ್ಲರಿಗೂ ಅಪರೂಪದ ಸೇವಾಮೂರ್ತಿ ಎನಿಸಿಕೊಂಡಿದ್ದಾರೆ.

ಸಂಪರ್ಕಕ್ಕಾಗಿ
ಶ್ರೀಮತಿ ಜಯಲಕ್ಷ್ಮೀ ಮನೋಹರ
9845970877

# 'ಯಕ್ಷಾಂಜನೇಯ ಪ್ರಶಸ್ತಿ' ಪ್ರಧಾನ ಹಾಗೂ 'ಯಕ್ಷಪೂರ್ಣಿಮೆ-2019'ರ ಸಮಾರೋಪ

ದಿನಾಂಕ 29-09-2019ರಂದು ಸೆಲೆಕ್ಟ್ ಫೌಂಡೇಶನ್ (ರಿ.), ಶ್ರೀಕ್ಷೇತ್ರ ಬಂಗಾರಮಕ್ಕಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಾರವಾರ ಹಾಗೂ ಶ್ರೀ ವೀರಾಂಜನೇಯ ಯಕ್ಷಮಿತ್ರ ಮಂಡಳಿ (ರಿ.) ಇವರ ಸಹಯೋಗದೊಂದಿಗೆ ಯಕ್ಷಗಾನ ಪ್ರಸಂಗಗಳ ಸೇವಾ ಪ್ರದರ್ಶನವಾದ 'ಯಕ್ಷಪೂರ್ಣಿಮೆ-2019' ಉದ್ಘಾಟನೆಗೊಂಡು 15ದಿನಗಳಕಾಲ ಪ್ರತಿದಿನ ರಾತ್ರಿ 09:30ರಿಂದ ವಿವಿಧ ಪ್ರಸಂಗಗಳು ಹಲವಾರು ಕಲಾವಿದರ ಸಮಾಗಮದೊಂದಿಗೆ ಪ್ರದರ್ಶನಗೊಂಡು ಸಾವಿರಾರು ಕಲಾಭಿಮಾನಿಗಳ ಮನ ತಣಿಸಿದವು.

ದಿನಾಂಕ 29-09-2019ರಿಂದ 13-10-2019ರವರೆಗೆ ಆಯೋಜನೆಗೊಂಡಿದ್ದ 'ಯಕ್ಷಪೂರ್ಣಿಮೆ-2019' ದಿನಾಂಕ 13-10-2019ರಂದು ಸಮಾರೋಪಗೊಂಡಿತು. ಈ ವೇದಿಕೆಯಲ್ಲಿ ಶ್ರೀಕ್ಷೇತ್ರ ಬಂಗಾರಮಕ್ಕಿಯ ಧರ್ಮಾಧಿಕಾರಿಗಳಾದ ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು, ಸಿರ್ಸಿ ಶ್ರೀ ಮಾರಿಕಾಂಬಾ ದೇವಸ್ಥಾನದ ಅಧ್ಯಕ್ಷರಾದ ಡಾ॥ ವೆಂಕಟೇಶ ಎಲ್. ನಾಯ್ಕ, ವಿ.ಎಸ್. ಎಸ್. ಹೆಗ್ಗಾರ ಇದರ ನಿರ್ದೇಶಕರಾದ ಶ್ರೀ ನರಸಿಂಹ ಭಾಗ್ವತ್, ಕಂಕನಹಳ್ಳಿ ಹಾಗೂ ಖ್ಯಾತ ಯಕ್ಷಗಾನ ಕಲಾವಿದರಾದ ಶ್ರೀ ಪ್ರಭಾಕರ ಹೆಗಡೆ, ಚಿಟ್ಟಾಣಿ ದಂಪತಿಗಳು ಉಪಸ್ಥಿತರಿದ್ದರು.

ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸಲು ಶ್ರಮಿಸುತ್ತಿರುವ, ಕಲೆಯೇ ಜೀವನ ಎಂದು ಕಲಾಮಾತೆಯ ಸೇವೆ ಮಾಡುತ್ತಿರುವ ಒಬ್ಬ ಕಲಾವಿದರನ್ನು ಗುರುತಿಸಿ ಪ್ರತಿವರ್ಷವು ದಿ. ವೇ. ಮೂ. ಶ್ರೀ ಗಣೇಶ ಭಟ್ಟರ ಸ್ಮರಣಾರ್ಥ ಕು॥ ಶ್ರೀರಾಮ, ಶ್ರೀಕ್ಷೇತ್ರ ಬಂಗಾರಮಕ್ಕಿ ಇವರ ಪ್ರಾಯೋಜಕತ್ವದಲ್ಲಿ ನೀಡುತ್ತಿರುವ 'ಯಕ್ಷಾಂಜನೇಯ ಪ್ರಶಸ್ತಿ'ಯನ್ನು ಪ್ರಸ್ತುತ ಶ್ರೀ ಪ್ರಭಾಕರ ಹೆಗಡೆ, ಚಿಟ್ಟಾಣಿಯವರಿಗೆ ನೀಡಿ ಸನ್ಮಾನಿಸಲಾಯಿತು. ದಂಪತಿ ಸಮೇತರಾಗಿ ಸನ್ಮಾನ ಸ್ವೀಕರಿಸಿದ ಶ್ರೀ ಪ್ರಭಾಕರ ಹೆಗಡೆಯವರು ದಿ. ಶ್ರೀ ಗಣೇಶ ಭಟ್ಟರಿಗೆ ಯಕ್ಷಗಾನದ ಕಲೆ ಹಾಗೂ ಕಲಾವಿದರ ಬಗ್ಗೆ ಇದ್ದ ವಿಶೇಷ ಒಲವನ್ನು ಸ್ಮರಿಸಿಕೊಂಡು ಭಾವಪರವಶರಾದರು. ಅವರ ಕನಸನ್ನು ಸಾಕಾರಗೊಳಿಸಿದ ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರಿಗೆ ಹಾಗೂ ಶ್ರೀ ರಾಮಚಂದ್ರ ಭಟ್ಟರಿಗೆ ಕೃತಜ್ಞತೆ ಸಲ್ಲಿಸಿ ಇನ್ನೂ ಲಕ್ಷಾಂತರ ಕಲಾವಿದರಿಗೆ ಇಲ್ಲಿ ಅವಕಾಶ ದೊರೆಯಲಿ ಎಂದು ವೀರಾಂಜನೇಯನಲ್ಲಿ ಪ್ರಾರ್ಥಿಸಿಕೊಂಡರು.

ದೇವಸ್ಥಾನಗಳು ನಿಂತ ನೀರಾಗಬಾರದು, ದೇವಸ್ಥಾನಗಳು ಕೇವಲ ಆದಾಯದ ಕೇಂದ್ರವಾಗಬಾರದು ಈ ಉದ್ದೇಶಕ್ಕಾಗಿಯೇ ಇಂತಹ ದೀರ್ಘವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಭಕ್ತರು ಕೊಟ್ಟಿದ್ದನ್ನು ಕೇವಲ ತೆಗೆದುಕೊಳ್ಳದೆ ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಅದನ್ನು ಸಮಾಜಕ್ಕೆ ಹಿಂದಿರುಗಿಸುವ ಪ್ರಯತ್ನವೇ ಇಂತಹ ಕಾರ್ಯಕ್ರಮಗಳ ಆಯೋಜನೆ ಎಂದು ಕಾರ್ಯಕ್ರಮದ ಆಶಯವನ್ನು ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು ತಮ್ಮ ಮಾತುಗಳಲ್ಲಿ ತಿಳಿಸಿದರು.

15 ದಿನಗಳ ಕಾರ್ಯಕ್ರಮವು ಭಕ್ತಾದಿಗಳ, ಸೇವಾರ್ಥಿಗಳ, ಶುಭಕೋರುವವರ ಸಹಕಾರದಿಂದ ಯಶಸ್ವಿಗೊಂಡಿತು. ವೇದಿಕೆ ಕಾರ್ಯಕ್ರಮದ ನಂತರ ಕೊನೆಯ ಯಕ್ಷಗಾನ ಪ್ರಸಂಗದ ಪ್ರದರ್ಶನದೊಂದಿಗೆ 'ಯಕ್ಷಪೂರ್ಣಿಮೆ-2019' ಮಂಗಳವಾಯಿತು.

# ಮಕ್ಕಳ ದಿನಾಚರಣೆಯ ವರದಿ

ದಿನಾಂಕ 14/11/2019 ಗುರುವಾರದಂದು ಶ್ರೀ ಮಾರುತಿ ರೆಸಿಡೆನ್ಸಿಯಲ್ ಸ್ಕೂಲ್‌ನಲ್ಲಿ ಮಕ್ಕಳ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಶಾಲೆಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಮಾರುತಿ ಗುರೂಜಿಯವರು, ಕಾರ್ಯದರ್ಶಿಗಳಾದ ಶ್ರೀಮತಿ ಅರ್ಪಿತಾ ಗುರೂಜಿ, ಪಾಲಕಶಿಕ್ಷಕ ಸಂಘದ ಉಪಾಧ್ಯಕ್ಷರಾದ ಶ್ರೀ ನರೇಂದ್ರ ನಾಯ್ಕ, ಸದಸ್ಯರಾದ ಶ್ರೀ ಸಂತೋಷ ಪೈ, ಪ್ರಾಂಶುಪಾಲರಾದ ಶ್ರೀ ವಿಠ್ಠಲ ನಾಯ್ಕ, ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು, ವಿದ್ಯಾರ್ಥಿಗಳ ಪಾಲಕರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ವೇದಘೋಷದೊಂದಿಗೆ ಸಾಂಪ್ರದಾಯಿಕವಾಗಿ ಪ್ರಾರಂಭಿಸಲಾಯಿತು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥನಾ ಗೀತೆಯನ್ನು ಹಾಡಿದರು. ಶಾಲೆಯ ಪ್ರಾಂಶುಪಾಲರಾದ ಶ್ರೀ ವಿಠ್ಠಲ ನಾಯ್ಕ ಕಾರ್ಯಕ್ರಮಕ್ಕೆ ಆಗಮಿಸಿದ ಸರ್ವರನ್ನು ತುಂಬು ಹೃದಯದಿಂದ ಸ್ವಾಗತಿಸಿದರು. ನಂತರ ಜವಾಹರಲಾಲ ನೆಹರುರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವವನ್ನು ಸಲ್ಲಿಸಲಾಯಿತು.

ನಂತರ 2018-19 ನೇ ಶಾಲಿನಲ್ಲಿ ಹತ್ತನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕಿ ಶ್ರೀಮತಿ ಶ್ವೇತಾ ಹೆಗಡೆಯವರು ಮಾತನಾಡಿ ಮಕ್ಕಳಿಗೆ ಮಕ್ಕಳ ದಿನಾಚರಣೆಯ ಶುಭವನ್ನು ಕೋರಿ, ವಿದ್ಯಾರ್ಥಿ ಜೀವನದ ಮಹತ್ವವನ್ನು ಹೇಳಿದರು. ಶಿಕ್ಷಕಿ ಕುಮಾರಿ ಚೇತನಾ ನಾಯ್ಕರವರು ಮಕ್ಕಳ ಮುಗ್ಧತೆಯನ್ನು, ಕ್ರಿಯಾಶೀಲತೆಯನ್ನು ಬಳಸಿ ಸ್ವರಚಿತ ಕವನ ವಾಚಿಸಿದರು.



ವಾರ್ತಭಾರತಿ ಪತ್ರಿಕೆಯ ಸ್ಥಾಪಕರು -ಎ.ಎಸ್.ಪುತ್ತಗೆ

ಶಾಲೆಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಮಾರುತಿ ಗುರೂಜಿ ಮಕ್ಕಳನ್ನು ಆಶೀರ್ವದಿಸಿ, ಹಿತವಚನಗಳನ್ನು ಹೇಳಿದರು. ದೇಶಕ್ಕೆ ಮಾದರಿಯಾಗುವಂತಹ ವ್ಯಕ್ತಿತ್ವ ಪ್ರತಿಯೊಬ್ಬರಲ್ಲಿಯೂ ಮೂಡಿಬರಲಿ ಸಾಧನೆ ಮಾಡಲು ಸಾಕಷ್ಟು ಕ್ಷೇತ್ರಗಳಿವೆ ಉತ್ತಮವಾದುದನ್ನು ಶಿಕ್ಷಕರ, ಪಾಲಕರ ಮಾರ್ಗದರ್ಶನದಲ್ಲಿ ಆಯ್ಕೆ ಮಾಡಿಕೊಂಡು ಯಶಸ್ವಿಯಾಗಿ ಎಂದು ಹರಸಿದರು. ಪಾಲಕಶಿಕ್ಷಕ ಸಂಘದ ಉಪಾಧ್ಯಕ್ಷರಾದ ಶ್ರೀ ನರೇಂದ್ರ ನಾಯ್ಕರವರು ಬಾಲ್ಯದ ದಿನಗಳನ್ನು ನೆನಪಿಸಿಕೊಂಡು ಮಾತನಾಡಿ ಬಾಲ್ಯ ಜೀವನದ ಮಹತ್ವ ತಿಳಿಸಿದರು.

ಶಾಲಾ ವಿದ್ಯಾರ್ಥಿಗಳಿಂದ ವಿಭಿನ್ನವಾದ ಛದ್ಮವೇಷ ಸ್ಪರ್ಧೆ ಜರುಗಿತು. ವಿದ್ಯಾರ್ಥಿಗಳು ವಿವಿಧ ವೇಷಭೂಷಣಗಳಿಂದ ಎಲ್ಲರ ಮನರಂಜಿಸಿದರು. ವಿವಿಧ ವೇಷಗಳಲ್ಲಿ ಮಿಂಚುತ್ತಿರುವ ಮಕ್ಕಳನ್ನು ಕಂಡು ಪಾಲಕರು ಆನಂದಪಟ್ಟರು. ನಂತರ ಶಿಕ್ಷಕಿಯರು ಸುಮಧುರವಾದ ಹಾಡಿನಮೂಲಕ ಮಕ್ಕಳನ್ನು ರಂಜಿಸಿದರು.

ಮಕ್ಕಳಿಗೂ ಸೇರಿದಂತೆ ಭಾಗವಹಿಸಿದವರೆಲ್ಲರಿಗೂ ಸಿಹಿ ಹಂಚಲಾಯಿತು. ಈ ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕಿಯರಾದ ಕುಮಾರಿ ಪವಿತ್ರಾ ನಾಯ್ಕ ಮತ್ತು ಕುಮಾರಿ ಮಮತಾ ಅನಿಲಗೋಡ ನಿರ್ವಹಿಸಿದರು.

# ಪದಬಂಧ–50

–ಶ್ರೀ ಗುರು ದಾಸ.

**ಎಡದಿಂದ ಬಲಕ್ಕೆ :–**

1. ಮೈಮುರಿದು ಕುಣಿಯುವ ನವಿಲು –3
3. ತಪಸ್ವಿಗಳಿಗೆಂದೆ ನಿರ್ಮಾಣಗೊಂಡ ವನ –4
5. ಅಶಾಶ್ವತವಾದ ಸಮಯ –3
6. ಕರಮುಗಿದರಿಗೆ ತೋರಿದ ದಯೆ –3
8. ವೀರಾಂಜನೇಯನೊಲಿಯುವನು ಈ ನಾಮಕೆ –4
10. ಅಬ್ಬಾ! ತಪ್ಪಿಸಿಕೊಂಡೆ –2
11. ಹರಿಹರನ ಪುತ್ರ –4
13. ಅವಳು ರೋಧಿಸುತ್ತಿದ್ದಾಳೆ –2
14. ಆ ಮರ ಶಾಶ್ವತವಾಗಿದೆ –3
15. ವೃತ್ತದೊಂದಿಗೆ ಅದರ ಸುತ್ತಳತೆ –5
16. ಖಜಾಂಚಿ ಅಥವಾ ಹಣಕಾಸಿನ ತಜ್ಞ –4

| | | | | | | | |
|---|---|---|---|---|---|---|---|
| 1 | | 2 | ■ | 3 | | 4 | |
| | ■ | 5 | | | ■ | | ■ |
| 6 | 7 | | ■ | 8 | | | 9 |
| ■ | | ■ | 10 | | ■ | ■ | |
| 11 | | 12 | | ■ | ■ | 13 | |
| | ■ | | ■ | 14 | | | ■ |
| 15 | | | | | ■ | | ■ |
| | ■ | | ■ | 16 | | | |

**ಮೇಲಿಂದ ಕೆಳಕ್ಕೆ :–**

1. ತಿರುಕನನ್ನು ನೋಡಿ ಉಂಟಾದ ಅನುಕಂಪ –3
2. ಆಸ್ತಿ–ಪಾಸ್ತಿ, ಜೀವಕ್ಕೆ ಹಾನಿಯಾಗದಂತೆ ಕಾಪಾಡುವುದು–3
3. ತರ್ಕಬದ್ಧವಾಗಿ ಮಾಡಿದ ಆಕ್ಷೇಪಣೆ –4
4. ಕೊಟ್ಟ ಭರವಸೆಯ ಮಾತು ಸಾಹಿತ್ಯದಲ್ಲೂ ಇದ್ದು ಕೊನೆಯಲ್ಲಿ ದೀರ್ಘವಾಗಿದೆ – 3
7. ಶ್ರೀ ಕೃಷ್ಣನ ಪ್ರಮುಖ ರಾಣಿಯರಲ್ಲೊಬ್ಬರು –3
9. ಹಿಂತಿರುಗಿ ಬಾರೆಂದು ಕೇಳಿಕೊಳ್ಳುವೆ –3
10. ಶಾಲೆಯಲ್ಲಿ ಕಲಿತದ್ದು –2
11. ಬೃಹದಾಕಾರದ ಮರ –4
12. ಛಂದಸ್ಸಿಗನುಗುಣವಾಗಿರುವ ನಾಲ್ಕುಸಾಲುಗಳ ಪದ್ಯ –4
13. ಗಿಣಿಯಂತೆ ಮುಗ್ಧಳಾದ ಲಲನೆಯನ್ನು ಸಂಬೋಧಿಸಿದ ಬಗೆ –4
14. ತುಂಬಾ ಹೆಚ್ಚಾಗಿದೆ –3

**(ಉತ್ತರ ಮುಂದಿನ ಸಂಚಿಕೆಯುಲ್ಲಿ)**

ಪದಬಂಧ–49ರ ಉತ್ತರ

**ಎಡದಿಂದ ಬಲಕ್ಕೆ:–** 1.ಯಕ್ಷಪೂರ್ಣಿಮೆ, 4.ವಿಮೆ, 5.ರೆಟಿನಾ, 6.ದಿನಕರ, 9.ಶರ, 11.ಸಮಾನ, 13.ಜನಕ, 15.ಭರಣಿ, 17.ರಜತ, 19.ರಾಗಿಣಿ, 20.ವಜ್ರಕಾಯ, 22.ಕನಕ.

**ಮೇಲಿಂದ ಕೆಳಕ್ಕೆ:–** 1.ಯಹೂದಿ, 2.ಪೂರ್ಣಾಂಕ, 3.ಮೆರೆ, 4.ವಿನಾಶ, 7.ನವೀನ, 8.ರಸ, 10.ರಮಣಿ, 12.ನಭ, 13.ಜವರಾಯ, 14.ಕರಣಿಕ, 16.ರತಕಾ(ಕಾತರ), 18.ತವಕ, 21.ಯಜ್ಞ,



ಪ್ರಪಂಚ ಪತ್ರಿಕೆಯ ಸ್ಥಾಪಕರು –ಪಾಟೀಲ ಪುಟ್ಟಪ್ಪ